ಮಂಗಳವಾರ, ಮೇ 28, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 148 | ಪುಟ 14
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ವಯಸ್ಸಾದವರಿಗೆ ದೈಹಿಕ ಆರೋಗ್ಯದ ಜತೆಗೆ ಮಾನಸಿಕ ನೆಮ್ಮದಿಯೂ ಸಿಗುವಂತೆ ಕಾಳಜಿ ವಹಿಸಬೇಕು



ಆಳ-ಅಗಲ ವಾಹನ ಚಾಲನಾ ಪರವಾನಗಿ ನಿಯಮ ಬದಲು ಏನು, ಎತ್ತ?
ಪ್ರಣಾಳಿಕೆಯಲ್ಲಿನ ಭರವಸೆಗಳು ಭ್ರಷ್ಟಾಚಾರ ಅಲ್ಲ: 'ಸುಪ್ರೀಂ' 11
ರಾಜ್ಯದಲ್ಲಿ ಶಾಲೆಗಳ ಪುನರಾರಂಭ ನಾಳೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,390 ▼	22,932 ▼	₹74,400 (ಬೆಂಗಳೂರು) ▲	₹93,300 (ಬೆಂಗಳೂರು) ▲	83.13 ▼

ಮಾಜಿ ಎಂ.ಡಿ ಶಂಕರಪ್ಪ ಬಂಧನ

ಬೆಂಗಳೂರು: ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ (ಡಿಡಿಯುಟಿಟಿಎಲ್) ನಡೆದಿದೆ ಎನ್ನಲಾದ ₹47.10 ಕೋಟಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಮಾಜಿ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಎಸ್. ಶಂಕರಪ್ಪ ಅವರನ್ನು ಸೋಮವಾರ ಬಂಧಿಸಿದ್ದಾರೆ. 6

ವಾಲ್ಮೀಕಿ ನಿಗಮದ ಅಧೀಕ್ಷಕ ಆತ್ಮಹತ್ಯೆ

ಶಿವಮೊಗ್ಗ: ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಬೆಂಗಳೂರು ಕಚೇರಿಯಲ್ಲಿ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಚಂದ್ರಶೇಖರ್ ಪಿ. (52) ಅವರು ಇಲ್ಲಿನ ವಿನೋಬ ನಗರದ ಕೆಂಚಪ್ಪ ಲೇಔಟ್ ಬಳಿಯಿರುವ ತಮ್ಮ ನಿವಾಸದಲ್ಲಿ ಭಾನುವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 6

ಬಿಎಸ್‌ವೈ ವಿರುದ್ಧ ದೂರು ನೀಡಿದ್ದ ಮಹಿಳೆ ಸಾವು 06
ಸಿ.ಎಂ, ಡಿಸಿಎಂ ಇಂದು ದೆಹಲಿಗೆ 05
ಬಿಭವ್ ಜಾಮೀನು ಅರ್ಜಿ ವಜಾ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ



ರೀಮಲ್: 2 ಲಕ್ಷ ಜನ ಅತಂತ್ರ

ಪಶ್ಚಿಮ ಬಂಗಾಳದಲ್ಲಿ 6, ನೆರೆಯ ಬಾಂಗ್ಲಾದಲ್ಲಿ 10 ಸಾವು ● ಭಾರಿ ಹಾನಿ

ಕೋಲ್ಕತ್ತ (ಪಿಟಿಐ/ರಾಯಿಟರ್ಸ್): ಬಂಗಾಳ ಕೊಲ್ಲಿಯಲ್ಲಿ ಕಾಣಿಸಿಕೊಂಡಿರುವ 'ರೀಮಲ್' ಚಂಡಮಾರುತವು ಪಶ್ಚಿಮ ಬಂಗಾಳದ ಕರಾವಳಿ ಪ್ರದೇಶ ಹಾಗೂ ನೆರೆಯ ಬಾಂಗ್ಲಾ ದೇಶದಲ್ಲಿ ಭಾರಿ ಹಾನಿ ಉಂಟು ಮಾಡಿದೆ. 16 ಮಂದಿ ಮೃತಪಟ್ಟಿದ್ದಾರೆ.

'ಪಶ್ಚಿಮ ಬಂಗಾಳದಲ್ಲಿ ಆರು ಮಂದಿ ಸತ್ತಿದ್ದಾರೆ. 2.07 ಲಕ್ಷ ಜನ ಅತಂತ್ರರಾಗಿದ್ದಾರೆ. ಗಾಳಿಯ ವೇಗ ಗಂಟೆಗೆ 135 ಕಿ.ಮೀ. ಇದ್ದು, 15 ಸಾವಿರ ಮನೆಗಳು ಜಖಂಗೊಂಡಿವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೆರೆಯ ಬಾಂಗ್ಲಾದಲ್ಲಿ 10 ಮಂದಿ ಸತ್ತಿದ್ದಾರೆ. ಅಲ್ಲಿನ ಕರಾವಳಿ ಭಾಗದ ಬಹುತೇಕ ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಸುಮಾರು 15 ಲಕ್ಷ ಜನರಿಗೆ ಸಮಸ್ಯೆಯಾಗಿದೆ ಎಂದು ಆ ದೇಶದ ಪ್ರಾಕೃತಿಕ ವಿಕೋಪ ನಿರ್ವಹಣಾ ಮುಖ್ಯಸ್ಥ ಮಿಜಾನುರ್ ರೆಹಮಾನ್ ತಿಳಿಸಿದ್ದಾರೆ.

5ನೇ ಪುಟ ನೋಡಿ



ಚಂಡಮಾರುತದಿಂದಾಗಿ ಬಾಂಗ್ಲಾದೇಶದ ಕರಾವಳಿ ಭಾಗದಲ್ಲಿ ಭಾರಿ ಮಳೆ ಮತ್ತು ಬಿರುಗಾಳಿಯಿಂದಾಗಿ ಕುಕಾಟ ಸಮುದ್ರ ತೀರದಲ್ಲಿ ತೆಂಗಿನ ಮರಗಳು ಬಾಗಿದ್ದವು
–ಎಎಫ್‌ಪಿ ಚಿತ್ರ

ವಿದ್ಯುತ್ ವ್ಯತ್ಯಯ: 1.5 ಕೋಟಿ ಜನರಿಗೆ ಸಮಸ್ಯೆ

ಢಾಕಾ (ಪಿಟಿಐ): ಚಂಡಮಾರುತ 'ರೀಮಲ್'ನಿಂದಾಗಿ ಬಾಂಗ್ಲಾದ ಕರಾವಳಿ ಪ್ರದೇಶದಲ್ಲಿ ತೀವ್ರ ಹಾನಿಯಾಗಿದೆ. ಗಾಳಿಯ ವೇಗ ಆರಂಭದಲ್ಲಿ ಗಂಟೆಗೆ 120 ಕಿ.ಮೀ ಇದ್ದು, ನೂರಾರು ಗ್ರಾಮಗಳಲ್ಲಿ ಜನಜೀವನ ಮತ್ತು ವಿದ್ಯುತ್ ಸಂಪರ್ಕ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

5ನೇ ಪುಟ ನೋಡಿ

ತುರ್ತು ಕ್ರಮಗಳಿಂದಾಗಿ ಚಂಡಮಾರುತದ ಹಾನಿ ಕಡಿಮೆಯಾಗಿದೆ. ಬಾಧಿತರಿಗೆ ತಕ್ಷಣದಲ್ಲಿ ಅಗತ್ಯ ನೆರವು, ಪರಿಹಾರ ಒದಗಿಸಲಾಗುವುದು

ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ, ಪಶ್ಚಿಮ ಬಂಗಾಳ

ಚಂಡಮಾರುತದ ಹಾದಿ

- ಪಶ್ಚಿಮ ಬಂಗಾಳ, ಬಾಂಗ್ಲಾದೇಶದ ಕರಾವಳಿ ಭಾಗದಲ್ಲಿ ಅಪ್ಪಳಿಸಿದ ಚಂಡಮಾರುತ
- ಮಂಗಳವಾರ ಈಶಾನ್ಯ ದಿಕ್ಕಿನತ್ತ ಸಾಗುವ ಅಂದಾಜು
- ಸೋಮವಾರ ಇದ್ದ ಗಾಳಿಯ ವೇಗ ಗಂಟೆಗೆ 111ರಿಂದ 150 ಕಿ.ಮೀ.
- ಮಂಗಳವಾರ ಗಾಳಿಯ ವೇಗ ಗಂಟೆಗೆ 60–90 ಕಿ.ಮೀಗೆ ತಗ್ಗುವ ನಿರೀಕ್ಷೆ

ಲೈಂಗಿಕ ದೌರ್ಜನ್ಯ ಪ್ರಕರಣ ● ವಿದೇಶದಿಂದ ವಿಡಿಯೊ ಬಿಡುಗಡೆಗೊಳಿಸಿದ ಆರೋಪಿ

31ರಂದು ಹಾಜರು: ಪ್ರಜ್ವಲ್ ರೇವಣ್ಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನನ್ನ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ (ವಿಶೇಷ ತನಿಖಾ ತಂಡ) ಅಧಿಕಾರಿಗಳ ಎದುರು 31ರಂದು ವಿಚಾರಣೆಗೆ ಹಾಜರಾಗುತ್ತೇನೆ' ಎಂದು ಪ್ರಕರಣದ ಪ್ರಮುಖ ಆರೋಪಿ ಸಂಸದ ಪ್ರಜ್ವಲ್ ರೇವಣ್ಣ ತಿಳಿಸಿದ್ದಾರೆ.

ರಾಜ್ಯದಲ್ಲಿ ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ ಮುಗಿಯುತ್ತಿದ್ದಂತೆ (ಏಪ್ರಿಲ್ 26) ದೇಶ ತೊರೆದು ತಲೆಮರೆಸಿಕೊಂಡಿರುವ ಪ್ರಜ್ವಲ್ ರೇವಣ್ಣ ಅಜ್ಞಾತ ಸ್ಥಳದಿಂದ ಸೋಮವಾರ ವಿಡಿಯೊ ಬಿಡುಗಡೆ ಮಾಡಿದ್ದು, ಪ್ರಕರಣದ ಬಗ್ಗೆ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ.

'ನನ್ನ ತಂದೆ- ತಾಯಿ, ತಾತನಿಗೆ ಹಾಗೂ ಕುಮಾರಣ್ಣನಿಗೆ ಕ್ಷಮೆ ಕೇಳುತ್ತೇನೆ. ನಾನು, ವಿದೇಶದಲ್ಲಿ ಎಲ್ಲಿ ಇದ್ದೇನೆ ಎಂಬ ಬಗ್ಗೆ ಮಾಹಿತಿ ನೀಡಲು ಬಂದಿದ್ದೇನೆ' ಎಂದು ಪ್ರಜ್ವಲ್ ವಿಡಿಯೊದಲ್ಲಿ ತಿಳಿಸಿದ್ದಾರೆ.

6ನೇ ಪುಟ ನೋಡಿ

ವಿಳಾಸ ಪತ್ತೆಗಾಗಿ ಎಸ್‌ಐಟಿ ತನಿಖೆ

ಪ್ರಜ್ವಲ್ ವಿಡಿಯೊ ಬಗ್ಗೆ ಮಾಹಿತಿ ಪಡೆದುಕೊಂಡಿರುವ ಎಸ್‌ಐಟಿ ಅಧಿಕಾರಿಗಳು, ಯಾವ ಸ್ಥಳದಿಂದ ವಿಡಿಯೊ ಮಾಡಲಾಗಿದೆ ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಿದ್ದಾರೆ.

'ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಪ್ರಕರಣದ ಆರೋಪಿಯಾಗಿರುವ ಪ್ರಜ್ವಲ್ ರೇವಣ್ಣ ಅವರ ವಿಡಿಯೊ ಗಮನಿಸಲಾಗಿದೆ. ಅವರ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಜಾರಿ ಮಾಡಿದೆ. ಜೊತೆಗೆ, ಬಂಧನಕ್ಕೂ ನ್ಯಾಯಾಲಯದಿಂದ ವಾರಂಟ್ ಜಾರಿಯಾಗಿದೆ. ವಿಡಿಯೊ ಬಗ್ಗೆ ಇಂಟರ್‌ಪೋಲ್ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿದ್ದು, ನಿಖರ ಸ್ಥಳ ಪತ್ತೆಗೂ ಕ್ರಮ ಕೈಗೊಳ್ಳಲಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಭವಾನಿ ಜಾಮೀನು ಅರ್ಜಿ: ಪ್ರಾಸಿಕ್ಯೂಷನ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿನ ಸಂತ್ರಸ್ತೆಯೊಬ್ಬರ ಅಪಹರಣದ ಆರೋಪದಡಿ ಭವಾನಿ ರೇವಣ್ಣ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸುವಂತೆ ಎಸ್‌ಐಟಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಸಂಬಂಧ ಪ್ರಜ್ವಲ್ ರೇವಣ್ಣ ಅವರ ತಾಯಿಯೂ ಆದ ಭವಾನಿ ರೇವಣ್ಣ ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ (ಸಿಸಿಎಚ್–82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಸೋಮವಾರ ವಿಚಾರಣೆ ನಡೆಸಿದರು.

'ಮಧ್ಯಂತರ ಮತ್ತು ನಿಗದಿತ (ರೆಗ್ಯುಲರ್) ಜಾಮೀನು ಅರ್ಜಿಗೆ ಆಕ್ಷೇಪಣೆ ಸಲ್ಲಿಸಿ' ಎಂದು ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಾಧೀಶರು ವಿಚಾರಣೆಯನ್ನು ಮಂಗಳವಾರಕ್ಕೆ (ಮೇ 28) ಮುಂದೂಡಿದ್ದಾರೆ.

ಪ್ರಕರಣವೇನು?: 'ಸಂತ್ರಸ್ತ ಮಹಿಳೆಯನ್ನು ಅಪಹರಿಸಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಲಂ 364ಎ, 365 ಮತ್ತು 34 ಅಡಿ ಎಫ್‌ಐಆರ್ ದಾಖಲಿಸಲಾಗಿದೆ. ಇದರಲ್ಲಿ ಭವಾನಿಯವರ ಪತಿ ಎಚ್.ಡಿ.ರೇವಣ್ಣ ಮೊದಲ ಆರೋಪಿಯಾಗಿದ್ದರೆ ಸತೀಶ ಬಾಬಣ್ಣ ಎರಡನೇ ಆರೋಪಿಯಾಗಿದ್ದಾರೆ. ಈ ಪ್ರಕರಣದಲ್ಲಿ ಭವಾನಿ ಅವರು ಜಾಮೀನು ಕೋರಿದ್ದಾರೆ.

'ಹಾಸನ ಚಲೋ'ಗೆ 'ನಾವೆದ್ದು ನಿಲ್ಲದಿದ್ದರೆ' ವೇದಿಕೆ ಬೆಂಬಲ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣದ ಸಮರ್ಪಕ ತನಿಖೆಗೆ ಒತ್ತಾಯಿಸಿ ಮೇ 30 ರಂದು ಹಾಸನದಲ್ಲಿ ನಡೆಯಲಿರುವ 'ಹಾಸನದೆಡೆಗೆ ನಮ್ಮ ನಡಿಗೆ' – ಹಾಸನ ಚಲೋ ಹೋರಾಟಕ್ಕೆ 'ನಾವೆದ್ದು ನಿಲ್ಲದಿದ್ದರೆ' ವೇದಿಕೆ ಬೆಂಬಲ ವ್ಯಕ್ತಪಡಿಸಿದೆ ಎಂದು ಸಂಘಟನೆಯ ಸದಸ್ಯೆ ಅಕ್ಕೈ ಪದ್ಮಶಾಲಿ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಾಸನದಲ್ಲಿ ನಡೆಯುತ್ತಿರುವ ಈ ಪ್ರತಿಭಟನೆಯಲ್ಲಿ ರಾಜ್ಯದಾದ್ಯಂತ ಮಹಿಳಾ, ದಲಿತ, ಕಾರ್ಮಿಕ, ರೈತ, ವಿದ್ಯಾರ್ಥಿ, ಯುವಜನರ, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ, ಲಿಂಗತ್ವ ಅಲ್ಪಸಂಖ್ಯಾತರ, ಆದಿವಾಸಿಗಳು ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ. ರಾಜ್ಯ ಮತ್ತು ದೇಶದ ಬೇರೆ ಭಾಗಗಳಿಂದಲೂ ಚಿಂತಕರು, ಬರಹಗಾರರು, ಕಲಾವಿದರು, ನಿವೃತ್ತ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಭಾಗ ವಹಿಸಲಿದ್ದಾರೆ' ಎಂದು ವಿವರಿಸಿದರು.

'ಪ್ರಜ್ವಲ್ ರೇವಣ್ಣನ ಲೈಂಗಿಕ ಹಿಂಸಾಚಾರಕ್ಕೆ ಬಲಿಯಾದ ಸಂತ್ರಸ್ತೆಯರಿಗೆ ಮಾನಸಿಕ ಸ್ಥೈರ್ಯ ತುಂಬುವುದು ಹಾಗೂ ಒಗ್ಗಟ್ಟಾಗಿ ಅವರ ಘನತೆಯನ್ನು ಎತ್ತಿಹಿಡಿಯುವುದು ಈ ಪ್ರತಿಭಟನೆ ಉದ್ದೇಶವಾಗಿದೆ' ಎಂದು ಹೇಳಿದರು.

'ದೇಶ ಬಿಟ್ಟು ಓಡಿ ಹೋಗಿರುವ ಆರೋಪಿಯ ರಾಜತಾಂತ್ರಿಕ ಪಾಸ್‌ಪೋರ್ಟ್, ವೀಸಾ ರದ್ದುಪಡಿಸಬೇಕು. ಆತನ ಬ್ಯಾಂಕ್ ಖಾತೆ ಸ್ಥಗಿತಗೊಳಿಸಬೇಕು. ಆರೋಪಿಯನ್ನು ಬಂಧಿಸಲು ಸಾಧ್ಯವಾಗುವಂತೆ ರಾಜ್ಯ ಸರ್ಕಾರಕ್ಕೆ ಕೇಂದ್ರ ನೆರವಾಗಬೇಕು' ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈತ್ರಿ ಕೃಷ್ಣನ್, ಕೆ.ಎಸ್.ವಿಮಲಾ, ಮಮತಾ ಯಜಮಾನ್, ಅಖಿಲಾ ವಿದ್ಯಾಸಂದ್ರ, ಮಲ್ಲಿಗೆ ಸಿರಿಮನೆ ಉಪಸ್ಥಿತರಿದ್ದರು.

ರಿಚರ್ಡ್‌ಗೆ 'ಸೂರ್ಯಮಿತ್ರ' ಪ್ರಶಸ್ತಿ

'ನವೀಕರಿಸಬಹುದಾದ ಇಂಧನ ಉತ್ಪಾದನೆ ಹೆಚ್ಚಿದರೆ ದೇಶದ ಅಭಿವೃದ್ಧಿ ಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಲ್ಕೊ ಸಂಸ್ಥೆ ಕೊಡಮಾಡುವ ಅಂತರರಾಷ್ಟ್ರೀಯ 'ಸೂರ್ಯ ಮಿತ್ರ' ವಾರ್ಷಿಕ ಪ್ರಶಸ್ತಿಯನ್ನು ಅಮೆರಿಕದ ರಿಚರ್ಡ್ ಹ್ಯಾನ್ಸೆನ್ ಅವರಿಗೆ ಸೋಮವಾರ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಯಿತು.

ರಿಚರ್ಡ್ ಅವರು ಅಭಿವೃದ್ಧಿಶೀಲ ರಾಷ್ಟ್ರಗಳ ಗ್ರಾಮೀಣ ಪ್ರದೇಶಗಳಲ್ಲಿ ಸೌರವಿದ್ಯುತ್ ಸೌಲಭ್ಯವನ್ನು ಹೆಚ್ಚಿಸಲು ಪ್ರಯತ್ನಿಸಿದ್ದವರು. ಅಲ್ಲದೇ ಆಧುನಿಕ ಫೋಟೊ ವೋಲ್ಟಾಯಿಕ್(ಪಿವಿ) ತಂತ್ರಜ್ಞಾನವನ್ನು ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಮೂಲಕ ಬೆಸೆದು ಅದರ ಮಹತ್ವವನ್ನು ಸಾರುವಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದರು. ಈ ಸಾಧನೆಯನ್ನು ಪರಿಗಣಿಸಿ ಪ್ರಶಸ್ತಿಯನ್ನು ಅವರಿಗೆ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಪ್ರದಾನ ಮಾಡಿದ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರು ಮಾತನಾಡಿ, 'ಸೂರ್ಯನ ಶಕ್ತಿಯೇ ಅಗಾಧವಾದ ಸಂಪನ್ಮೂಲ. ಹಿಂದೆ ಸೌರಶಕ್ತಿಯನ್ನು ಬಳಕೆ ಮಾಡಿಕೊಳ್ಳುವುದು ಕಡಿಮೆ ಇತ್ತು. ತಂತ್ರಜ್ಞಾನ ಬೆಳೆದಂತೆ ಸೌರ ಶಕ್ತಿಯ ಬಳಕೆ ಈಗ ಹೆಚ್ಚಾಗುತ್ತಿದೆ. ಸೌರ ಶಕ್ತಿ ಹಾಗೂ ಪವನ ಶಕ್ತಿ ಬಳಕೆ ಹೆಚ್ಚಿದಲ್ಲಿ ಯಾವುದೇ ದೇಶವು ಅಭಿವೃದ್ಧಿ ಆಗಲಿದೆ' ಎಂದು ಹೇಳಿದರು.

'ಸೆಲ್ಕೊ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯನ್ನೂ ಪಾಲುದಾರರು ಎಂದೇ ಪರಿಗಣಿಸಿರುವುದು ಉತ್ತಮ ಬೆಳವಣಿಗೆ' ಎಂದು ಹೇಳಿದರು.



ಸೌರಶಕ್ತಿ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿದ ಅಮೆರಿಕದ ರಿಚರ್ಡ್ ಹ್ಯಾನ್ಸೆನ್ ಅವರಿಗೆ ನಗರದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಸೆಲ್ಕೊ ಸಂಸ್ಥೆಯ 'ಸೂರ್ಯಮಿತ್ರ' ಪ್ರಶಸ್ತಿ ಪ್ರದಾನ ಮಾಡಲಾಯಿತು. (ಎಡದಿಂದ) ಕ್ರೆಡೆಲ್‌ನ ವ್ಯವಸ್ಥಾಪಕ ನಿರ್ದೇಶಕ ರುದ್ರಪ್ಪಯ್ಯ, ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್, ಸೆಲ್ಕೊ ಫೌಂಡೇಷನ್ ಸಿಇಒ ಹರೀಶ್ ಹಂದೆ ಮತ್ತು ಸೆಲ್ಕೊ ಇಂಡಿಯಾದ ನಿರ್ದೇಶಕಿ ಎಲಿನಾ ಕ್ಯಾಸಲೋರಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಮಾತನಾಡಿ, 'ಗ್ರಾಮೀಣ ಪ್ರದೇಶದ ಬಡತನ ನಿರ್ಮೂಲನೆ ಹಾಗೂ ಬೆಳಕು ನೀಡುವಲ್ಲಿ ಸೆಲ್ಕೊ ಸಂಸ್ಥೆ ಶ್ರಮಿಸುತ್ತಿದೆ. ನವೀಕರಿಸಬಹುದಾದ ಇಂಧನ ಬಳಕೆಯಲ್ಲಿ ದೇಶವು ನಾಲ್ಕನೇ ಸ್ಥಾನದಲ್ಲಿದೆ. ರಾಜ್ಯದಲ್ಲೂ ನವೀಕರಿಸಬಹುದಾದ ಇಂಧನ ಬಳಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ' ಎಂದು ಹೇಳಿದರು.

ಸೆಲ್ಕೊ ಇಂಡಿಯಾದ ಸಿಇಒ ಮೋಹನ್ ಭಾಸ್ಕರ್ ಹೆಗಡೆ ಮಾತನಾಡಿ, 'ಕಳೆದ 30 ವರ್ಷದಿಂದ ಸೆಲ್ಕೊ ಸಂಸ್ಥೆಯು ಬೆಳಕು ಮೂಡಿಸುವ ಹಾಗೂ ಬದುಕು ರೂಪಿಸುವ ಕೆಲಸ ಮಾಡುತ್ತಿದೆ. ಸೌರ ಶಕ್ತಿ ಕ್ಷೇತ್ರದಲ್ಲಿ ಇತ್ತೀಚೆಗೆ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿವೆ' ಎಂದು ಹೇಳಿದರು.

'ಸಂಸ್ಥೆಯು 2012ರಿಂದಲೂ ಸುಸ್ಥಿರ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡಿದ ಸಾಧಕರು ಹಾಗೂ ಗ್ರಾಮೀಣ ಜನರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತಂದ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಗೆ ಈ ವಾರ್ಷಿಕ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಿದೆ' ಎಂದರು.

ಪ್ರಶಸ್ತಿ ಸ್ವೀಕರಿಸಿದ ರಿಚರ್ಡ್ ಹ್ಯಾನ್ಸೆನ್ ಅವರು ಅಮೆರಿಕ ಸೇರಿ ವಿವಿಧ ರಾಷ್ಟ್ರಗಳ ಗ್ರಾಮೀಣ ಪ್ರದೇಶದಲ್ಲಿ ಸೌರ ವಿದ್ಯುತ್ ಸೌಲಭ್ಯ ಹೆಚ್ಚಿಸಿದ ಬಗೆ ಹಾಗೂ ತಂತ್ರಜ್ಞಾನಗಳ ಬೆಳವಣಿಗೆ, ಕೋವಿಡ್–19 ಸಂದರ್ಭದಲ್ಲಿ ಆದ ಬಿಕ್ಕಟ್ಟು ಹಾಗೂ 1993ರಲ್ಲಿ ರಿಚರ್ಡ್ ಸೋಲುಜ್ ಇಂಕ್ ಸಂಸ್ಥೆ ಸ್ಥಾಪಿಸಿ ಗ್ರಾಮೀಣ ಪ್ರದೇಶಕ್ಕೆ ನೆರವಾದ ಬಗೆಯನ್ನು ವಿವರಿಸಿದರು.

ಇದಕ್ಕೂ ಮೊದಲು ಅಸ್ಸಾಂ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

110 ಹಳ್ಳಿಗಳಿಗೆ ಕಾವೇರಿ ನೀರು 'ಹೈಡ್ರೊ ಟೆಸ್ಟ್' ಆರಂಭ

ಪ್ರಜಾವಾಣಿ ವಾರ್ತೆ

ಜಲಮಂಡಳಿ ಸುದ್ದಿ

ಬೆಂಗಳೂರು: ಕಾವೇರಿ 5ನೇ ಹಂತದ ಯೋಜನೆ ಅಂತಿಮಘಟ್ಟ ತಲುಪಿದ್ದು, 110 ಹಳ್ಳಿಗಳಿಗೆ ನೀರು ಪೂರೈಸಲು 'ಹೈಡ್ರೊ ಟೆಸ್ಟ್' ಅನ್ನು ಜಲಮಂಡಳಿ ಆರಂಭಿಸಿದೆ.

ಈ ಪರೀಕ್ಷೆ ಮುಗಿದ ಮೇಲೆ, ಯೋಜನೆಗೆ ಹಣಕಾಸು ಒದಗಿಸುತ್ತಿರುವ ಜಪಾನ್ ಅಂತರರಾಷ್ಟ್ರೀಯ ಸಹಕಾರ ಏಜೆನ್ಸಿ (ಜೆಐಸಿಎ) ಪರಿಶೀಲನೆ ನಡೆಸಲಿದೆ. ಜೂನ್ ಮಧ್ಯಭಾಗದಲ್ಲಿ ನೀರು ಸರಬರಾಜು ಮಾಡುವ ಉದ್ದೇಶ ಹೊಂದಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

2016ರಲ್ಲಿ ಯೋಜನೆಗೆ ಅನುಮೋದನೆ ದೊರೆತಿದ್ದು, ಕೋವಿಡ್‌ನಿಂದ ಕಾಮಗಾರಿ ವಿಳಂಬವಾಯಿತು. ಕಾವೇರಿ 5ನೇ ಹಂತದ ಯೋಜನೆಯಲ್ಲಿ 775 ಎಂಎಲ್ ನೀರನ್ನು 2,800 ಕಿ.ಮೀ ಕೊಳವೆ ಮಾರ್ಗದಲ್ಲಿ ಜಲಮಂಡಳಿ ಪೂರೈಸಲಿದೆ.

ಸಮೀಕ್ಷೆ: 'ನಗರದಲ್ಲಿ ಎಷ್ಟು ಮಂದಿ ನಾಗರಿಕರು ಸಂಪೂರ್ಣವಾಗಿ ಕಾವೇರಿ ನೀರಿನ ಮೇಲೆ ಅವಲಂಬಿತರಾಗಿದ್ದಾರೆ ಎಂಬ ಸಮೀಕ್ಷೆ ನಡೆಸಲಾಗುವುದು' ಎಂದು ರಾಮ್‌ಪ್ರಸಾತ್ ತಿಳಿಸಿದರು.

'ಎಷ್ಟು ಸಂಪರ್ಕಗಳಿವೆ, ಎಷ್ಟು ನೀರು ಬಳಕೆಯಾಗುತ್ತಿದೆ ಎಂಬ ಮಾಹಿತಿ ಇದೆ. ಅವರೆಲ್ಲರೂ ಕಾವೇರಿ ನೀರನ್ನೇ ಅವಲಂಬಿಸಿದ್ದಾರೆಯೇ? ಗೃಹ ಬಳಕೆಯ ಕೊಳವೆಬಾವಿಗಳೆಷ್ಟು? ಎಂಬ ಮಾಹಿತಿಯನ್ನು ಪಡೆಯಲಾಗುವುದು' ಎಂದರು.

'ಈ ಸಮೀಕ್ಷೆ ಮುಂದಿನ ದಿನಗಳಲ್ಲಿ ಸಂಕಷ್ಟವನ್ನು ನಿರ್ವಹಿಸಲು ನೆರವಾಗಲಿದೆ. ಎಐ–ಆಧಾರಿತ ವ್ಯವಸ್ಥೆಯನ್ನು ನೀರು ಪೂರೈಕೆಯಲ್ಲಿ ಅಳವಡಿಸಿಕೊಳ್ಳಲೂ ಈ ಸಮೀಕ್ಷೆಯಿಂದ ಹೊರಬರುವ ದತ್ತಾಂಶ ನೆರವಾಗಲಿದೆ' ಎಂದು ತಿಳಿಸಿದರು.

ದಂಡ ಅಭಿಯಾನ: ಮಳೆನೀರನ್ನು ನೇರವಾಗಿ ಒಳಚರಂಡಿಗೆ ಸೇರಿಸಿರುವವರ ಮೇಲೆ 'ದಂಡ ಅಭಿಯಾನ' ನಡೆಸಲು ಜಲಮಂಡಳಿಯು ನಿರ್ಧರಿಸಿದೆ.

ಮಳೆ ನೀರು ಸಂಗ್ರಹ ಪದ್ಧತಿಯ ಅಳವಡಿಕೆಯ ಮೂಲಕ ನೀರಿನ ಸದ್ಬಳಕೆ ಕಡ್ಡಾಯವಾಗಿದೆ. ಹಲವಾರು ಕಡೆಗಳಲ್ಲಿ ಮಳೆನೀರನ್ನು ನೇರವಾಗಿ ಒಳಚರಂಡಿಗೆ ಬಿಡಲಾಗುತ್ತಿದೆ. ಇದರಿಂದ ಒಳಚರಂಡಿ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಮಳೆ ನೀರು ಇಂಗಿಸುವುದನ್ನು ಪ್ರೋತ್ಸಾಹಿಸಬೇಕು. ಹೀಗಾಗಿ, ಒಳಚರಂಡಿಗೆ ಮಳೆ ನೀರು ಹರಿಸುವವರಿಗೆ ದಂಡ ವಿಧಿಸಿ ಎಂದು ಅಧಿಕಾರಿಗಳಿಗೆ ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ಸೂಚಿಸಿದರು.

ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸೇವಾ ಕೇಂದ್ರಗಳ ವ್ಯಾಪ್ತಿಯಲ್ಲಿ ಒಳಚರಂಡಿಗೆ ಮಳೆನೀರನ್ನು ನೇರವಾಗಿ ಹರಿಸುತ್ತಿರುವ ಬಗ್ಗೆ ಸಮೀಕ್ಷೆ ಮಾಡಬೇಕು. ಇಂತಹ ಸಂಪರ್ಕವನ್ನು ತಡೆಗಟ್ಟಬೇಕು. ಕ್ರಮ ಕೈಗೊಳ್ಳಬೇಕು ಎಂದರು.

ಕ್ರೀಡಾ ಕೋಟಾ: ಭೌತಿಕ ಪರಿಶೀಲನೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೀಡಾ ಕೋಟಾದಲ್ಲಿ ವೃತ್ತಿಪರ ಕೋರ್ಸ್‌ಗಳಿಗೆ ಸೀಟು ಪಡೆಯುವವರು ದಾಖಲೆಗಳ ಭೌತಿಕ ಪರಿಶೀಲನೆಗೆ ಹಾಜರಾಗುವ ಅಗತ್ಯವಿಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಪ್ರತಿ ಕ್ರೀಡೆಗೆ ಕ್ರೀಡಾ ಇಲಾಖೆ ನಿಗದಿಪಡಿಸಿದ ಶೇಕಡವಾರು ಅಂಕಗಳ ಮಾನದಂಡದ ಆಧಾರದಲ್ಲೇ ಅಭ್ಯರ್ಥಿಗಳು ಸಲ್ಲಿಸಿದ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಲಾಗುತ್ತಿದೆ. ಸುಮಾರು 96 ವಿವಿಧ ಕ್ರೀಡೆಗಳಿಗೆ ಶೇ 5ರಿಂದ ಶೇ 100ರವರೆಗೆ ವಿಭಿನ್ನ ಅಂಕಗಳನ್ನು ನಿಗದಿ ಮಾಡಲಾಗಿದೆ. ಉದಾಹರಣೆಗೆ, ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ, ಪ್ಯಾರಾ ಒಲಿಂಪಿಕ್ ಸಮಿತಿಯಿಂದ ಚಿನ್ನದ ಪದಕ ವಿಜೇತರು ಶೇ 100, ಬೆಳ್ಳಿಗೆ ಶೇ 99 ಹಾಗೂ ಕಂಚಿಗೆ ಶೇ 98 ನಿಗದಿ ಮಾಡಲಾಗಿದೆ ಎಂದು ಕೆಇಎ ಹೇಳಿದೆ.

ಸುಧಾ ಮಯೂರ ಓದಿ

ಜೂನ್ 30ಕ್ಕೆ ಮುಗಿಯಲಿರುವ ಎರಡನೇ ಗಡುವು; ಅಂತಿಮ ಹಂತ ತಲುಪದ ಐದು ಯೋಜನೆಗಳು

ಸ್ಮಾರ್ಟ್ ಸಿಟಿ: ಮುಗಿಯಲು ಬೇಕಿನ್ನೂ ಸಮಯ

• ಆರ್. ಮಂಜುನಾಥ್

ಬೆಂಗಳೂರು: 'ಬೆಂಗಳೂರು ಸ್ಮಾರ್ಟ್ ಸಿಟಿ' ಯೋಜನೆಗಳನ್ನು ಮುಗಿಸಲು ನೀಡಲಾಗಿದ್ದ ಎರಡನೇ ವಿಸ್ತರಣೆ ಗಡುವು ಮುಗಿಯುತ್ತಿದ್ದರೂ ಎಲ್ಲ ಕಾಮಗಾರಿಗಳು ಪೂರ್ಣಗೊಂಡಿಲ್ಲ. ಯೋಜಿತ ಕಾಮಗಾರಿಗಳೆಲ್ಲವೂ ಅನುಷ್ಠಾನವಾಗಲು ಇನ್ನೂ ಒಂದು ವರ್ಷವಾದರೂ ಬೇಕು.

ಕೇಂದ್ರ ಸರ್ಕಾರದ ಮೂಲ ಆಶಯದಂತೆ 'ಸ್ಮಾರ್ಟ್ ಸಿಟಿ' ಯೋಜನೆ 2022ರ ಜೂನ್ 30ರಂದೇ ಮುಗಿಯಬೇಕಿತ್ತು. ಕೋವಿಡ್ ಕಾರಣ ನೀಡಿ ಒಂದೂವರೆ ವರ್ಷ ಅವಧಿಯನ್ನು ವಿಸ್ತರಿಸಲಾಗಿತ್ತು. ಆ ಸಮಯಕ್ಕೂ ಕಾಮಗಾರಿ ಮುಗಿಯದ ಕಾರಣ, ಈ ವರ್ಷದ ಜೂನ್ 30ರವರೆಗೆ ಗುಡುವು ನೀಡಲಾಗಿದೆ. ಆದರೆ, 'ಬೆಂಗಳೂರು ಸ್ಮಾರ್ಟ್ ಸಿಟಿ' ಯೋಜನೆಯ ಇನ್ನೂ ಐದು ಕಾಮಗಾರಿಗಳು ಅಂತಿಮ ಹಂತ ತಲುಪಿಲ್ಲ. ಬಹು ಅಂತಸ್ತಿನ ಕಾರು ಪಾರ್ಕಿಂಗ್ ಕಟ್ಟಡವಂತೂ ಇನ್ನೂ 'ಫೌಂಡೇಷನ್' ಹಂತದಲ್ಲಿದೆ.

'ಸ್ಮಾರ್ಟ್ ಸಿಟಿ'ಯಲ್ಲಿ ಒಟ್ಟು 46 ಯೋಜನೆಗಳಿದ್ದು, ಇದರಲ್ಲಿ ಈಗಾಗಲೇ ಶೇ 88ರಷ್ಟು ಹಣವನ್ನೂ ಗುತ್ತಿಗೆದಾರರಿಗೆ ಬಿಡುಗಡೆ ಮಾಡಲಾಗಿದೆ. 41 ಯೋಜನೆಗಳು ಮುಗಿದಿವೆ ಎಂದು 'ಸ್ಮಾರ್ಟ್ ಸಿಟಿ' ಅಧಿಕಾರಿಗಳು ಹೇಳುತ್ತಿದ್ದರೂ, ಇದರಲ್ಲೂ ಏಳು ಯೋಜನೆಗಳಿಗೆ ಇನ್ನೂ ಪೂರ್ಣ ಹಣ ಬಿಡುಗಡೆಯಾಗಿಲ್ಲ. ಟೆಂಡರ್‌ಶ್ಯೂರ್ ರಸ್ತೆ ಯೋಜನೆಯಲ್ಲಿ ಅವೆನ್ಯೂ ರಸ್ತೆ ಕಾಮಗಾರಿ ಕಳೆದ ವರ್ಷವಿದ್ದ ಸ್ಥಿತಿಯಲ್ಲೇ ಇದೆ. ಜಲಮಂಡಳಿ ನಡುವೆ 'ಸ್ಮಾರ್ಟ್ ಸಿಟಿ' ಕಂಪನಿ ಸಮನ್ವಯ ಸಾಧಿಸಲಾಗದೆ ಕಾಮಗಾರಿ ಮುಂದುವರಿದಿಲ್ಲ. ಜನರಿಗೆ ನಿತ್ಯವೂ ಇಲ್ಲಿ ಸಂಕಷ್ಟ ಎದುರಾಗುತ್ತಿದೆ.

ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಸಭಾಂಗಣ ನಿರ್ಮಿಸುವ ಕಾರ್ಯಕ್ಕೆ ಬಹುತೇಕ ಹಣ ಬಿಡುಗಡೆಯಾಗಿದ್ದರೂ ಕಾಮಗಾರಿ ಇನ್ನೂ ಅಂತಿಮ ಹಂತಕ್ಕೆ ತಲುಪಿಲ್ಲ. ಈ ಸಭಾಂಗಣಕ್ಕೆ ಪೀಠೋಪಕರಣಗಳನ್ನು ಒದಗಿಸಲೂ ಹಣ ಬಿಡುಗಡೆ ಆಗಿದೆ. ಸಭಾಂಗಣ ಇನ್ನೂ ಕೆಲವು ತಿಂಗಳು ಕಾರ್ಯನಿರ್ವಹಿಸುವ ಲಕ್ಷಣಗಳಿಲ್ಲ.

ಕೆ.ಆರ್. ಮಾರುಕಟ್ಟೆಯ ಆರ್ಥಿಕ ಕೇಂದ್ರದ ಮರುಅಭಿವೃದ್ಧಿ ಅವುಗಳ ಗಾಜುಗಳನ್ನು ಬದಲಾಯಿಸಿರುವುದಕ್ಕಷ್ಟೇ ಸೀಮಿತವಾಗಿದೆ. ಎಲೆಕ್ಟ್ರಿಕಲ್ ಕಾಮಗಾರಿ ನಡೆಯುತ್ತಲೇ ಇದೆ. ₹40 ಕೋಟಿಯ ಕಾಮಗಾರಿಗೆ ₹30 ಕೋಟಿ ಈಗಾಗಲೇ ಬಿಡುಗಡೆಯಾಗಿದ್ದರೂ, ಅಲ್ಲಿ ನಿರ್ಮಾಣವಾಗುತ್ತಿರುವ ಸಬ್‌ವೇ, ಒಂದು ವರ್ಷದಿಂದಲೂ ಇದ್ದ ಸ್ಥಿತಿಯಲ್ಲೇ ಇದೆ. ಮಾಂಸ ಮಾರುಕಟ್ಟೆ ಕಾಮಗಾರಿ ಪ್ರಗತಿ ಆಮೆಗತಿಯಲ್ಲಿ ಸಾಗಿದೆ. ಮಾರುಕಟ್ಟೆ ಅಭಿವೃದ್ಧಿ ಕಾಮಗಾರಿಗಳ ಕುಂಠಿತಕ್ಕೆ ಸ್ಥಳೀಯರ ಪ್ರತಿರೋಧವೂ ಕಾರಣ ಎನ್ನಲಾಗಿದೆ.

ಇನ್ನೂ, ಬಹುತೇಕ ಯೋಜನೆಯನ್ನು ಕೈಬಿಟ್ಟಿದ್ದ ಗಾಂಧಿಬಜಾರ್‌ನಲ್ಲಿನ ಬಹು ಅಂತಸ್ತಿನ ಕಾರು ನಿಲುಗಡೆ ಕಟ್ಟಡದ (ಎಂಎಲ್‌ಸಿಪಿ) ಕಾಮಗಾರಿಯನ್ನು 'ಸ್ಮಾರ್ಟ್ ಸಿಟಿ' ಇತ್ತೀಚೆಗಷ್ಟೇ ಆರಂಭಿಸಿದೆ. 'ಫೌಂಡೇಷನ್' ಹಾಕಲಾಗಿದ್ದು, ಪಿಲ್ಲರ್‌ಗಳಿಗೆ ಕಂಬಿಗಳನ್ನು ಇದೀಗ ಕಟ್ಟಲಾಗುತ್ತಿದೆ. ಈ ಕಾಮಗಾರಿಯನ್ನು ಶರವೇಗದಲ್ಲಿ ನಡೆಸಿದರೂ ಮುಗಿಯಲು ವರ್ಷವಾದರೂ ಬೇಕು ಎಂದು ನಿರ್ಮಾಣಗಾರರು ಹೇಳಿದರು.

ಸ್ಮಾರ್ಟ್ ಸಿಟಿ ಯೋಜನೆಗೆ ಬೆಂಗಳೂರು ಆಯ್ಕೆ	28ನೇ ಜೂನ್ 2017
ಸರ್ಕಾರಿ ಆದೇಶ	7ನೇ ಅಕ್ಟೋಬರ್ 2017
ಸಾರ್ವಜನಿಕ ಕಂಪನಿ ನೋಂದಣಿ	3ನೇ ಜನವರಿ 2018
ಕಾಮಗಾರಿ ಮುಗಿಸಬೇಕಿದ್ದ ದಿನ	30ನೇ ಜೂನ್ 2022
1ನೇ ವಿಸ್ತರಣೆ ಅವಧಿ	30ನೇ ಜೂನ್ 2023
2ನೇ ವಿಸ್ತರಣೆ ಅವಧಿ	30ನೇ ಜೂನ್ 2024

ಯಾವ ಕ್ಷೇತ್ರಗಳಲ್ಲಿ 'ಸ್ಮಾರ್ಟ್ ಸಿಟಿ'ಯಿಂದ ಎಷ್ಟು ವೆಚ್ಚ? (ಕೋಟಿಗಳಲ್ಲಿ)

₹436	₹147.33	₹135	₹80.48	₹67	₹40	₹12.50	₹11.67
ರಸ್ತೆ	ಕಟ್ಟಡಗಳು	ಐಟಿ	ಆರೋಗ್ಯ	ಇ–ಮೊಬಿಲಿಟಿ	ಉದ್ಯಾನ	ಇತರೆ	ಶಿಕ್ಷಣ


46 ಒಟ್ಟು ಯೋಜನೆಗಳು | 41 ಪೂರ್ಣಗೊಂಡ ಕಾಮಗಾರಿಗಳು | 5 ಬಾಕಿ ಯೋಜನೆ



₹145.09 ಕೋಟಿ ಪ್ರಗತಿಯಲ್ಲಿರುವ ಕಾಮಗಾರಿಗಳ ಮೌಲ್ಯ

₹712.4 ಕೋಟಿ ಪೂರ್ಣಗೊಂಡ ಕಾಮಗಾರಿಗಳ ಮೊತ್ತ

₹924.32 ಕೋಟಿ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳ ವೆಚ್ಚ



'ಸ್ಮಾರ್ಟ್ ಸಿಟಿ'ಯಿಂದ ಗಾಂಧಿಬಜಾರ್‌ನಲ್ಲಿ ಆರು ಅಂತಸ್ತಿನ ಕಾರು ನಿಲುಗಡೆ ಕಟ್ಟಡ ನಿರ್ಮಾಣ ಕಾಮಗಾರಿ ನೆಲ ಅಂತಸ್ತಿನಲ್ಲಿದೆ

ಪ್ರಗತಿಯಲ್ಲಿರುವ ಕಾಮಗಾರಿಗಳು

ಕಾಮಗಾರಿ	ವೆಚ್ಚ (ಕೋಟಿಗಳಲ್ಲಿ)	ಆರ್ಥಿಕ ಪ್ರಗತಿ (ಕೋಟಿಗಳಲ್ಲಿ)
ಸ್ಮಾರ್ಟ್ ಟೆಂಡರ್‌ಶ್ಯೂರ್ ರಸ್ತೆ • ಅವೆನ್ಯೂ ರಸ್ತೆ– ಮೈಸೂರು ಬ್ಯಾಂಕ್ ವೃತ್ತ • ರೀನಸ್ ಸ್ಟ್ರೀಟ್– ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆಯಿಂದ ಲ್ಯಾಂಗ್‌ಫರ್ಡ್ ರಸ್ತೆ	₹34.21	₹26.18
• ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಸಭಾಂಗಣ ಬ್ಲಾಕ್	₹42	₹36.82
• ಕೆ.ಆರ್. ಮಾರುಕಟ್ಟೆ– ಮಾಂಸ ಮಾರುಕಟ್ಟೆ ಮರುಅಭಿವೃದ್ಧಿ	₹6.70	₹2.88
• ಕೆ.ಆರ್. ಮಾರುಕಟ್ಟೆ– ಆರ್ಥಿಕ ಕೇಂದ್ರದ ಮರುಅಭಿವೃದ್ಧಿ	₹40.05	₹34.41
• ಗಾಂಧಿಬಜಾರ್‌ನಲ್ಲಿ ಬಹುಅಂತಸ್ತಿನ ಕಾರು ನಿಲುಗಡೆ ಕಟ್ಟಡ	₹22.13	₹6.25

'ಎಲ್ಲ ಕಾಮಗಾರಿ ಮುಗಿಯಲಿದೆ'

'ಐದು ಯೋಜನೆಗಳು ಮಾತ್ರ ಬಾಕಿ ಉಳಿದಿದ್ದು, ಇದರಲ್ಲಿ ನಾಲ್ಕು ಯೋಜನೆಗಳನ್ನು ಇನ್ನೊಂದು ತಿಂಗಳಲ್ಲಿ ಮುಗಿಸಲಿದ್ದೇವೆ. ಕೆ.ಆರ್. ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಎರಡೂ ಕಾಮಗಾರಿಗಳು ಅಂತಿಮ ಹಂತದಲ್ಲಿವೆ. ಅವೆನ್ಯೂ ರಸ್ತೆಯಲ್ಲಿ ಜಲಮಂಡಳಿಯ ಕಾಮಗಾರಿಯಿಂದ ನಮ್ಮ ಯೋಜನೆ ವಿಳಂಬವಾಗಿದೆ. ಇನ್ನೊಂದು ತಿಂಗಳಲ್ಲಿ ಅದೂ ಮುಗಿಯಲಿದೆ' ಎಂದು 'ಬೆಂಗಳೂರು ಸ್ಮಾರ್ಟ್ ಸಿಟಿ' ಯೋಜನೆಯ ವ್ಯವಸ್ಥಾಪಕ ನಿರ್ದೇಶಕರಾದ ಎನ್. ಸುಶೀಲಮ್ಮ ತಿಳಿಸಿದರು.

'ಬಿಬಿಎಂಪಿಯಿಂದ ಸ್ಥಳ ಹಸ್ತಾಂತರ ಹಾಗೂ ನ್ಯಾಯಾಲಯದಲ್ಲಿ ಪ್ರಕರಣವಿದ್ದುದರಿಂದ ಗಾಂಧಿಬಜಾರ್ ಕಾರು ನಿಲುಗಡೆ ಕಟ್ಟಡ ಕಾಮಗಾರಿ ವಿಳಂಬವಾಗಿ ಪ್ರಾರಂಭವಾಯಿತು. ಇನ್ನಾರು ತಿಂಗಳಲ್ಲಿ ಅದನ್ನೂ ಮುಗಿಸುತ್ತೇವೆ. 'ಬೆಂಗಳೂರು ಸ್ಮಾರ್ಟ್ ಸಿಟಿ' ಯೋಜನೆಗೆ ಕೇಂದ್ರದಿಂದ ಎಲ್ಲ ಅನುದಾನವೂ ಬಿಡುಗಡೆ ಆಗಿದೆ. ಬಹು ಅಂತಸ್ತಿನ ಕಾರು ನಿಲುಗಡೆ ಕಟ್ಟಡ(ಎಂಎಲ್‌ಸಿಪಿ) ಮಾತ್ರ ವಿಳಂಬವಾಗುತ್ತದೆ ಎಂದು ಕೇಂದ್ರಕ್ಕೂ ಪತ್ರ ಬರೆಯಲಾಗಿದೆ ' ಎಂದು ಮಾಹಿತಿ ನೀಡಿದರು.

'ಬಿಬಿಎಂಪಿಗೆ ಶಿಕ್ಷಕರು: ಸಚಿವ ಸಂಪುಟದಲ್ಲಿ ನಿರ್ಧಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ಇಲಾಖೆಯ ಎಸ್‌ಡಿಎಂಸಿ ಮೂಲಕ ಬಿಬಿಎಂಪಿ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ವಿಚಾರ ಸಚಿವ ಸಂಪುಟದ ಮುಂದಿದ್ದು, ಅಲ್ಲಿನ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಡಿಟೆಕ್ಟೀವ್, ಸೆಕ್ಯುರಿಟಿ ಏಜೆನ್ಸಿಗಳಿಂದ ಶಿಕ್ಷಕರನ್ನು ಹೊರಗುತ್ತಿಗೆಯಲ್ಲಿ ಪಾಲಿಕೆಗೆ ತೆಗೆದುಕೊಳ್ಳುವ ಬಗ್ಗೆ ಸೋಮವಾರ ಪ್ರತಿಕ್ರಿಯಿಸಿದ ತುಷಾರ್ ಗಿರಿನಾಥ್, 'ಏಜೆನ್ಸಿ ಬದಲು ಎಸ್‌ಡಿಎಂಸಿ ಮೂಲಕ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಯೋಜಿಸಲಾಗಿತ್ತು. ಇದು ಆಗಬಹುದು, ಆಗದೆ ಇರಬಹುದು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇದರ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ' ಎಂದು ತಿಳಿಸಿದರು.

'ಏಜೆನ್ಸಿಗಳ ಹೆಸರು ಡಿಟೆಕ್ಟೀವ್, ಸೆಕ್ಯುರಿಟಿ ಎಂದಿದೆ ಅಷ್ಟೇ. ಅವರು ಲಭ್ಯವಿರುವ ಶಿಕ್ಷಕರನ್ನೇ ಅವರ ಅರ್ಹತೆಯ ಆಧಾರದಲ್ಲಿ ಬಿಬಿಎಂಪಿಗೆ ಒದಗಿಸುತ್ತಿದ್ದಾರೆ. ನಮ್ಮಲ್ಲಿ ಹಲವು ವರ್ಷಗಳಿಂದ ಶಿಕ್ಷಕರಾಗಿರುವವರೇ ಬೇರೆಬೇರೆ ಏಜೆನ್ಸಿಗಳಿಂದ ಇಲ್ಲಿಗೆ ಬಂದು ಕೆಲಸ ಮಾಡುತ್ತಿದ್ದಾರೆ. ಏಜೆನ್ಸಿ ಹೆಸರು ಮಾತ್ರ ಡಿಕೆಕ್ಟೀವ್ ಇದೆ. ಶಿಕ್ಷಕರು ಮಾತ್ರ ಅವರೇ' ಎಂದು ಸಮಜಾಯಿಷಿ ನೀಡಿದರು.

'ಶಿಕ್ಷಕರ ನೇಮಕ ಮಾಡಲು ಮಧ್ಯವರ್ತಿ ಬೇಕಾಗಿಲ್ಲ ಎಂಬ ಕಾನೂನು ಇದೆ. ನಾವು ನೇರವಾಗಿ ನೇಮಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಬಿಬಿಎಂಪಿ ವಿಚಾರದಲ್ಲೂ ಎಸ್‌ಡಿಎಂಸಿ ಮೂಲಕ ಮಾಡಬೇಕು. ಅದಾದರೆ ಏಜೆನ್ಸಿಗಳನ್ನು ರದ್ದು ಮಾಡುತ್ತೇವೆ' ಎಂದು ಹೇಳಿದರು.

ಬಹುಮಹಡಿ ಪಾರ್ಕಿಂಗ್ ಕಟ್ಟಡ ಸಾರ್ವಜನಿಕ ಬಳಕೆಗೆ ಕ್ರಮ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಯಶವಂತಪುರ ಎಪಿಎಂಸಿ ಆವರಣದಲ್ಲಿ ನಿರ್ಮಿಸಿರುವ ಬಹುಮಹಡಿ ಪಾರ್ಕಿಂಗ್ ಕಟ್ಟಡವನ್ನು ಚುನಾವಣೆ ನೀತಿ ಸಂಹಿತೆ ಸಡಿಲಿಕೆಯಾದ ತಕ್ಷಣವೇ ಸಾರ್ವಜನಿಕರ ಬಳಕೆಗೆ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಎಪಿಎಂಸಿ ಸಮಿತಿ ಕಾರ್ಯದರ್ಶಿ ತಿಳಿಸಿದ್ದಾರೆ.

ವಾಹನ ದಟ್ಟಣೆ ನಿಯಂತ್ರಿಸಲು ಎಪಿಎಂಸಿ ನಿಧಿಯಿಂದ ₹80 ಕೋಟಿ ವೆಚ್ಚದಲ್ಲಿ ಎಲ್ಲ ಸೌಲಭ್ಯಗಳು ಇರುವ 10 ಅಂತಸ್ತಿನ ಬಹುಮಹಡಿ ಕಟ್ಟಡ ನಿರ್ಮಿಸಲಾಗಿದೆ. ಕಟ್ಟಡದಲ್ಲಿ 735 ಕಾರುಗಳು ಹಾಗೂ 110 ಬೈಕ್‌ಗಳ ನಿಲುಗಡೆಗೆ ಅವಕಾಶವಿದೆ. ಜ.1ರಂದು ಕರೆದಿದ್ದ ಟೆಂಡರ್‌ನಲ್ಲಿ ಯಾವುದೇ ಸಂಸ್ಥೆ ಅಥವಾ ಏಜೆನ್ಸಿ ಭಾಗವಹಿಸಿರಲಿಲ್ಲ. ಬಳಿಕ ಮಾ.1ರಂದು ಸಮಿತಿ ಸಭೆ ನಡೆಸಿ, ತಿಂಗಳ ಟೆಂಡರ್ ಮೊತ್ತ ನಿಗದಿಪಡಿಸಿ ಅಥವಾ ಪಾರ್ಕಿಂಗ್ ಸೇವೆಯಿಂದ ಬರುವ ಮೊತ್ತದಲ್ಲಿ ಶೇಕಡವಾರು ಆದಾಯ ಹಂಚಿಕೆ ಆಧಾರದಲ್ಲಿ ಟೆಂಡರ್ ಆಹ್ವಾನಿಸುವ ಕುರಿತು ನಿರ್ಧಾರ ಮಾಡಲಾಗಿತ್ತು. ಅಷ್ಟರಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಾಗಿದ್ದರಿಂದ ಸಾರ್ವಜನಿಕರ ಬಳಕೆಗೆ ನೀಡಲು ಸಾಧ್ಯವಾಗಿರಲಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪ್ರಜಾವಾಣಿ'ಯ ಮೇ 27ರ ಸಂಚಿಕೆಯಲ್ಲಿ 'ಬಹುಮಹಡಿ ಕಟ್ಟಡ ವ್ಯರ್ಥ' ಶೀರ್ಷಿಕೆ ಅಡಿ ವಿಶೇಷ ವರದಿ ಪ್ರಕಟವಾಗಿತ್ತು.

ಬೇಡಿಕೆ ಈಡೇರದಿದ್ದರೆ ಜೂನ್ 10ರಿಂದ ನಗರದಾದ್ಯಂತ ಕಾಮಗಾರಿ ಸ್ಥಗಿತ: ನಂದಕುಮಾರ್

ಬಿಬಿಎಂಪಿಗೆ ಗುತ್ತಿಗೆದಾರರಿಂದ ಮತ್ತೊಂದು ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂಬತ್ತು ಬೇಡಿಕೆಗಳನ್ನು ಈಡೇರಿಸಲು ಬಿಬಿಎಂಪಿ ಗುತ್ತಿಗೆದಾರರ ಸಂಘ, ಬಿಬಿಎಂಪಿಗೆ ಮತ್ತೊಂದು ಗಡುವು ನೀಡಿದೆ. ಮನವಿ ಪರಿಗಣಿಸಿ, ಈಡೇರಿಸದಿದ್ದರೆ ಜೂನ್ 10ರಿಂದ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಎಚ್ಚರಿಸಿದೆ.

ಬೇಡಿಕೆಗಳನ್ನು ಈಡೇರಿಸುವಂತೆ ಮೇ 6ರಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಸಂಘ ಮನವಿ ಸಲ್ಲಿಸಿತ್ತು. ಬೇಡಿಕೆ ಈಡೇರಿಸದಿದ್ದರೆ ಮೇ 27ರಿಂದ ಕಾಮಗಾರಿ ಸ್ಥಗಿತಗೊಳಿಸುವುದಾಗಿ ಹೇಳಿತ್ತು. ಈ ಹಿನ್ನೆಲೆಯಲ್ಲಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸಂಘದ ಪದಾಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿ, ಮತ್ತಷ್ಟು ಸಮಯ ನೀಡುವಂತೆ ಮನವಿ ಮಾಡಿದ್ದಾರೆ.

'ತುಷಾರ್ ಗಿರಿನಾಥ್ ಅವರು ನಮ್ಮ ಬೇಡಿಕೆಗಳನ್ನು ಈಡೇರಿಸಲು ಒಂದು ವಾರದ ಸಮಯ ಕೇಳಿದ್ದಾರೆ. ನಮ್ಮ ಒಂಬತ್ತೂ ಬೇಡಿಕೆಗಳನ್ನು ಈಡೇರಿಸುವ ಭರವಸೆಯನ್ನೂ ನೀಡಿದ್ದಾರೆ. ಹೀಗಾಗಿ, ಅವರಿಗೆ ಸಮಯ ನೀಡಲಾಗಿದೆ. ಜೊತೆಗೆ ಬೇಡಿಕೆ ಈಡೇರಿಸದಿದ್ದರೆ ಜೂನ್ 10ರಿಂದ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸುವುದಾಗಿಯೂ ಅವರಿಗೆ ತಿಳಿಸಿದ್ದೇವೆ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

ಬೇಡಿಕೆಗಳೇನು?:

- 25 ತಿಂಗಳಿಂದ ಬಾಕಿ ಇರುವ 10 ತಿಂಗಳ ಬಿಲ್ ಪಾವತಿಸಬೇಕು
- ಬಿಲ್‌ಗಳಲ್ಲಿ ತಡೆಹಿಡಿಯಲಾಗಿರುವ ಶೇ 25ರಷ್ಟನ್ನು ಹಣ ಪಾವತಿಸಬೇಕು
- ಗುಣಮಟ್ಟ ಭರವಸೆ ವಿಭಾಗದ ಮುಖ್ಯ ಎಂಜಿನಿಯರ್, ಎಂಜಿನಿಯರ್‌ಗಳ ಕಿರುಕುಳ ತಪ್ಪಿಸಬೇಕು
- ವಲಯ ತಾಂತ್ರಿಕ ಸಲಹೆಗಾರರು ಬಿ.ಆರ್ ದಾಖಲಿಸಲು ಪ್ರೀ ಆಡಿಟ್ ನಿರ್ವಹಿಸಬೇಕು.
- ವಲಯ ಮುಖ್ಯ ಎಂಜಿನಿಯರ್‌ಗಳ ಬದಲು ಕೇಂದ್ರ ಕಚೇರಿಯಿಂದಲೇ ಬಿಲ್ ಪಾವತಿಸಬೇಕು.
- ಟಿವಿಸಿಸಿ ವಿಭಾಗದಿಂದ ರ್‍ಯಾಂಡಮೈಸೇಷನ್ ತಪಾಸಣೆಯನ್ನು ಕೈಬಿಡಬೇಕು.
- ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ತ್ವರಿತವಾಗಿ ಬಿಲ್ ಪಾವತಿ ಮಾಡಬೇಕು.
- ₹50 ಲಕ್ಷದವರೆಗಿನ ಟೆಂಡರ್ ಅನುಮೋದನೆ ವಲಯ ಮುಖ್ಯ ಎಂಜಿನಿಯರ್ ವ್ಯಾಪ್ತಿಗೆ ನೀಡಬೇಕು
- ಕೆಆರ್‌ಐಡಿಎಲ್ ಕಾಮಗಾರಿಗಳನ್ನು ಟಿವಿಸಿಸಿಯಿಂದ ಪರಿಶೀಲಿಸುವ ಆದೇಶ ಕೈಬಿಟ್ಟು, ಬಿಲ್ ಪಾವತಿಸಬೇಕು.

ಬೇಸಿಗೆ ವಿಶೇಷ ಎಕ್ಸ್‌ಪ್ರೆಸ್ ರೈಲು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯ ರೈಲ್ವೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಿರ್ಬಂಧದ ಕಾರಣ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಕಲಬುರಗಿ ನಿಲ್ದಾಣ ನಡುವೆ 14 ಟ್ರಿಪ್‌ಗಳಿಗೆ ಸಂಚರಿಸುವ (ವಾರಕ್ಕೆ ಮೂರು ಬಾರಿ) ಬೇಸಿಗೆ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸಂಚಾರವನ್ನು ಒಂದು ತಿಂಗಳು ರದ್ದುಪಡಿಸಲಾಗಿದೆ.

ಮೇ 29ರಿಂದ ಜೂನ್ 28ರ ವರೆಗೆ ಈ ವಿಶೇಷ ರೈಲುಗಳ ಸಂಚಾರ ಇರುವುದಿಲ್ಲ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬಿಬಿಎಂಪಿ ವಲಯ ಆಯುಕ್ತರ ಮಟ್ಟದಲ್ಲಿ ಸಮಿತಿ; ಬಿಲ್ ಪಾವತಿಗೂ ಅಧಿಕಾರ

ರಸ್ತೆ ಗುಂಡಿ ಮುಚ್ಚಲು ಕಾರ್ಯಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಗುಂಡಿ ಮುಚ್ಚಲು, ಮೇಲ್ವಿಚಾರಣೆ ನಡೆಸಲು ಹಾಗೂ ಕಾಮಗಾರಿ ಅನುಷ್ಠಾನಕ್ಕಾಗಿ ವಲಯ ಮಟ್ಟದಲ್ಲಿ 'ಕಾರ್ಯಪಡೆ'ಗಳನ್ನು ರಚಿಸಲಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 12,878 ಕಿ.ಮೀ ರಸ್ತೆ ಜಾಲವಿದ್ದು, ಈ ರಸ್ತೆಗಳ ಪೈಕಿ 1,344.84 ಕಿ.ಮೀ ಉದ್ದದ ರಸ್ತೆಗಳನ್ನು ಮುಖ್ಯ ಮತ್ತು ಉಪ ಮುಖ್ಯರಸ್ತೆಗಳೆಂದು ಪರಿಗಣಿಸಲಾಗಿದೆ. ಈ ರಸ್ತೆಗಳನ್ನು ರಸ್ತೆ ಮೂಲಸೌಕರ್ಯ ಶಾಖೆಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಉಳಿಕೆ 11,533.16 ಕಿ.ಮೀ ರಸ್ತೆಗಳನ್ನು ವಲಯ ಮಟ್ಟದಲ್ಲಿ ನಿರ್ವಹಣೆ ಮಾಡಲಾಗುತ್ತಿದೆ.

ರಸ್ತೆಗಳಲ್ಲಾಗಿರುವ ಗುಂಡಿಗಳನ್ನು ಮತ್ತು ನಿಗದಿತ ಅವಧಿಯಲ್ಲಿ ನಿರ್ವಹಣೆ ಮಾಡಲು 'ವಲಯವಾರು ಕಾರ್ಯಪಡೆ' ರಚನೆ ಮಾಡುವುದು ಸೂಕ್ತವೆಂದು ತೀರ್ಮಾನಿಸಿ, ವಲಯ ಆಯುಕ್ತರ ನೇತೃತ್ವದಲ್ಲಿ ಕಾರ್ಯಪಡೆ ರಚಿಸಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಮೇ 27ರಂದು ಆದೇಶ ಹೊರಡಿಸಿದ್ದಾರೆ.

ರಸ್ತೆ ಗುಂಡಿ ಮುಚ್ಚಲು ಲಭ್ಯವಾಗುವ ಅನುದಾನದ ಅನುಮೋದನೆ, ಟೆಂಡರ್ ಅನುಮೋದನೆಯ ಅಧಿಕಾರವನ್ನು ಕಾರ್ಯಪಡೆಗೆ ನೀಡಲಾಗಿದೆ. ಕಾರ್ಯಪಡೆಯು ರಸ್ತೆ ಗುಂಡಿಗಳನ್ನು ಗುರುತಿಸುವ ಜೊತೆಗೆ, ಸಂಚಾರ ಪೊಲೀಸರು ಮತ್ತು ಸಾರ್ವಜನಿಕರಿಂದ ಬರುವ ದೂರನ್ನು ಆಧರಿಸಿ ಗುಂಡಿಗಳನ್ನು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು. ರಸ್ತೆ ಗುಂಡಿ ಮುಚ್ಚುವ ಗುತ್ತಿಗೆದಾರರ ಬಿಲ್ ಪಾವತಿಯ ಅಧಿಕಾರವನ್ನೂ ಕಾರ್ಯಪಡೆಯ ವಲಯ ಆಯುಕ್ತರಿಗೆ ನೀಡಲಾಗಿದೆ.

ಕಟ್ಟುನಿಟ್ಟಿನ ಸೂಚನೆ: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ರಸ್ತೆ ಗುಂಡಿಗಳನ್ನು ಕಾಲಮಿತಿಯೊಳಗಾಗಿ ಮುಚ್ಚಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ಪ್ರಗತಿಯಲ್ಲಿದ್ದು, ಅದಕ್ಕೆ ಮತ್ತಷ್ಟು ಚುರುಕು ನೀಡಬೇಕು. ವಾರ್ಡ್ ಎಂಜಿನಿಯರ್‌ಗಳು ರಸ್ತೆ ಗುಂಡಿಗಳನ್ನು ಪತ್ತೆಮಾಡಿ ಮುಚ್ಚಬೇಕು. ಎಲ್ಲಿಯೂ ರಸ್ತೆ ಗುಂಡಿಗಳಿರುವ ದೂರುಗಳು ಬಾರದಂತೆ ನೋಡಿಕೊಳ್ಳಬೇಕು. ಹಾಟ್ ಮಿಕ್ಸ್ ಹಾಗೂ ಕೋಲ್ಡ್ ಮಿಕ್ಸ್ ಮೂಲಕ ಹಗಲು- ರಾತ್ರಿ ರಸ್ತೆಗುಂಡಿಗಳನ್ನು ಮುಚ್ಚಬೇಕೆಂದು ಸೂಚಿಸಿದರು.

ಪ್ರಥಮ, ದ್ವಿತೀಯ ರಾಜಕಾಲುವೆಗಳಲ್ಲಿ ಸಕ್ರಿಯವಾಗಿ ಹೂಳೆತ್ತುವ ಕೆಲಸ ನಡೆಯಬೇಕು. ರಾಜಕಾಲುವೆಗೆ ತ್ಯಾಜ್ಯ ಬಿಸಾಡದಂತೆ ಸೂಕ್ತ ಕ್ರಮ ವಹಿಸಬೇಕು. ಎಲ್ಲಾ ಕಡೆ ಸ್ವಚ್ಛತೆ ಕಾಪಾಡಿ ಎಲ್ಲಿಯೂ ನೀರು ನಿಲ್ಲದೆ ಸರಾಗವಾಗಿ ಹರಿದು ಹೋಗುವಂತೆ ಮಾಡಬೇಕು ಎಂದರು.

ಪರಿಶೀಲನೆ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬರೆದ ಪತ್ರದಂತೆ ನಗರದಲ್ಲಿರುವ ಪ್ರತಿಷ್ಠಿತ ಮಾಲ್‌ಗಳು, ಮನರಂಜನಾ ಕೇಂದ್ರಗಳು ಹಾಗೂ ಇವಿ ಚಾರ್ಜಿಂಗ್ ಸ್ಟೇಷನ್‌ಗಳಲ್ಲಿ ಅಗ್ನಿ ದುರಂತ ಸೇರಿದಂತೆ ಇನ್ನಿತರೆ ಅನಾಹುತ ತಪ್ಪಿಸಲು ಕೈಗೊಂಡಿರುವ ಸುರಕ್ಷತಾ ಕ್ರಮಗಳನ್ನು ಪರಿಶೀಲನೆ ನಡೆಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಲ್ಲೆಲ್ಲಿ ಎಷ್ಟೆಷ್ಟು ರಸ್ತೆ?

ವಲಯ	ಕಿ.ಮೀ
ರಾಜರಾಜೇಶ್ವರಿನಗರ	2,072.69
ಮಹದೇವಪುರ	1,896.84
ಬೊಮ್ಮನಹಳ್ಳಿ	1,775.67
ಪೂರ್ವ	1,694.94
ದಕ್ಷಿಣ	1,528.70
ಯಲಹಂಕ	1,528.38
ಪಶ್ಚಿಮ	1,424.24
ದಾಸರಹಳ್ಳಿ	607.53
ರಸ್ತೆ ಮೂಲಸೌಕರ್ಯ	1,344.84

ವಲಯ ಕಾರ್ಯಪಡೆ ಸದಸ್ಯರು

ಅಧ್ಯಕ್ಷ– ವಲಯ ಆಯುಕ್ತ, ಸದಸ್ಯರು– ವಲಯ ಜಂಟಿ ಆಯುಕ್ತ, ವಲಯ ಮುಖ್ಯ ಎಂಜಿನಿಯರ್, ವಲಯ ಸಹಾಯಕ ಸಂಚಾರ ಪೊಲೀಸ್ ಆಯುಕ್ತ, ವಲಯದ ರಸ್ತೆ ಮೂಲಸೌಕರ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ವಲಯ ವ್ಯಾಪ್ತಿಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್. ಸದಸ್ಯ ಕಾರ್ಯದರ್ಶಿ– ವಲಯ ಆಯುಕ್ತರ ಅಡಿಯ ಹಣಕಾಸು ವಿಭಾಗದ ಸಹಾಯಕ ಉಪ ನಿಯಂತ್ರಕ.

ಕುಲಪತಿಗೆ ಪತ್ರ ಹಸ್ತಾಂತರ

ಧಾರವಾಡ: ಹುಬ್ಬಳ್ಳಿಯ ಉಣಕಲ್‌ನ ಡಾ. ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ್ ಸಂಸ್ಥೆಯನ್ನು ಮೈಸೂರಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಕಾರ್ಯ-ವ್ಯಾಪ್ತಿಗೆ ಹಸ್ತಾಂತರಿಸಿದ ಪತ್ರವನ್ನು ಸೋಮವಾರ ಕುಲಪತಿ ಪ್ರೊ.ನಾಗೇಶ ಬೆಟ್ಟಕೋಟೆ ಅವರಿಗೆ ನೀಡಲಾಯಿತು.

ಈ ಟ್ರಸ್ಟ್‌ನ ಚರ, ಸ್ಥಿರಾಸ್ತಿ ಮತ್ತು ಕಾರ್ಯಚಟುವಟಿಕೆಗಳನ್ನು ಸಂಗೀತ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವಂತೆ ಫೆಬ್ರುವರಿ 28ರಂದು ಸರ್ಕಾರ ಆದೇಶಿಸಿತ್ತು. ಅದರಂತೆ ಟ್ರಸ್ಟ್‌ನ ಆಡಳಿತ ಕಚೇರಿ, 36 ವಿದ್ಯಾರ್ಥಿ ವಸತಿ ಕೊಠಡಿಗಳು, ಆರು ಗುರು ಮನೆ, ಆರು ಸ್ಟೂಡೆಂಟ್ ಹೌಸ್ ಬ್ಲಾಕ್, ನಾಲ್ಕು ಫ್ಯಾಕಲ್ಟಿ ಹೌಸ್, ಎರಡು ಅತಿಥಿ ಗೃಹ ಹಾಗೂ ಒಂದು ಕ್ಯಾಂಟೀನ್ ಬ್ಲಾಕ್ ಕಟ್ಟಡಗಳ ದಾಖಲೆ ಸಹಿತ ಎಲ್ಲ ಆಸ್ತಿ, ಕಾರ್ಯಚಟುವಟಿಕೆ ದಾಖಲೆಗಳನ್ನು ಸಂಗೀತ ವಿಶ್ವವಿದ್ಯಾಲಯ ಕಾರ್ಯವ್ಯಾಪ್ತಿಗೆ ವಹಿಸಲಾಗಿದೆ ಎಂದು ಹಸ್ತಾಂತರ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಸುದ್ದಿ 2 ನಿಮಿಷ

ಜಿಮ್ ತರಬೇತುದಾರನ ಮೇಲೆ ಹಲ್ಲೆ: ಎಫ್‌ಐಆರ್ ದಾಖಲು

ಬೆಂಗಳೂರು: ಬನಶಂಕರಿ ಠಾಣೆ ವ್ಯಾಪ್ತಿಯಲ್ಲಿ ಜಿಮ್ ತರಬೇತುದಾರ ಪ್ರಶಾಂತ್ ಪೂಜಾರಿ ಎಂಬುವವರ ಮೇಲೆ ಹಲ್ಲೆ ನಡೆದಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಾಗಿದೆ.

'ಪ್ರಶಾಂತ್ ಪೂಜಾರಿ ಅವರು ಸಿನಿಮಾ ನಟ ಧ್ರುವ್ ಸರ್ಜಾ ಅವರಿಗೆ ಜಿಮ್ ತರಬೇತಿ ನೀಡುತ್ತಿದ್ದರು. ಪ್ರಶಾಂತ್ ಮೇಲೆ ನಡೆದಿರುವ ಹಲ್ಲೆ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪ್ರಶಾಂತ್ ಅವರು ಬನಶಂಕರಿ ಕೆ.ಆರ್. ರಸ್ತೆಯಲ್ಲಿ ಭಾನುವಾರ ರಾತ್ರಿ ನಡೆದುಕೊಂಡು ಹೊರಟಿದ್ದರು. ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿಗಳು, ಮಾರಕಾಸ್ತ್ರಗಳಿಂದ ಹೊಡೆದು ಪರಾರಿಯಾಗಿದ್ದಾರೆ. ತೀವ್ರ ಗಾಯಗೊಂಡಿದ್ದ ಪ್ರಶಾಂತ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬರುತ್ತಿರುವುದಾಗಿ ವೈದ್ಯರು ಮಾಹಿತಿ ನೀಡಿದ್ದಾರೆ' ಎಂದರು.

'ವೈಯಕ್ತಿಕ ವಿಚಾರ ಹಾಗೂ ಹಳೇ ವೈಷಮ್ಯದಿಂದಾಗಿ ಹಲ್ಲೆ ನಡೆದಿರುವ ಮಾಹಿತಿ ಇದೆ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.



ಬೇಡಿಕೆ ಈಡೇರಿಸಲು ಇಪಿಎಸ್ ಪಿಂಚಣಿದಾರರ ಪ್ರತಿಭಟನೆ

ಬೆಂಗಳೂರು: ಭತ್ಯೆ ಹಾಗೂ ವೈದ್ಯಕೀಯ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ, ರಾಷ್ಟ್ರೀಯ ಸಂಘರ್ಷ ಸಮಿತಿ, ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿಯ ಇಪಿಎಸ್ ಪಿಂಚಣಿದಾರರು ನಗರದ ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಕೆಲವೇ ದಿನಗಳಲ್ಲಿ ಲೋಕಸಭೆ ಚುನಾವಣೆ ಫಲಿತಾಂಶ ಹೊರಬಿದ್ದು ಕೇಂದ್ರದಲ್ಲಿ ನೂತನ ಸರ್ಕಾರ ಅಧಿಕಾರಕ್ಕೆ ಬರಲಿದೆ. ಇನ್ನು ಮುಂದೆ ಕೇಂದ್ರ ಸರ್ಕಾರ ಆಗಲಿ, ಇಪಿಎಫ್‌ಒ ಅಧಿಕಾರಿಗಳಾಗಲಿ ಸಬೂಬು ಹೇಳದೇ ₹7,500 ಭತ್ಯೆ ಹಾಗೂ ವೈದ್ಯಕೀಯ ಸೌಲಭ್ಯ ನೀಡಬೇಕು ಎಂದು ಆಗ್ರಹಿಸಿದರು.

ಆರ್‌ಸಿ ಗುಪ್ತ ಹಾಗೂ ಸುನಿಲ್ ಕುಮಾರ್ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತರಬೇಕು. ಇಪಿಎಸ್ ನಿವೃತ್ತರ ಹೆಚ್ಚುವರಿ ಪಿಂಚಣಿಗೆ ಸಂಬಂಧಿಸಿದಂತೆ ಇಪಿಎಫ್‌ಒ ಅಧಿಕಾರಿಗಳು ತಾವೇ ನಿಗದಿಪಡಿಸಿಕೊಂಡಿದ್ದ ಗಡುವು ಮೇ 31ಕ್ಕೆ ಮುಕ್ತಾಯ ಆಗಲಿದ್ದು ತಕ್ಷಣವೇ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದರು.

ರಾಷ್ಟ್ರೀಯ ಸಂಘರ್ಷ ಸಮಿತಿಯ ರಾಜ್ಯ ಅಧ್ಯಕ್ಷ ಜಿಎಸ್‌ಎಂ ಸ್ವಾಮಿ, ಬಿಎಂಟಿಸಿ ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಅಧ್ಯಕ್ಷ ಶಂಕರ್ ಕುಮಾರ್ ಹಾಗೂ ಕಾರ್ಯಾಧ್ಯಕ್ಷ ನಂಜುಂಡೇಗೌಡ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟ ಪ್ರಕರಣ • ವಾಹನದ ಚಾಲಕ, ಮಾಲೀಕನ ಬಂಧನ

ಹಸು ಚಿತ್ರದ ಸುಳಿವು: ಮಂಡ್ಯದಲ್ಲಿ ಆರೋಪಿಗಳು ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮಂಡ್ಯದ ತೂಬಿನಕೆರೆಯ ವಾಹನದ ಚಾಲಕ ಸುನೀಲ್ ಮತ್ತು ಮಾಲೀಕ ಸಂದೀಪ್ ಬಂಧಿತರು.

'ನಾಗರಬಾವಿಯ ಹೊರವರ್ತುಲ ರಸ್ತೆಯಲ್ಲಿ ಜನವರಿ 14ರಂದು ಅಪಘಾತ ಸಂಭವಿಸಿತ್ತು. ಬೈಕ್ ಸವಾರ ನೇಪಾಳದ ದಿನೇಶ್ ಎಂಬುವವರು ಮೃತಪಟ್ಟಿದ್ದರು. ಅಪಘಾತಕ್ಕೆ ಕಾರಣವಾಗಿದ್ದ ಸುನೀಲ್, ವಾಹನ ಸಮೇತ ಪರಾರಿಯಾಗಿದ್ದ. ತನಿಖೆ ಕೈಗೊಂಡು ಸುನೀಲ್ ಹಾಗೂ ವಾಹನದ ಮಾಲೀಕನನ್ನು ಮಂಡ್ಯದಲ್ಲಿ ಸೆರೆ ಹಿಡಿದು ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸರು ಹೇಳಿದರು.

'ಚಾಲಕ ಸುನೀಲ್, ಮದ್ಯ ಕುಡಿದು ಟ್ರಕ್ ಚಲಾಯಿಸುತ್ತಿದ್ದ. ವಾಹನದಲ್ಲಿ ಮಾಲೀಕ ಸಂದೀಪ್ ಸಹ ಇದ್ದ. ದಿನೇಶ್ ಹಾಗೂ ಸ್ನೇಹಿತ ಟಿಕಾರಾಜ್, ಬೈಕ್‌ನಲ್ಲಿ ಹೊರಟಿದ್ದರು. ಟಿಕಾರಾಜ್ ಸಹ ಮದ್ಯ ಕುಡಿದಿದ್ದ. ಈತನೇ ಬೈಕ್ ಚಲಾಯಿಸುತ್ತಿದ್ದ' ಎಂದು ತಿಳಿಸಿದರು.

'ಟಿಕಾರಾಜ್ ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಅಡ್ಡಾದಿಡ್ಡಿಯಾಗಿ ಬೈಕ್ ಚಲಾಯಿಸಿದ್ದ. ಮಾಳಗಾಳ ಮೇಲ್ಸೇತುವೆ ಬಳಿ ಬೈಕ್ ಉರುಳಿಬಿದ್ದಿತ್ತು. ಟಿಕಾರಾಜ್ ಮೇಲ್ಸೇತುವೆಯಿಂದ ಕೆಳಗಿನ ರಸ್ತೆಗೆ ಬಿದ್ದಿದ್ದ. ಹಿಂಬದಿ ಸವಾರ ದಿನೇಶ್ ಅವರು ಮೇಲ್ಸೇತುವೆಯ ರಸ್ತೆಯಲ್ಲಿಯೇ ಬಿದ್ದಿದ್ದರು.'

'ಇದೇ ಮಾರ್ಗವಾಗಿ ಸುನೀಲ್, ಟ್ರಕ್ ಚಲಾಯಿಸಿಕೊಂಡು ಹೊರಟಿದ್ದ. ರಸ್ತೆ ಮೇಲಿದ್ದ ದಿನೇಶ್ ಅವರ ಮೇಲೆಯೇ ವಾಹನ ಚಲಾಯಿಸಿದ್ದ. ಚಕ್ರ ಹರಿದು ದಿನೇಶ್ ಸ್ಥಳದಲ್ಲೇ ಮೃತಪಟ್ಟಿದ್ದರು. ಅಪಘಾತದ ಬಳಿಕ ಆರೋಪಿಗಳು ವಾಹನ ಸಮೇತ ಸ್ಥಳದಿಂದ ಪರಾರಿ ಆಗಿದ್ದರು' ಎಂದು ಹೇಳಿದರು.

ಹಸು ಚಿತ್ರದ ಸುಳಿವು: 'ಮದ್ಯ ಕುಡಿದು ವಾಹನ ಚಲಾಯಿಸಿ ದಿನೇಶ್ ಸಾವಿಗೆ ಕಾರಣವಾದ ಆರೋಪದಡಿ ಸ್ನೇಹಿತ ಟಿಕಾರಾಜ್‌ನನ್ನು ಬಂಧಿಸಲಾಗಿತ್ತು. ಆದರೆ, ಸುನೀಲ್ ಬಗ್ಗೆ ಸುಳಿವು ಸಿಕ್ಕಿರಲಿಲ್ಲ. ಅಪಘಾತ ನಡೆದ ಸ್ಥಳ ಹಾಗೂ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ಇದೇ ಸಂದರ್ಭದಲ್ಲಿ ವಾಹನದ ಮೇಲೆ ಹಸು ಚಿತ್ರವಿರುವುದು ಗಮನಕ್ಕೆ ಬಂದಿತ್ತು' ಎಂದು ತಿಳಿಸಿದರು.

'ಹಸುವಿನ ಚಿತ್ರವಿರುವ ವಾಹನದ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಿ, ನೋಂದಣಿ ಸಂಖ್ಯೆ ಪತ್ತೆ ಮಾಡಲಾಯಿತು. ಮಂಡ್ಯದ ತೂಬಿನಕೆರೆಯ ಕೈಗಾರಿಕಾ ಪ್ರದೇಶದಲ್ಲಿರುವ ಪಂಚಮುಖಿ ಫೀಡ್ಸ್ ಕಂಪನಿಗೆ ಸೇರಿದ್ದ ವಾಹನವೆಂಬುದು ತಿಳಿಯಿತು. ಕಂಪನಿಗೆ ಹೋಗಿ ವಿಚಾರಿಸಿದಾಗ, ಚಾಲಕ ಸುನೀಲ್ ಸಿಕ್ಕಿಬಿದ್ದ. ಮಾಲೀಕನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ' ಎಂದು ಹೇಳಿದರು.

ಮುಖ್ಯಾಂಶಗಳು

- ಜ. 14ರಂದು ಸಂಭವಿಸಿದ್ದ ಅಪಘಾತ
- ವಾಹನ ಸಮೇತ ಪರಾರಿಯಾಗಿದ್ದ ಆರೋಪಿಗಳು
- ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲನೆ


ಸುನೀಲ್


ಸಂದೀಪ್



ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಜಪ್ತಿ ಮಾಡಿರುವ ಈಚರ್ ಟ್ರಕ್

ಚಕ್ರಕ್ಕೆ ಅಂಟಿದ್ದ ರಕ್ತದ ಕಲೆ, ಮಾಂಸದ ತುಂಡು

'ಅಪಘಾತ ನಂತರ ಮಂಡ್ಯದ ತೂಬಿನಕೆರೆಯ ಕೈಗಾರಿಕಾ ಪ್ರದೇಶದಲ್ಲಿರುವ ಕಂಪನಿಗೆ ಹೋಗಿದ್ದ ಸುನೀಲ್, ಅಲ್ಲಿಯೇ ವಾಹನ ನಿಲ್ಲಿಸಿದ್ದ. ಅದಾದ ನಂತರ, ಯಾವುದೇ ಕಡೆಯೂ ವಾಹನ ಕೊಂಡೊಯ್ದಿರಲಿಲ್ಲ' ಎಂದು ಪೊಲೀಸರು ತಿಳಿಸಿದರು.

'ವಾಹನ ಜಪ್ತಿ ಮಾಡಿ, ಚಕ್ರಗಳನ್ನು ಪರಿಶೀಲಿಸಲಾಗಿತ್ತು. ಚಕ್ರಕ್ಕೆ ರಕ್ತದ ಕಲೆಗಳು ಹಾಗೂ ಮಾಂಸದ ತುಂಡುಗಳು ಅಂಟಿಕೊಂಡಿದ್ದು ಕಂಡುಬಂತು. ವಿಧಿ ವಿಜ್ಞಾನ ಪ್ರಯೋಗಾಲಯದ ಮೂಲಕ ಪರೀಕ್ಷಿಸಿದಾಗ, ದಿನೇಶ್ ಅವರದ್ದೇ ರಕ್ತದ ಕಲೆ ಹಾಗೂ ಮಾಂಸದ ತುಂಡುಗಳು ಎಂಬುದು ದೃಢಪಟ್ಟಿದೆ' ಎಂದು ಹೇಳಿದರು.

'ಮಾದಕದ್ರವ್ಯ ಚಟುವಟಿಕೆ ನಿಗ್ರಹಿಸದಿದ್ದರೆ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೇರೆ ಮೀರಿರುವ ಕ್ರಿಮಿನಲ್ ಚಟುವಟಿಕೆಗಳ ಬೆನ್ನಲ್ಲೇ ನಿಷೇಧಿತ ಡ್ರಗ್ಸ್ ಮಾದರಿಯ ಮಾತ್ರೆಗಳ ಮಾರಾಟದ ದಂಧೆ ಅನೇಕ ಔಷಧದ ಮಳಿಗೆಗಳಲ್ಲಿ ರಾಜಾರೋಷವಾಗಿ ನಡೆಯುತ್ತಿದೆ. ಸರ್ಕಾರ ಇದನ್ನು ಮಟ್ಟ ಹಾಕದಿದ್ದರೆ ಬೀದಿಗಿಳಿದು ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತಂತೆ 'ಪ್ರಜಾವಾಣಿ' ಪ್ರಕಟಿಸಿರುವ ವರದಿಯನ್ನು 'ಎಕ್ಸ್' ಮೂಲಕ ಹಂಚಿಕೊಂಡಿರುವ ಅವರು, ಮಾದಕ ದ್ರವ್ಯಗಳ ವಹಿವಾಟು ಸಹ ಎಗ್ಗಿಲ್ಲದೆ ನಡೆಯುತ್ತಿದೆ. ಇದರ ಪರಿಣಾಮ ಇಬ್ಬರು ಅಮಾಯಕರು ಮಾದಕದ್ರವ್ಯ ವಸನಿ ಯಿಂದ ಕೊಲೆಗೀಡಾಗಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ನಿಷ್ಕ್ರಿಯಗೊಂಡಿರುವ ಕಾನೂನು ಸುವ್ಯವಸ್ಥೆಯ ನೆರಳಿನಲ್ಲಿ ಬೆಳಕಿಗೆ ಬಾರದ ಅದೆಷ್ಟೋ ಜನರು ಮಾದಕದ್ರವ್ಯ ಜಾಲಕ್ಕೆ ಸಿಲುಕಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೋ ಎಂಬ ಆತಂಕದ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ ಎಂದಿದ್ದಾರೆ.

ಕಾಂಗ್ರೆಸ್ ಸರ್ಕಾರದ ಅಸಮರ್ಥತೆಯಿಂದಾಗಿ ಕಾಳಸಂತೆಕೋರರು, ಕೊಲೆಗಡುಕರ ಹಾಗೂ ಮಾದಕ ದ್ರವ್ಯ ಮಾಫಿಯಾದ ಚಟುವಟಿಕೆಗಳು ಸ್ವೇಚ್ಛೆಯಾಗಿ ನಡೆಯುತ್ತಿದೆ. ಸಮಾಜ ಹಾಗೂ ದೇಶದ ಭವಿಷ್ಯ ಬೆಳಗಬೇಕಾದ ವಿದ್ಯಾರ್ಥಿಗಳು, ಯುವಜನರನ್ನು ದಿಕ್ಕು ತಪ್ಪಿಸುವ ವಿದ್ರೋಹಿ ಮಾಫಿಯಾ ಶಕ್ತಿಗಳು ರಾಜ್ಯದಲ್ಲಿ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿರುವು ಕಂಡು ಬರುತ್ತಿದ್ದು, ಈ ಸರ್ಕಾರ ಪ್ರಜೆಗಳಿಗೆ ಯಾವ ಭಾಗ್ಯ ಕರುಣಿಸುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ರಕ್ಷಣೆಯ ಭಾಗ್ಯವನ್ನಾದರೂ ಕಲ್ಪಿಸಿ ನಾಗರಿಕ ಸಮಾಜದಲ್ಲಿ ಸುರಕ್ಷತಾ ಭಾವ ಮೂಡಿಸಲಿ ಎಂದು ತಿಳಿಸಿದ್ದಾರೆ.

ರೇವ್ ಪಾರ್ಟಿಗಳು ಹಾದಿ–ಬೀದಿಗಳಲ್ಲಿ ಡ್ರಗ್ಸ್ ಮಾಫಿಯಾ ಜಾಲ ಹರಡುತ್ತಿರುವುದರ ಹಾಗೂ ಕಳಪೆ ಔಷಧ ಪೂರೈಸಿ ಜನರ ಆರೋಗ್ಯದ ಜತೆ ಚೆಲ್ಲಾಟವಾಡುತ್ತಿರುವ ಜಾಲದ ವಿರುದ್ಧ ಈ ಕೂಡಲೇ ಸರ್ಕಾರ ಕಾರ್ಯಾಚರಣೆ ಆರಂಭಿಸಬೇಕು ಎಂದಿದ್ದಾರೆ.

ಓಲಾ, ಉಬರ್ ಆಟೋ ಸೇವೆ ಸರ್ಕಾರದ ಆದೇಶಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು; ಪರವಾನಗಿ ಹೊಂದಿರುವ ಸಂಸ್ಥೆಗಳಿಗೆ ಆಟೋ ರಿಕ್ಷಾ ಪ್ರಯಾಣ ದರಗಳ ಮೇಲೆ ಶೇ 5ರಷ್ಟು ಸೇವಾ ಶುಲ್ಕ ಮತ್ತು ಅನ್ವಯಿಸುವ ಸರಕು– ಸೇವಾ ತೆರಿಗೆ (ಜಿಎಸ್‌ಟಿ) ಸೇರಿಸಿ ಪ್ರಯಾಣ ದರ ನಿಗದಿಪಡಿಸಬೇಕು' ಎಂದು ನಿರ್ದೇಶಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಸರ್ಕಾರದ ಅಧಿಸೂಚನೆ ಪ್ರಶ್ನಿಸಿ 'ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ' ಮತ್ತು 'ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ' ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಜಾಗೊಳಿಸಿದೆ.

'ಅಗ್ರಿಗೇಟರ್ ಸಂಸ್ಥೆಗಳಾದ ಓಲಾ ಮತ್ತು ಉಬರ್‌ಗಳು ಸರ್ಕಾರದ ಆದೇಶದ ಪ್ರಕಾರ ಮತ್ತು ನಿಗದಿಪಡಿಸಿದ ದರದ ಮೇಲೆ ಶೇ 5ರಷ್ಟು ಸೇವಾ ಶುಲ್ಕ ಸಂಗ್ರಹಿಸಲು ಅರ್ಹವಾಗಿವೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ನಿಗದಿಗಿಂತಲೂ ಹೆಚ್ಚಿನ ದರ ವಿಧಿಸಿ ಓಲಾ ಮತ್ತು ಉಬರ್‌ಗಳು ತಮ್ಮ ಆ್ಯಪ್ ಮೂಲಕ ಆಟೋ ರಿಕ್ಷಾ ಸೇವೆ ನೀಡುತ್ತಿವೆ. ಈ ಸೇವೆಯನ್ನು ತಕ್ಷಣದಿಂದಲೇ ಸ್ಥಗಿತಗೊಳಿಸಬೇಕು' ಎಂದು ರಾಜ್ಯ ಸರ್ಕಾರ 2022ರ ನವೆಂಬರ್ 25 ರಂದು ಅಧಿಸೂಚನೆ ಹೊರಡಿಸಿತ್ತು.

'ಈ ಅಧಿಸೂಚನೆ ಸಂಪೂರ್ಣ ಕಾನೂನು ಬಾಹಿರ, ಏಕಪಕ್ಷೀಯ, ದುರುದ್ದೇಶಪೂರಿತ, ತರ್ಕಬಾಹಿರ ಮತ್ತು ಅಧಿಕಾರ ವ್ಯಾಪ್ತಿ ಮೀರಿದೆ' ಎಂದು ಆಕ್ಷೇಪಿಸಿದ್ದ ಅರ್ಜಿದಾರ ಕಂಪನಿಗಳು ಇದನ್ನು ರದ್ದುಗೊಳಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದವು.

ನಕಲಿ ದಾಖಲೆ: ಬಾಧಿತರೂ ದೂರು ದಾಖಲಿಸಲು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಕಲಿ ದಾಖಲೆ ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಎಂಬ ಬಗ್ಗೆ ಆರೋಪಗಳಿದ್ದರೆ ಬಾಧಿತ ಖಾಸಗಿ ವ್ಯಕ್ತಿಗಳೂ ಪೊಲೀಸ್ ಠಾಣೆ ಅಥವಾ ನ್ಯಾಯಾಲಯದಲ್ಲಿ ಕ್ರಿಮಿನಲ್ ದೂರು ದಾಖಲಿಸಲು ಅವಕಾಶವಿದೆ' ಎಂದು ಹೈಕೋರ್ಟ್, ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

ಸಿವಿಲ್ ದಾವೆಯೊಂದಕ್ಕೆ ಸಂಬಂಧಿಸಿದಂತೆ ತೀರ್ಥಹಳ್ಳಿ ತಾಲ್ಲೂಕಿನ ನಿವಾಸಿ ವಾಸಂತಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು: ತೀರ್ಥಹಳ್ಳಿ ತಾಲ್ಲೂಕಿನ ಗಬಡಿ ಗ್ರಾಮದ ನಿವೇಶನಕ್ಕೆ ಸಂಬಂಧಿಸಿದಂತೆ ವಾಸಂತಿ ಅವರು 2015ರಲ್ಲಿ ವಿರುದ್ಧ ಅದೇ ಗ್ರಾಮದ ಜಿ.ಡಿ.ಉಮೇಶ್ ವಿರುದ್ಧ ಸ್ಥಳೀಯ ನ್ಯಾಯಾಲಯದಲ್ಲಿ ಸಿವಿಲ್ ದಾವೆ ದಾಖಲಿಸಿದ್ದರು.

'ವಾಸಂತಿ ನ್ಯಾಯಾಲಯಕ್ಕೆ ನಕಲಿ ದಾಖಲೆಗಳನ್ನು ಸಲ್ಲಿಸಿದ್ದಾರೆ' ಎಂದು ಆರೋಪಿಸಿ ಉಮೇಶ್ ಪ್ರತ್ಯೇಕ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ಇದನ್ನು ವಿಚಾರಣೆಗೆ ಅಂಗೀಕರಿಸಿದ್ದ ಸ್ಥಳೀಯ ವಿಚಾರಣಾ ನ್ಯಾಯಾಲಯ ಸಮನ್ಸ್ ಜಾರಿಗೊಳಿಸಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ವಾಸಂತಿ, 'ನಕಲಿ ದಾಖಲೆಗಳ ವಿಚಾರದಲ್ಲಿ ಕೋರ್ಟ್‌ಗಳು ಮಾತ್ರವೇ ಕ್ರಿಮಿನಲ್ ಪ್ರಕರಣ ದಾಖಲಿಸಬಹುದೇ ಹೊರತು ಖಾಸಗಿ ವ್ಯಕ್ತಿಗಳಲ್ಲ. ಕ್ರಿಮಿನಲ್ ಪ್ರಕರಣ ದಾಖಲಿಸಲು ಉಮೇಶ್‌ಗೆ ಅಧಿಕಾರ ಇಲ್ಲ' ಎಂದು ಪ್ರತಿಪಾದಿಸಿದ್ದರು. 'ಇಷ್ಟಕ್ಕೂ 2019ರಲ್ಲಿಯೇ ನಾನು ವಿಚಾರಣಾ ನ್ಯಾಯಾಲಯದಲ್ಲಿ ಹೂಡಿದ್ದ ದಾವೆ ವಾಪಸ್ ಪಡೆದಿದ್ದೇನೆ' ಎಂದು ವಿವರಿಸಿದ್ದರು.

ಕ್ಯಾಮೆರಾ ಪುರಾವೆ: ಒಂದೇ ಠಾಣೆಯಲ್ಲಿ 1 ಲಕ್ಷ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವವರ ಪತ್ತೆಗಾಗಿ ನಗರದ ಹಲವೆಡೆ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಇವುಗಳು ಕ್ಲಿಕ್ಕಿಸುವ ಫೋಟೊಗಳನ್ನು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳುತ್ತಿದ್ದಾರೆ.

ಸದಾಶಿವನಗರದ ಸಂಚಾರ ಠಾಣೆ ವ್ಯಾಪ್ತಿಯ ಹಲವೆಡೆ ಎಫ್‌ಟಿವಿಆರ್ (ಸಂಚಾರ ನಿಯಮ ಉಲ್ಲಂಘನೆ ವರದಿ) ತಂತ್ರಜ್ಞಾನ ಆಧರಿತ ಕ್ಯಾಮೆರಾಗಳನ್ನು ಅಳಡಿಸಲಾಗಿದೆ. ಇದು ಒಂದೇ ಠಾಣೆ ವ್ಯಾಪ್ತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಪಟ್ಟಂತೆ 2024ರ ಜನವರಿಯಿಂದ ಮೇ 27ರವರೆಗೆ 1.02 ಲಕ್ಷ ಪ್ರಕರಣ ದಾಖಲಿಸಿಕೊಂಡಿರುವುದಾಗಿ ಪೊಲೀಸರು ಹೇಳಿದ್ದಾರೆ.

'ನಗರದಲ್ಲಿ ವಾಹನಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇವುಗಳ ಜೊತೆಗೆ ಸಂಚಾರ ನಿಯಮಗಳ ಉಲ್ಲಂಘನೆ ಪ್ರಮಾಣವೂ ವೃದ್ಧಿಸುತ್ತಿದೆ. ಸಂಚಾರ ನಿಯಮ ಉಲ್ಲಂಘನೆಯಿಂದಾಗಿ ಅಪಘಾತಗಳು ಸಂಭವಿಸುತ್ತಿವೆ. ಹೆಲ್ಮೆಟ್ ಧರಿಸದೇ ಸವಾರಿ, ಅತೀ ವೇಗದಲ್ಲಿ ಚಾಲನೆ, ಹೀಗೆ ಹಲವು ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ಸಂಖ್ಯೆ ಹೆಚ್ಚಾಗುತ್ತಿವೆ' ಎಂದು ಪೊಲೀಸರು ತಿಳಿಸಿದ್ದಾರೆ.

'ನಗರದಲ್ಲಿ ಸಿಬ್ಬಂದಿ ಕೊರತೆ ಇದೆ. ಪ್ರತಿಯೊಂದು ವಾಹನಗಳ ಮೇಲೆ ಕಣ್ಣಿಡಲು ಸಾಧ್ಯವಾಗುವುದಿಲ್ಲ. ಇದೇ ಕಾರಣಕ್ಕೆ ನಗರದ ಪ್ರಮುಖ ವೃತ್ತಗಳು ಹಾಗೂ ರಸ್ತೆಗಳಲ್ಲಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸಂಚಾರ ನಿಯಮ ಉಲ್ಲಂಘಿಸುವ ಸಾರ್ವಜನಿಕರ ಫೋಟೊ ಕ್ಯಾಮೆರಾದಲ್ಲಿ ಸೆರೆಯಾಗುತ್ತದೆ. ವಾಹನಗಳ ನೋಂದಣಿ ಸಂಖ್ಯೆ ಹಾಗೂ ಗುರುತು ಸಹ ಪತ್ತೆ ಹಚ್ಚುವುದು ಸುಲಭ. ಇದೇ ನೋಂದಣಿ ಸಂಖ್ಯೆ ಆಧರಿಸಿ ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ. ದಂಡ ಬಾಕಿ ಇರುವ ಜನರ ಮೊಬೈಲ್ ಹಾಗೂ ಮನೆಗಳಿಗೆ ನೋಟಿಸ್ ನೀಡಲಾಗುತ್ತಿದೆ' ಎಂದು ಹೇಳಿದ್ದಾರೆ.

'ದಾರಿ ತಪ್ಪಿಸುವ ಗಿಡ'ಕ್ಕೆ ಬೆಸಗರಹಳ್ಳಿ ರಾಮಣ್ಣ ಪ್ರಶಸ್ತಿ

ಬೆಂಗಳೂರು: ಕಥೆಗಾರ ಸ್ವಾಮಿ ಪೊನ್ನಾಚಿ ಅವರ 'ದಾರಿ ತಪ್ಪಿಸುವ ಗಿಡ' ಕಥಾಸಂಕಲನ ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ನೀಡುವ 2023ನೇ ಸಾಲಿನ ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿಗೆ ಆಯ್ಕೆಯಾಗಿದೆ. ಲೇಖಕಿ ಆರ್. ಸುನಂದಮ್ಮ, ಲೇಖಕ ಹರೀಶ್ ಗಂಗಾಧರ್, ಕೆ. ವೈ. ನಾರಾಯಣ ಸ್ವಾಮಿ ತೀರ್ಪುಗಾರರಾಗಿದ್ದರು. ಜೂನ್ 9ರಂದು ಮಂಡ್ಯದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಪ್ರಶಸ್ತಿ ₹25,000 ನಗದು, ಪ್ರಶಸ್ತಿ ಫಲಕ, ಪ್ರಶಸ್ತಿ ಪತ್ರ ಹೊಂದಿದೆ.

ನಗರದಲ್ಲಿ ಇಂದು

ವಿಶ್ವ ತಂಬಾಕು ರಹಿತ ದಿನ– ಮಕ್ಕಳ ರಕ್ಷಣೆಯಲ್ಲಿ ತಂಬಾಕು ಕಂಪನಿಗಳ ಹಸ್ತಕ್ಷೇಪ ಬಗ್ಗೆ ಕಾರ್ಯಕ್ರಮ: ಅತಿಥಿಗಳು: ಪ್ರತಿಮಾ ಮೂರ್ತಿ, ಜಗದೀಶ್ ಕೌರ್, ವಿವೇಕ್ ಬೆನಗಲ್, ಆಯೋಜನೆ: ನಿಮ್ಹಾನ್ಸ್, ಸ್ಥಳ: ನಿಮ್ಹಾನ್ಸ್‌ನ ಹಾಲ್–ಬಿ ಕನ್ವೆನ್ಶನಲ್ ಸೆಂಟರ್, ಬೆಳಿಗ್ಗೆ 10.30

ಟಿ.ಎಚ್. ಮೂರ್ತಿ ಅವರಿಗೆ ಅಭಿನಂದನಾ ಸಮಾರಂಭ, 'ಗ್ರಾಮಸಿರಿ' ಗ್ರಂಥ ಲೋಕಾರ್ಪಣೆ: ಉದ್ಘಾಟನೆ: ಜ್ಞಾನಪ್ರಕಾಶ ಸ್ವಾಮೀಜಿ, ಗ್ರಂಥಲೋಕಾರ್ಪಣೆ: ಬಿ.ಪಿ. ಮಹೇಶ್‌ಚಂದ್ರ ಗುರು, ಅಧ್ಯಕ್ಷತೆ: ಜಯಕರ ಎಸ್.ಎಂ., ಅತಿಥಿಗಳು: ಆರ್. ಕಾವಲ್ಲಮ್ಮ, ಶೇಖ್ ಲತೀಫ್, ಶ್ರೀನಿವಾಸ್, ಜಾಣಗೆರೆ ವೆಂಕಟರಾಮಯ್ಯ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಟಿ.ಎಚ್. ಮೂರ್ತಿ ಅಭಿನಂದನಾ ಸಮಿತಿ, ಸ್ಥಳ: ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 11

ದೊಡ್ಡಮ್ಮ ಮತ್ತು ಮಹೇಶ್ವರಮ್ಮ ದೇವರ 1ನೇ ವರ್ಷದ ವಾರ್ಷಿಕೋತ್ಸವ: ಸ್ಥಳ: ಬ್ಯಾಟರಾಯನಪುರ, ಬಳ್ಳಾರಿ ರಸ್ತೆ.

ವಸಂತೋತ್ಸವ ಸಾಂಸ್ಕೃತಿಕ ಹಬ್ಬ: ವಸಂತ ಕವಿಗೋಷ್ಠಿ: ಪ್ರತಿಭಾ ನಂದಕುಮಾರ್ ಮತ್ತು ತಂಡ, ಆಯೋಜನೆ: ಇನ್ಫೊಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ದೀಪೋತ್ಸವ: ಶ್ರೀ ಗಂಗಾಪರಮೇಶ್ವರಿ ದೇವಸ್ಥಾನ, ಸಂಜೆ: 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಎನ್‌ಎಎಲ್ ನಿರ್ಮಿಸಿದ ಪುಟ್ಟ ವಿಮಾನಕ್ಕೆ ಚಾಲನೆ ನೀಡಿದ ಉಪರಾಷ್ಟ್ರಪತಿ ಜಗದೀಪ್ ಧನಕರ್

‘ಹಂಸ–ಎನ್‌ಜಿ’ ಯಶಸ್ವಿ ವಿನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲದಲ್ಲಿಯೂ ತಡೆಯಿಲ್ಲದೇ ಹಾರಬಲ್ಲ ಹಂಸ-ಎನ್‌ಜಿ (ನೆಕ್ಸ್ಟ್ ಜನರೇಶನ್) ಪುಟ್ಟ ವಿಮಾನವನ್ನು ಎನ್‌ಎಎಲ್ (ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರಿ) ವಿನ್ಯಾಸಗೊಳಿಸಿದೆ.

ಎರಡು ಆಸನಗಳನ್ನು ಹೊಂದಿರುವ ಗಾಜಿನ ಕಾಕ್‌ಪಿಟ್, ಬಬಲ್ ಮೇಲಾವರಣ ಮತ್ತು ಕಡಿಮೆ ಇಂಧನ ಬಳಕೆಯಾಗುವ ಎಂಜಿನ್ ಹೊಂದಿರುವ ‘ಹಂಸ-ಎನ್‌ಜಿ’ಯನ್ನು ಉಪರಾಷ್ಟ್ರಪತಿ ಜಗದೀಪ್ ಧನಕರ್ ಸೋಮವಾರ ಅನಾವರಣಗೊಳಿಸಿದರು.

ಭಾರತದ ಹವಾಮಾನಕ್ಕೆ ಸೂಕ್ತವಾಗಿರುವ ಈ ವಿಮಾನವು ಭಾರತೀಯ ಫ್ಲಯಿಂಗ್ ಕ್ಲಬ್‌ಗಳ ಹಾರಾಟಕ್ಕೆ ಹೇಳಿ ಮಾಡಿಸಿದಂತಿದೆ. ಏರ್‌ಫೀಲ್ಡ್‌ನಿಂದ ಪಕ್ಷಿನೋಟ, ಕೆಡೆಟ್ ತರಬೇತಿ, ಕರಾವಳಿ ಕಣ್ಗಾವಲಿಗೂ ಬಳಕೆ ಮಾಡಬಹುದಾದ ‘ಹಂಸ-ಎನ್‌ಜಿ’ ಹವ್ಯಾಸಿ ಹಾರಾಟಗಾರರಿಗೂ ಉಪಯೋಗವಾಗಲಿದೆ.

ಉಪರಾಷ್ಟ್ರಪತಿ ಜಗದೀಪ್ ಧನಕರ್ ಮತ್ತು ಅವರ ಪತ್ನಿ ಸುದೇಶ್ ಧನಕರ್ ಈ ವಿಮಾನದಲ್ಲಿ ಕುಳಿತು ಸಂಭ್ರಮಪಟ್ಟರು. ವಿಮಾನದ ಗುಣಲಕ್ಷಣಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಶಂಕುಸ್ಥಾಪನೆ: ವಾತಾವರಣದಲ್ಲಿನ ಉಷ್ಣತೆಯನ್ನು ತಡೆದುಕೊಳ್ಳುವ ಕಾರ್ಬನ್ ಫೈಬರ್ ಮತ್ತು ಪ್ರಿಪ್ರೆಗ್ಸ್ ತಯಾರಿಕಾ ಕೇಂದ್ರಕ್ಕೆ ಉಪರಾಷ್ಟ್ರಪತಿ ಅವರು ಶಂಕುಸ್ಥಾಪನೆ ನೆರವೇರಿಸಿದರು.

ಪೈಲೆಟ್ ಪ್ಲಾಂಟ್ ಸ್ಕೇಲ್‌ಗೆ ಗುಣಮಟ್ಟದ ಕಾರ್ಬನ್ ಫೈಬರ್ ಇಲ್ಲಿ ಉತ್ಪಾದನೆಯಾಗಲಿದೆ. ಎನ್‌ಎಎಲ್ ಪ್ರಯೋಗಾಲಯದ ಮತ್ತೊಂದು ಮೈಲುಗಲ್ಲು ಇದು ಎಂದು ಎನ್‌ಎಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಮುಖ್ಯ ಕಾರ್ಯತಂತ್ರ ಮತ್ತು ಸುರಕ್ಷಿತ ಪ್ರಾಯೋಗಿಕ ವಾಯುಬಲ ವೈಜ್ಞಾನಿಕ ದತ್ತಾಂಶವನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿರುವ ಎನ್‌ಎಎಲ್‌ನ ‘1.2ಮೀ ಟ್ರೈಸಾನಿಕ್ ವಿಂಡ್ ಟನಲ್’ಗೂ ಇದೇ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ಸಿಎಸ್‌ಐಆರ್–ಎನ್‌ಎಎಲ್ ವಿಜ್ಞಾನಿಗಳು ತಯಾರಿಸಿದ 1.2 ಮೀ ಟ್ರೈಸಾನಿಕ್ ವಿಂಡ್ ಟನಲ್ ಸಿಎಸ್‌ಐಆರ್, ಡಿಆರ್‌ಡಿಒ, ಎಚ್‌ಎಎಲ್, ಇಸ್ರೊಗಳ ವೈಮಾನಿಕ ಕಾರ್ಯಕ್ರಮಕ್ಕೆ ಇದು ಪೂರಕವಾಗಲಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಎನ್‌ಎಎಲ್ ನಿರ್ದೇಶಕಿ ಕಲೈಸೆಲ್ವಿ, ಎನ್‌ಎಎಲ್ ವಿಜ್ಞಾನಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.



ಎನ್‌ಎಎಲ್ ಸಿದ್ಧಪಡಿಸಿರುವ ಹಂಸ–ಎನ್‌ಜಿ (ನೆಕ್ಸ್ಟ್ ಜನರೇಶನ್) ಪುಟ್ಟ ವಿಮಾನದಲ್ಲಿ ಸೋಮವಾರ ಉಪರಾಷ್ಟ್ರಪತಿ ಜಗದೀಪ್ ಧನಕರ್ ಮತ್ತು ಅವರ ಪತ್ನಿ ಸುದೇಶ್ ಧನಕರ್ ಕುಳಿತು ಪರಿಶೀಲಿಸಿದರು — ಪ್ರಜಾವಾಣಿ ಚಿತ್ರ

ಭಾರತದ ಅಭಿವೃದ್ಧಿಯಲ್ಲಿ ತಂತ್ರಜ್ಞಾನದ ಪಾತ್ರ ಮಹತ್ವದ್ದು: ಧನಕರ್

‘ಭಾರತದ ಅಭಿವೃದ್ಧಿ ಯಾತ್ರೆಯಲ್ಲಿ ತಂತ್ರಜ್ಞಾನದ ಪಾತ್ರ ಮಹತ್ವದ್ದಾಗಿದೆ. 2047ರಲ್ಲಿ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಲು ತಂತ್ರಜ್ಞಾನ ಕಾರಣವಾಗಲಿದೆ’ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ತಿಳಿಸಿದರು.

‘ತಂತ್ರಜ್ಞರು ನೋಡಲು ಸರಳವಾಗಿ ಕಾಣುತ್ತಾರೆ. ಜಗತ್ತಿನ ಕ್ಲಿಷ್ಟಕರ ಸಮಸ್ಯೆಯನ್ನು ತಂತ್ರಜ್ಞಾನಗಳ ಸಹಾಯದಿಂದ ಸರಳಗೊಳಿಸುವವರೂ ಇವರೇ. ತಂತ್ರಜ್ಞಾನ ಉಳಿದವರಿಗೆ ಒಂದು ಸವಾಲಾದರೆ ನಿಮಗೆ ಅದುವೇ ಅವಕಾಶ’ ಎಂದು ಬಣ್ಣಿಸಿದರು.

‘ಭಾರತವು ಎಲ್ಲ ಸಾಧ್ಯತೆಗಳಿಗೆ ತೆರೆದುಕೊಂಡಿರುವ ರಾಷ್ಟ್ರ. ಹಳ್ಳಿಯ ಕಟ್ಟಕಡೆಯ ವ್ಯಕ್ತಿಗೂ ತಂತ್ರಜ್ಞಾನ ತಲುಪಬೇಕು. ಈ ನಿಟ್ಟಿನಲ್ಲಿ ನಮ್ಮ ವಿಜ್ಞಾನಿಗಳು ಕೆಲಸ ಮಾಡುತ್ತಿದ್ದಾರೆ’ ಎಂದರು.

‘ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡುತ್ತಿದೆ. ‘ಚಂದ್ರಯಾನ–3’ಯಿಂದಾಗಿ ವಿಶ್ವವೇ ಭಾರತದತ್ತ ನೋಡುವಂತಾಗಿದೆ. ಸೇನೆಯಲ್ಲಿಯೂ ನಮ್ಮ ತಂತ್ರಜ್ಞಾನ ಅತ್ಯಾಧುನಿಕವಾಗಿ ಬಳಕೆಯಾಗುತ್ತಿದೆ’ ಎಂದು ಅವರು ವಿವರಿಸಿದರು.

ಸ್ನೇಹಿತನ ಮೇಲಿನ ದ್ವೇಷಕ್ಕೆ ತಂದೆ ಬಲಿ

ಕನಕಪುರ: ಹಳೆ ದ್ವೇಷದ ಹಿನ್ನೆಲೆಯಲ್ಲಿ ತನ್ನ ಸ್ನೇಹಿತನನ್ನು ಕೊಲೆ ಮಾಡಲು ಮನೆಗೆ ನುಗ್ಗಿದ ಗುಂಪೊಂದು, ಆತನ ತಂದೆಯನ್ನು ಕೊಲೆ ಮಾಡಿರುವ ಘಟನೆ ನಗರದ ಕುರುಪೇಟೆಯ ಮಾಧವ ನಗರದಲ್ಲಿ ಸೋಮವಾರ ನಡೆದಿದೆ.

ಮಾಧವನಗರದ ಗುಂಡಯ್ಯ (45) ಮೃತರು. ಕೃತ್ಯ ಎಸಗಿದ ಕರಡಿಗುಡ್ಡೆಯ ಅರುಣ್ ಹಾಗೂ ಆತನ ಮೂವರು ಸಹಚರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅರುಣ್ ಸಹಚರರೊಂದಿಗೆ ರುದ್ರೇಶ್ ಮನೆಗೆ ನುಗ್ಗಿಹಲ್ಲೆ ನಡೆಸಲು ಮುಂದಾದಾಗ ಆತನ ತಂದೆ ಗುಂಡಯ್ಯ ತಡೆದಾಗ ಅವರ ತಲೆಗೆ ರಾಡ್‌ನಿಂದ ಪೆಟ್ಟು ಬಿದ್ದು ಸಾವಿಗೀಡಾಗಿದ್ದಾರೆ.

‘ಕೈ’ ಸಂಘಟನೆಗೆ ‘ಕಾಂಗ್ರೆಸ್ ಕುಟುಂಬ’

ನೆಹರೂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಡಿಕೆಶಿ ಹೇಳಿಕೆ

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್

ಬೆಂಗಳೂರು: ಮತಗಟ್ಟೆ ಹಂತದಿಂದಲೇ ಕಾಂಗ್ರೆಸ್ ಪಕ್ಷದ ಸಂಘಟನೆಯನ್ನು ಬಲಪಡಿಸಲು ‘ಕಾಂಗ್ರೆಸ್ ಕುಟುಂಬ’ ಎಂಬ ಕಾರ್ಯಕ್ರಮ ಆರಂಭಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಕಟಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ನಡೆದ ಜವಾಹರಲಾಲ್ ನೆಹರೂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಪ್ರತಿ ಮತಗಟ್ಟೆ ವ್ಯಾಪ್ತಿಯಲ್ಲಿ 50 ಕಾರ್ಯಕರ್ತರನ್ನು ಒಳಗೊಂಡ ‘ಕಾಂಗ್ರೆಸ್ ಕುಟುಂಬ’ ರಚಿಸಲಾಗುವುದು. ಮತಗಟ್ಟೆ ಮತ್ತು ಆ ಗ್ರಾಮದ ವ್ಯಾಪ್ತಿಯಲ್ಲಿ ಯಾವುದೇ ಕಾರ್ಯಕ್ರಮ ಆಯೋಜಿಸುವ ಮುನ್ನ ಕಾಂಗ್ರೆಸ್ ಕುಟುಂಬದ ಸದಸ್ಯರು ಸೇರಿ ತೀರ್ಮಾನಿಸಬೇಕಾಗುತ್ತದೆ’ ಎಂದರು.

ಕಾಂಗ್ರೆಸ್ ಪಕ್ಷವನ್ನು ಕಾರ್ಯಕರ್ತರ ಪಕ್ಷವನ್ನಾಗಿ ಪರಿವರ್ತಿಸುವ ಉದ್ದೇಶ ಈ ಕಾರ್ಯಕ್ರಮದ ಹಿಂದಿದೆ. ಕಾರ್ಯಕ್ರಮ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜೂನ್ 1ರಂದು ಪಕ್ಷದ ಪದಾಧಿಕಾರಿಗಳ ಸಭೆ ಕರೆಯಲಾಗಿದೆ. ಎಲ್ಲ ಹಂತದ ನಾಯಕರೂ ಈ ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿ ಹೊರಲೇಬೇಕು ಎಂದು ತಿಳಿಸಿದರು.

‘ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿ ಕಟ್ಟಡ ನಿರ್ಮಾಣಕ್ಕೆ ಒಂದು ವರ್ಷದೊಳಗೆ ಅಡಿಪಾಯ ಹಾಕಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಮತ್ತು ಕಾರ್ಯಕರ್ತರು ಅದರ ಹೊಣೆ ಹೊರಬೇಕು. ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಕಟ್ಟಡವನ್ನು ನೆಲಸಮಗೊಳಿಸಿ, ಹೊಸ ಕಟ್ಟಡ ನಿರ್ಮಿಸಲಾಗುವುದು. ಸಚಿವರಾದ ರಾಮಲಿಂಗಾರೆಡ್ಡಿ ಮತ್ತು ಕೃಷ್ಣ ಬೈರೇಗೌಡರ ಜತೆ ಈ ಬಗ್ಗೆ ಈಗಾಗಲೇ ಚರ್ಚಿಸಿದ್ದೇನೆ’ ಎಂದರು.

ಅಧಿಕಾರ ತ್ಯಜಿಸಲು ಸೂಚನೆ: ಜಿಲ್ಲಾ ಕಾಂಗ್ರೆಸ್ ಸಮಿತಿ ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿಗಳಲ್ಲಿ ಹತ್ತು ವರ್ಷಗಳವರೆಗೆ ಪದಾಧಿಕಾರಿಗಳಾಗಿ ಕೆಲಸ ಮಾಡಿರುವವರು ಅಧಿಕಾರ ತ್ಯಜಿಸಬೇಕು. ಪಕ್ಷದ ಸಂಘಟನೆಗಾಗಿ ದುಡಿಯುತ್ತಿರುವವರಿಗೆ ಅವಕಾಶ ಮಾಡಿಕೊಡಬೇಕು ಎಂದರು.

‘30 ಗಳಿಗೊಮ್ಮೆ ಕಾರ್ಯಕರ್ತರ ಭೇಟಿ’

‘ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿ ತಿಂಗಳಲ್ಲಿ ಒಂದು ದಿನ ಕೆಪಿಸಿಸಿ ಕಚೇರಿಯಲ್ಲಿ ಕುಳಿತು ಪಕ್ಷದ ಕಾರ್ಯಕರ್ತರ ಅಹವಾಲು ಆಲಿಸುತ್ತೇವೆ. ಪಕ್ಷದ ಕಾರ್ಯಕರ್ತರು ಮತ್ತು ಸದಸ್ಯತ್ವ ಹೊಂದಿದವರಿಗಷ್ಟೇ ಭೇಟಿಗೆ ಅವಕಾಶ ನೀಡಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಎಷ್ಟೋ ಬಾರಿ ಕಾರ್ಯಕರ್ತರು ನಮ್ಮನ್ನು ಭೇಟಿ ಮಾಡಲು ದೂರದ ಊರುಗಳಿಂದ ಬರುತ್ತಾರೆ. ಆದರೆ ನಾವು ಅವರನ್ನು ಭೇಟಿ ಮಾಡಲು ಆಗುವುದಿಲ್ಲ. ಪ್ರಮುಖರನ್ನೇ ಮೊದಲು ಕರೆದು ಮಾತನಾಡಿಸುತ್ತೇವೆ. ಇದರಿಂದ ನಮಗೂ ಮುಜುಗರವಾಗುತ್ತದೆ. ನಮ್ಮನ್ನು ವಿಧಾನಸೌಧದಲ್ಲಿ ಕೂರಿಸಿದವರ ಜತೆ ನಮಗೆ ಮಾತನಾಡಲು ಆಗುವುದಿಲ್ಲ. ಈ ಅನುಭವ ನನಗೂ ಆಗಿದೆ. ಹೀಗಾಗಿ ಈ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ’ ಎಂದರು.

‘ಚುನಾವಣೆ ಫಲಿತಾಂಶದ ಬಳಿಕ ಸಂಪುಟ ಪುನರ್‌ರಚನೆ ಆಗಬಹುದು’



ಎಸ್.ಎಸ್. ಮಲ್ಲಿಕಾರ್ಜುನ

ಬೆಂಗಳೂರು: ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ ಸಂಪುಟ ಪುನರ್‌ರಚನೆ ಆಗಬಹುದು ಎಂದು ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಸಂಪುಟ ಪುನರ್‌ರಚನೆ ಮುಖ್ಯಮಂತ್ರಿ ಅವರಿಗೆ ಬಿಟ್ಟ ವಿಚಾರ. ಈ ಕುರಿತು ಅವರೇ ನಿರ್ಧಾರ ತೆಗೆದುಕೊಳ್ಳುತ್ತಾರೆ. ಆಗಬಹುದು ಎನ್ನುವ ಮೂಲಕ ಸಾಧ್ಯತೆಗಳ ಸುಳಿವು ನೀಡಿದರು.

ಚನ್ನಗಿರಿ ಲಾಕಪ್ ಸಾವು ಪ್ರಕರಣ ಕುರಿತು ತನಿಖೆ ನಡೆಯುತ್ತಿದೆ. ಲೋಪ ಕಂಡುಬಂದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ. ಇಂತಹ ವಿಚಾರಗಳಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎನ್ನುವ ಬಿಜೆಪಿ ಮೊದಲು ದೆಹಲಿಯ ವ್ಯವಸ್ಥೆ ಸರಿ ಮಾಡಲಿ ಎಂದರು.

ನೆಹರೂ ಬಗ್ಗೆ ಮಾತನಾಡುವ ಯೋಗ್ಯತೆ ಇದೆಯೇ: ಸಿ.ಎಂ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ‘ಹತ್ತು ವರ್ಷ ಅಧಿಕಾರದಲ್ಲಿದ್ದರೂ ಒಂದು ಅಣೆಕಟ್ಟೆಯನ್ನಾಗಲೀ, ಒಂದು ಸಾರ್ವಜನಿಕ ಉದ್ದಿಮೆಯನ್ನಾಗಲೀ ಸ್ಥಾಪಿಸದ ಪ್ರಧಾನಿ ನರೇಂದ್ರ ಮೋದಿಯವರಿಗೆ ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಬಗ್ಗೆ ಮಾತನಾಡುವ ಯೋಗ್ಯತೆ ಇದೆಯೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ನಡೆದ ನೆಹರೂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ದೇಶದ ಬಹುತೇಕ ಅಣೆಕಟ್ಟುಗಳು ನೆಹರೂ ಅವಧಿಯಲ್ಲೇ ನಿರ್ಮಾಣವಾಗಿದ್ದವು. ಕಾಂಗ್ರೆಸ್ ದೇಶಕ್ಕಾಗಿ ಏನೂ ಮಾಡಿಲ್ಲ ಎನ್ನುವುದರಲ್ಲೇ ಮೋದಿ ಕಾಲ ಕಳೆಯುತ್ತಿದ್ದಾರೆ. ಇವರಿಗೆ ನೆಹರೂ ಕುರಿತು ಮಾತನಾಡುವ ಯೋಗ್ಯತೆಯೇ ಇಲ್ಲ’ ಎಂದರು.

‘ನೆಹರೂ ಬ್ರಿಟಿಷರ ವಿರುದ್ಧ ಹೋರಾಡಿ, ಜೈಲು ವಾಸ ಅನುಭವಿಸುತ್ತಿದ್ದಾಗ ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದವರು ಮೌನ ವಹಿಸಿದ್ದರು. ನೆಪಕ್ಕೂ ಬ್ರಿಟಿಷರ ವಿರುದ್ಧ ಧ್ವನಿ ಎತ್ತಲಿಲ್ಲ. ಸ್ವಾತಂತ್ರ್ಯ ಹೋರಾಟದ ಚರಿತ್ರೆ ಇರುವ ನಮಗೆ ಈಗ ಇವರು ದೇಶಭಕ್ತಿಯ ಪಾಠ ಮಾಡುತ್ತಾ ನಗೆಪಾಟಲಿಗೀಡಾಗಿದ್ದಾರೆ’ ಎಂದು ಟೀಕಿಸಿದರು.

ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ತತ್ವಗಳ ಆಧಾರದಲ್ಲಿ ದೇಶದ ಅಭಿವೃದ್ಧಿಗೆ ಅಡಿಗಲ್ಲು ಹಾಕಿದ್ದ ನೆಹರೂ, ಭಾರತವನ್ನು ವಿಶ್ವದ ಅತಿದೊಡ್ಡ ಮತ್ತು ಸದೃಢ ಪ್ರಜಾಪ್ರಭುತ್ವ ರಾಷ್ಟ್ರವನ್ನಾಗಿ ರೂಪಿಸಿದರು. ದೇಶದ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಮಹತ್ತರವಾದುದು ಎಂದರು.

ಸೋಲು ಖಚಿತವಾಗಿದೆ: ‘ಮೋದಿಯವರು ಹತಾಶರಾಗಿದ್ದು, ವಿಚಿತ್ರವಾಗಿ ಮಾತನಾಡುತ್ತಿದ್ದಾರೆ. ದೇವರೇ ನನ್ನನ್ನು ಕಳುಹಿಸಿದ್ದು ಎಂದು ಹೇಳುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಸೋಲುವುದು ಖಚಿತವಾಗಿದೆ. ಸೋಲಿನ ಭೀತಿಯಿಂದ ಪ್ರಧಾನಿ ಹಾಗೆ ಮಾತನಾಡುತ್ತಿದ್ದಾರೆ’ ಎಂದು ಸಿದ್ದರಾಮಯ್ಯ ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಜಿ.ಸಿ. ಚಂದ್ರಶೇಖರ್, ಮಂಜುನಾಥ್ ಭಂಡಾರಿ, ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ವಿನಯಕುಮಾರ್ ಸೊರಕೆ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಬಿ.ಕೆ.ಹರಿಪ್ರಸಾದ್, ಮಾಜಿ ಸಚಿವೆ ರಾಣಿ ಸತೀಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಂಜುಳಾ ನಾಯ್ಡು ಉಪಸ್ಥಿತರಿದ್ದರು.

ಸೋಲಿನ ಭೀತಿಯಿಂದ ಅಪಪ್ರಚಾರ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ



ರಾಮಲಿಂಗಾರೆಡ್ಡಿ

ಬೆಂಗಳೂರು: ‘ವಿಧಾನ ಪರಿಷತ್‌ನ ಬೆಂಗಳೂರು ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಸೋಲಿನ ಭೀತಿ ಎದುರಿಸುತ್ತಿದೆ. ಹತಾಶೆಯಿಂದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆರೋಪಿಸಿದರು.

ಪಕ್ಷದ ಮುಖಂಡರೊಂದಿಗೆ ಸೋಮವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಅವರು,‘ಈ ಬಾರಿ ರಾಮೋಜಿಗೌಡ ಅವರು ಗೆಲ್ಲುವುದು ಖಚಿತ. ಅದನ್ನು ತಪ್ಪಿಸಲು ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ. ನಮ್ಮ ಅಭ್ಯರ್ಥಿಯ ಕುಟುಂಬದವರು ನೂರಾರು ವರ್ಷಗಳಿಂದ ಕೋಲಾರದಲ್ಲಿ ನೆಲೆಸಿದ್ದಾರೆ. ಆದರೆ, ಅವರು ರಾಜ್ಯದವರಲ್ಲ ಎಂದು ಬಿಂಬಿಸಿ ರಾಜಕೀಯ ಲಾಭ ಪಡೆಯುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ’ ಎಂದರು.

ರಾಮೋಜಿಗೌಡ ಮಾತನಾಡಿ, ‘ನಾನು ಒಕ್ಕಲಿಗನಲ್ಲ, ಮರಾಠಿ ಸಮುದಾಯದವ, ಆಂಧ್ರಪ್ರದೇಶ ಮೂಲದವನು ಎಂದು ಸುಳ್ಳು ಹಬ್ಬಿಸುತ್ತಿದ್ದಾರೆ. ಪದವೀಧರರ ಕ್ಷೇತ್ರದ ಸದಸ್ಯ ಯಾರು ಎಂಬುದು ಯಾರಿಗೂ ಗೊತ್ತಿಲ್ಲ. ಅದು ಅವರ ಯೋಗ್ಯತೆ’ ಎಂದರು.

‘ನನ್ನ ಜಾತಿ, ಊರಿನ ಬಗ್ಗೆ ಪ್ರತಿಸ್ಪರ್ಧಿ ಪಕ್ಷದವರು ಮಾತನಾಡಿದ್ದಾರೆ. ಇದರಿಂದ ನನ್ನ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ. ನನ್ನ ಬಗ್ಗೆ ಮಾತನಾಡುತ್ತಿರುವ ಬಿಜೆಪಿ ಶಾಸಕರು ಯಾವ ರಾಜ್ಯದವರು? ಯಾವ ಊರಿನವರು? ಅವರ ವೃತ್ತಿ ಏನು’ ಎಂದು ಕೇಳಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ವಿಧಾನ ಪರಿಷತ್‌ನ ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ಮಾಜಿ ಸದಸ್ಯ ಎಂ. ನಾರಾಯಣಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಟರ್ಬ್ಯುಲೆನ್ಸ್‌ಗೆ ಸಿಲುಕಿದ ವಿಮಾನ: 12 ಪ್ರಯಾಣಿಕರಿಗೆ ಗಾಯ

ಲಂಡನ್ (ಎಪಿ): ದೋಹಾದಿಂದ ಡಬ್ಲಿನ್‌ಗೆ ಭಾನುವಾರ ತೆರಳುತ್ತಿದ್ದ ‘ಕತಾರ್ ಏರ್‌ವೇಸ್’ ವಿಮಾನವು ಟರ್ಬ್ಯುಲೆನ್ಸ್‌ಗೆ ಸಿಲುಕಿ (ಗಾಳಿಯ ತೀವ್ರ ಏರಿಳಿತದಿಂದ ಆಗುವ ಕ್ಷೋಭೆ) ಅಲುಗಾಡಿದ ಪರಿಣಾಮ 12 ಮಂದಿ ಪ್ರಯಾಣಿಕರು ಗಾಯಗೊಂಡಿದ್ದಾರೆ. ಈ ಪೈಕಿ ಎಂಟು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನವು ಸುರಕ್ಷಿತವಾಗಿ ಡಬ್ಲಿನ್ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಈ ವೇಳೆ ವಿಮಾನ ನಿಲ್ದಾಣದ ಪೊಲೀಸರು, ಅಗ್ನಿಶಾಮಕದಳ ಹಾಗೂ ರಕ್ಷಣಾ ಇಲಾಖೆ ವತಿಯಿಂದ ತುರ್ತು ಸೇವೆಗಳನ್ನು ಒದಗಿಸಲಾಯಿತು.

ಟರ್ಕಿ ಮೂಲಕ ಬರುವಾಗ ಈ ಅವಘಡ ನಡೆದಿದೆ. ಪ್ರಯಾಣಿಕರು ವಿಮಾನದ ಚಾವಣಿಗೆ ಡಿಕ್ಕಿ ಹೊಡೆದು ಕೊಳ್ಳುವಷ್ಟು ತೀವ್ರವಾಗಿ ಟರ್ಬ್ಯುಲೆನ್ಸ್ ಪರಿಣಾಮ ಇತ್ತು. ಆಹಾರ ಮತ್ತು ನೀರಿನ ಬಾಟಲಿಗಳು ವಿಮಾನದ ತುಂಬೆಲ್ಲಾ ಚೆಲ್ಲಾಪಿಲ್ಲಿಯಾಗಿದ್ದವು ಎಂದು ಪ್ರಯಾಣಿಕರೊಬ್ಬರು ತಿಳಿಸಿದ್ದಾರೆ.

ಪೊಲೀಸ್ ವಶದಲ್ಲಿ ವ್ಯಕ್ತಿ ಸಾವು ಪ್ರಕರಣ

ಚನ್ನಗಿರಿ: ಸಿಐಡಿ ತನಿಖೆ ಆರಂಭ

ಪ್ರಜಾವಾಣಿ ವಾರ್ತೆ

ಚನ್ನಗಿರಿ (ದಾವಣಗೆರೆ): ಮಟ್ಕಾ ಜೂಜು ಆಡಿಸುತ್ತಿದ್ದ ದೂರಿನ ಹಿನ್ನೆಲೆಯಲ್ಲಿ ಜಿಲ್ಲೆಯ ಚನ್ನಗಿರಿ ಪೊಲೀಸರು ವಿಚಾರಣೆಗಾಗಿ ಠಾಣೆಗೆ ಕರೆದೊಯ್ದ ಸಂದರ್ಭ ನಡೆದಿದ್ದ ಆದಿಲ್ ಖಲಿಂ ಉಲ್ಲಾ ಸಾವು ಪ್ರಕರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳು ಸೋಮವಾರ ಆರಂಭಿಸಿದರು.

ಸಿಐಡಿ ಡಿವೈಎಸ್‌ಪಿ ಕನಕಲಕ್ಷ್ಮೀ ನೇತೃತ್ವದ ತಂಡ ಚನ್ನಗಿರಿ ಪೊಲೀಸ್ ಠಾಣೆಗೆ ಭೇಟಿ ನೀಡಿ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿರುವ ತುಣುಕುಗಳ ಪರಿಶೀಲಿಸಿ ಮಾಹಿತಿ ಕಲೆ ಹಾಕಿತು.

ಸದ್ಯ ಪಟ್ಟಣದಲ್ಲಿ ಪರಿಸ್ಥಿತಿ ಸಂಪೂರ್ಣ ಹತೋಟಿಯಲ್ಲಿದ್ದು, ಪೊಲೀಸ್ ಬಿಗಿ ಭದ್ರತೆ ಮುಂದುವರೆದಿದೆ.

ಮೂವರ ಅಮಾನತು: ಘಟನೆ ಸಂಬಂಧ ಡಿವೈಎಸ್‌ಪಿ ಪ್ರಶಾಂತ್ ಜಿ. ಮುನ್ನೋಳಿ, ಪೊಲೀಸ್ ಇನ್‌ಸ್ಪೆಕ್ಟರ್ ಬಿ. ನಿರಂಜನ್ ಹಾಗೂ ಅಪರಾಧ ವಿಭಾಗದ ಸಬ್ ಇನ್‌ಸ್ಪೆಕ್ಟರ್ ಆರೋನ್ ಅಖ್ತರ್ ಅವರನ್ನು ಅಮಾನತು ಮಾಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹಮಂತ್ರಿ ಜಿ.ಪರಮೇಶ್ವರ ಅವರು ಅಧಿಕಾರಿಗಳ ಅಮಾನತು ಮಾಡುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಪೂರ್ವವಲಯದ ಐಜಿಪಿ ತ್ಯಾಗರಾಜನ್ ಅವರು ಅಮಾನತು ಆದೇಶ ಹೊರಡಿಸಿದ್ದಾರೆ.

ಮತ್ತೆ ಮೂವರು ವಶಕ್ಕೆ: ಠಾಣೆಗೆ ಮುತ್ತಿಗೆ ಹಾಕಿ ಹಾನಿಗೊಳಿಸಿದ ಸಂಬಂಧ ಸೋಮವಾರ ಮತ್ತೆ ಮೂವರನ್ನು ವಶಕ್ಕೆ ಪಡೆಯಲಾಗಿದ್ದು, ಈವರೆಗೆ 28 ಜನರನ್ನು ವಶಕ್ಕೆ ಪಡೆದಂತಾಗಿದೆ.

ಮಟ್ಕಾ ಜೂಜು ಆಡಿಸುತ್ತಿದ್ದ ದೂರಿನ ಮೇರೆಗೆ ಚನ್ನಗಿರಿ ಪೊಲೀಸರು ಆದಿಲ್ ಖಲಿಂ ಉಲ್ಲಾ ಅವರನ್ನು ಕಳೆದ ಶುಕ್ರವಾರ ರಾತ್ರಿ ವಿಚಾರಣೆಗಾಗಿ ಠಾಣೆಗೆ ಕರೆದೊಯ್ದ ಸಂದರ್ಭ ಅವರು ಮೃತಪಟ್ಟಿದ್ದರು. ಇದು ‘ಲಾಕಪ್ ಡೆತ್’ ಎಂದು ಸಂಬಂಧಿಕರು ದೂರಿದ್ದರು. ಶುಕ್ರವಾರ ತಡರಾತ್ರಿ ಉದ್ರಿಕ್ತರ ಗುಂಪು ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿ, ಕಲ್ಲು ತೂರಿದ್ದರಿಂದ 11 ಜನ ಸಿಬ್ಬಂದಿ ಗಾಯಗೊಂಡಿದ್ದರು. ಪೊಲೀಸ್ ವಾಹನಗಳನ್ನು ಜಖಂಗೊಳಿಸಿ ಹಾನಿ ಮಾಡಲಾಗಿತ್ತು.

ಕಾನೂನಿನಂತೆ ಕ್ರಮ: ಡಿಕೆಶಿ

ಬೆಂಗಳೂರು: ಚನ್ನಗಿರಿಯಲ್ಲಿ ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಿದ ಪ್ರಕರಣದಲ್ಲಿ ಯಾರೇ ತಪ್ಪು ಮಾಡಿದ್ದರೂ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿದವರನ್ನು ರಾಜ್ಯ ಸರ್ಕಾರ ರಕ್ಷಿಸುತ್ತಿದೆ’ ಎಂಬ ಆರೋಪ ಕುರಿತು ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ಕಾಂಗ್ರೆಸ್ ಪಕ್ಷ ಸಂವಿಧಾನದ ಆಶಯದಂತೆ ಎಲ್ಲ ಸಮುದಾಯಗಳನ್ನು ಸಮಾನವಾಗಿ ಕಾಣುತ್ತದೆ’ ಎಂದರು.

ಪ್ರಕರಣದ ಬಗ್ಗೆ ಮುಖ್ಯಮಂತ್ರಿಯವರು ಪ್ರತ್ಯೇಕ ತನಿಖೆಗೆ ಆದೇಶ ನೀಡಿದ್ದಾರೆ. ತನಿಖೆ ನಡೆಯುತ್ತಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ತಪ್ಪಿತಸ್ಥರನ್ನು ಸುಮ್ಮನೆ ಬಿಡುವುದಿಲ್ಲ. ಯಾರೂ ಕೂಡ ಕಾನೂನು ಕೈಗೆತ್ತಿಕೊಳ್ಳುವಂತಿಲ್ಲ. ಈ ವಿಚಾರದಲ್ಲಿ ಸರ್ಕಾರದ ನಿಲುವು ಅಚಲ. ಗೃಹ ಸಚಿವರು ಈಗಾಗಲೇ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದ್ದಾರೆ ಎಂದು ಹೇಳಿದರು.

ಕ್ಷೇಮ ಕುಶಲ



ಇಳಿಸಂಜೆಗಿರಲಿ ತಿಳಿಬೆಳದಿಂಗಳು

ಡಾ. ಕುಶ್ವಂತ್ ಕೋಳಿಬೈಲು

ಜೀವನದ ಇಳಿಸಂಜೆಯಲ್ಲಿರುವವರು ಎದುರಿಸುವ ಆರೋಗ್ಯ ಸಮಸ್ಯೆಗಳು ಹತ್ತು ಹಲವು. ಜೀವನದ ಸುದೀರ್ಘ ಪಯಣದಲ್ಲಿ ನಜ್ಜುಗುಜ್ಜಾದ ದೇಹ-ಮನಸ್ಸುಗಳೆರಡರಲ್ಲೂ ಹಿಂದಿದ್ದ ಚೈತನ್ಯ, ಉತ್ಸಾಹ ಮತ್ತು ರೋಗನಿರೋಧಕ ಶಕ್ತಿ ಉಳಿದಿರುವುದಿಲ್ಲ. ದೇಹದ ಸಕಲ ಅಂಗಾಂಗಗಳ ಮೇಲೆ ತನ್ನ ದುಷ್ಪರಿಣಾಮ ಬೀರುವ ರಕ್ತದೊತ್ತಡ ಮತ್ತು ಮಧುಮೇಹದಂತಹ ಕಾಯಿಲೆಗಳನ್ನು ಹತೋಟಿಗೆ ತರುವುದು ಕಷ್ಟವಾಗುತ್ತದೆ. ದುರಭ್ಯಾಸಗಳ ಕಾರಣದಿಂದ ಆರೋಗ್ಯವನ್ನು ಕಡೆಗಣಿಸದವರು ಮುಪ್ಪಿನಲ್ಲಿ ಪರಿತಪಿಸುವಂತಹ ವಾತಾವರಣವೂ ನಿರ್ಮಾಣವಾಗಿರುತ್ತದೆ. ತಮ್ಮ ಹುದ್ದೆ-ವೃತ್ತಿಗಳಿಂದ ನಿವೃತ್ತರಾಗಿರುತ್ತಾರಾದ ಕಾರಣ, ಅವರಿಗಿದ್ದ ಸಾಮಾಜಿಕ ಪ್ರತಿಷ್ಠೆ ಮತ್ತು ಸಂಪರ್ಕವು ಈಗ ಕಡಿಮೆಯಾಗಿರುತ್ತದೆ. ಈ ಕಾರಣದಿಂದ ಅವರು ಮಾನಸಿಕವಾಗಿಯೂ ಕುಗ್ಗುತ್ತಹೋಗುತ್ತಾರೆ. ಜೀವನದ ಇಳಿಸಂಜೆಯಲ್ಲಿ ಮನುಷ್ಯರು ಎದುರಿಸಬೇಕಾಗಿ ಬರುವ ಸವಾಲುಗಳು ಒಂದೆರಡಲ್ಲ.

ಹಿರಿಯ ವಯಸ್ಸಿನವರು ಸಮತೋಲದ ಆಹಾರವನ್ನು ಸೇವಿಸದಿದ್ದಲ್ಲಿ ಶರೀರಕ್ಕೆ ಅಗತ್ಯ ಖನಿಜ ಮತ್ತು ವಿಟಮಿನ್‌ಗಳ ಕೊರತೆಯುಂಟಾಗುವುದು ಸಾಮಾನ್ಯ. ಮನೆ ಬಿಟ್ಟು ಹೊರಗೆ ಹೋಗದವರಲ್ಲಿ ವಿಟಮಿನ್ ಡಿ ಕೊರತೆ, ಸಸ್ಯಾಹಾರವನ್ನು ಮಾತ್ರ ಸೇವಿಸುವವರಲ್ಲಿ ವಿಟಮಿನ್ ಬಿ12 ಕೊರತೆ ಮುಂತಾದ ಸಮಸ್ಯೆಗಳು ಸಾಮಾನ್ಯ. ಕಬ್ಬಿಣ ಮತ್ತು ಕ್ಯಾಲ್ಸಿಯಂ ಅಂಶಗಳು ಕಡಿಮೆಯಾದಲ್ಲಿ ರಕ್ತಹೀನತೆ ಮತ್ತು ಕೀಲುಗಳ ಸವಕಳಿ ಹೆಚ್ಚಾಗುತ್ತದೆ. ಸಮತೋಲನದ ಆಹಾರ ತೆಗೆದುಕೊಳ್ಳುವ ಶಿಸ್ತು ಮತ್ತು ವ್ಯವಸ್ಥೆಗಳು ಇಲ್ಲದವರು ನಿಯಮಿತವಾಗಿ ಪೂರಕ ಔಷಧಗಳನ್ನು ಸೇವಿಸುವುದು ಸೂಕ್ತ. ಹಲ್ಲುಗಳ ಸಮಸ್ಯೆಯಿಂದಲೂ ಹಿರಿಯರ ಅಹಾರ ಪದ್ಧತಿಗಳು ಬದಲಾಗುತ್ತವೆ. ಹಾಗಾಗಿ ಅವರು ದಂತವೈದ್ಯರನ್ನು ಕಾಣುವುದೂ ಅಗತ್ಯ.

ದೃಷ್ಟಿ ಮತ್ತು ಶ್ರವಣಶಕ್ತಿ ಕುಂಠಿತವಾಗುವುದು ಇಳಿ ವಯಸ್ಸಿನಲ್ಲಿ ಸಾಮಾನ್ಯ. ಯಾವುದೇ ಗಾಯವಿಲ್ಲದೆ ಮಾಡಬಲ್ಲ ಕ್ಯಾಟರಾಕ್ಟ್ ಸರ್ಜರಿಗಳು, ಲೇಸರ್ ಚಿಕಿತ್ಸೆಗಳು ಹಿರಿಯರ ದೃಷ್ಟಿದೋಷವನ್ನು ಪರಿಹರಿಸಬಹುದು. ಶ್ರವಣಶಕ್ತಿಯನ್ನು ಹೆಚ್ಚಿಸಲು ಶ್ರವಣಯಂತ್ರಗಳು ಸಹಾಯಕಾರಿ. ದೃಷ್ಟಿ ಮತ್ತು ಶ್ರವಣಶಕ್ತಿ ಸರಿಯಾಗಿದ್ದಲ್ಲಿ ಮಾತ್ರ ಬದುಕಿನ ಆನಂದವನ್ನು ಇಳಿವಯಸ್ಸಿನಲ್ಲಿಯೂ ಆನಂದಿಸಬಹುದು. ವಯಸ್ಸಾದಂತೆ ದೇಹದ ಸಮತೋಲನವನ್ನು ಕಾಪಾಡಿಕೊಳ್ಳಲು ಕಷ್ಟವಾಗುವ ಕಾರಣದಿಂದ ಮತ್ತು ಮಾಂಸಖಂಡ-ಎಲಬುಗಳಲ್ಲಿ ಹಿಂದಿನ ಶಕ್ತಿಯಿಲ್ಲದ ಕಾರಣದಿಂದಾಗಿ ಹಿರಿಯರು ಜಾರಿ ಅಥವಾ ಎಡವಿ ಬೀಳುವ ಸಂಭವ ಜಾಸ್ತಿಯಿರುತ್ತದೆ. ಹಾಗಾಗಿ ಸಮತಟ್ಟಲ್ಲದ ಪ್ರದೇಶದಲ್ಲಿ ಅಥವಾ ಬೀಳುವ ಅಪಾಯವಿರುವ ಜಾಗಗಳಲ್ಲಿ ಅವರು ಓಡಾಡದಂತೆ ಎಚ್ಚರ ವಹಿಸಬೇಕು.

ಭಾರತದಲ್ಲಿ ಸುಮಾರು ಹದಿನೈದು ಕೋಟಿಗಳಿಗಿಂತ ಹೆಚ್ಚು ಅರವತ್ತರ ವಯಸ್ಸನ್ನು ಮೀರಿದವರಿದ್ದಾರೆ. ಅದರಲ್ಲಿ ಸುಮಾರು ಒಂದುವರೆ ಕೋಟಿಯಷ್ಟು ಅರವತ್ತರ ವಯಸ್ಸು ಮೀರಿದವರು ಏಕಾಂಗಿಯಾಗಿ ತಮ್ಮನ್ನು ತಾವು ನೋಡಿಕೊಳ್ಳುತ್ತಿದ್ದಾರೆ. ವಿದೇಶಗಳಲ್ಲಿ ಇರುವಂತೆ ನಮ್ಮಲ್ಲಿಯ ವ್ಯವಸ್ಥೆಗಳು ವೃದ್ಧಾಪ್ಯ ಸ್ನೇಹಿಯಾಗಿಲ್ಲ. ಭಾರತದಲ್ಲಿಯೂ ಅವಿಭಕ್ತ ಕುಟುಂಬಗಳು ಕಡಿಮೆಯಾಗುತ್ತಿರುವ ಕಾರಣ ವಯಸ್ಸಾದವರನ್ನು ನೋಡಿಕೊಳ್ಳುವ ಕೌಟುಂಬಿಕ ಚೌಕಟ್ಟು ಸಡಿಲವಾಗಿದೆ. ವೃದ್ಧಾಪ್ಯದಲ್ಲಿ ನೆನಪಿನ ಶಕ್ತಿ ಕುಂಠಿತವಾಗುವ ಕಾರಣ ಹೆಚ್ಚಿನವರಿಗೆ ಅವರ ಔಷಧಗಳನ್ನು ನೆನಪಿಟ್ಟುಕೊಂಡು ಸೇವಿಸುವುದೂ ಸವಾಲಿನ ಸಂಗತಿಯಾಗಿರುತ್ತದೆ. ವಿವಿಧ ವೈದ್ಯರ ಸಲಹೆಯ ಮೇರೆಗೆ ಹಲವು ಔಷಧಗಳನ್ನು ಸೇವಿಸುವವರು ಎಚ್ಚರಿಕೆಯಿಂದಿರಬೇಕು. ಹಲವು ಔಷಧಗಳನ್ನು ಒಟ್ಟಿಗೆ ಸೇವಿಸಿದರೆ ದೇಹದ ವಿವಿಧ ಅಂಗಾಂಗಗಳ ಮೇಲೆ ದುಷ್ಪರಿಣಾಮಗಳು ಕಾಣಿಸಿಕೊಳ್ಳುವ ಸಾಧ್ಯತೆಗಳ ಕುರಿತು ವೈದ್ಯರ ಜೊತೆಗೆ ಮುಂಚಿತವಾಗಿ ಚರ್ಚಿಸಬೇಕು. ಹರ್ಬಲ್ ಅಥವಾ ನಾಟಿ ಔಷಧಿಯೆಂಬ ಹಣೆಪಟ್ಟಿಯೊಂದಿಗೆ ದೇಹಕ್ಕೆ ಮಾರಕವಾಗಬಲ್ಲ ಭಾರೀ ಲೋಹಗಳು ಮತ್ತು ಸ್ಟಿರಾಯ್ಡ್‌ಗಳಿರುವ ಔಷಧಗಳನ್ನು ವೈದ್ಯರ ಅನುಮತಿಯಿಲ್ಲದೆ ಸೇವಿಸಬಾರದು. ವೃದ್ಧಾಪ್ಯದಲ್ಲಿರುವ ಮಹಿಳೆಯರಲ್ಲಿ ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರುಗಳು ಹೆಚ್ಚು ಕಂಡುಬರುವಂತೆ, ಪುರುಷರಲ್ಲಿ ಶ್ವಾಸಕೋಶದ ಮತ್ತು ಕರುಳಿನ ಕ್ಯಾನ್ಸರ್ ಹೆಚ್ಚಾಗಿ ಕಂಡು ಬರುತ್ತದೆ. ಈ ಕ್ಯಾನ್ಸರ್‌ಗಳ ಮೊದಲ ಲಕ್ಷಣಗಳ ಬಗ್ಗೆ ಹಿರಿಯರಲ್ಲಿ ಅರಿವು ಮೂಡಿಸಿದರೆ ಅವರು ಈ ಕ್ಯಾನ್ಸರ್ ಕಾಯಿಲೆಗಳ ಆರಂಭಿಕ ಹಂತದಲ್ಲಿ ವೈದ್ಯಕೀಯ ನೆರವು ಪಡೆಯುವ ಸಾಧ್ಯವಾಗುತ್ತದೆ. ಮೊದಲ ಹಂತದಲ್ಲಿ ಕ್ಯಾನ್ಸರ್ ಪತ್ತೆ ಹಚ್ಚಿದರೆ ಅದು ಸಂಪೂರ್ಣ ಗುಣವಾಗುವ ಸಾಧ್ಯತೆಯೂ ಇರುತ್ತದೆ

ರೋಗವನ್ನು ಪತ್ತೆ ಹಚ್ಚುವುದರಿಂದ ಹಿಡಿದು ಅದರ ಸಂಪೂರ್ಣ ಚಿಕಿತ್ಸೆಯನ್ನು ಉತ್ತಮ ಸಂಸ್ಥೆಯಲ್ಲಿ ಪಡೆಯುವುದು ಬಹಳ ದುಬಾರಿಯಾಗಿದೆ. ಈ ಕಾರಣದಿಂದಾಗಿ ಗಂಭೀರ ಕಾಯಿಲೆಗಳು ವೃದ್ಧಾಪ್ಯದಲ್ಲಿರುವವರ ಜೀವಮಾನದ ಉಳಿತಾಯವನ್ನು ಖಾಲಿ ಮಾಡಿಸಬಹುದು. ಯಾವುದೆ ಗಂಭೀರ ಕಾಯಿಲೆಗಳು ಕಾಣಿಸಿಕೊಳ್ಳುವ ಮೊದಲೇ ಆರೋಗ್ಯ ವಿಮೆಯನ್ನು ಮಾಡಿಸಿಕೊಂಡರೆ ವೃದ್ಧಾಪ್ಯದಲ್ಲಿ ಸಹಾಯಕ್ಕೆ ಬರುತ್ತದೆ.

ಹೆಚ್ಚಿನ ಮಕ್ಕಳು ವೃದ್ಧಾಪ್ಯದಲ್ಲಿರುವ ತಂದೆ-ತಾಯಿಗಳ ಆಹಾರ ಮತ್ತು ವೈದ್ಯಕೀಯ ನೆರವಿನ ಕುರಿತು ಕಾಳಸಿ ವಹಿಸುತ್ತಾರೆ. ಆದರೆ ಅವರಿಗಿರುವ ಮಾನಸಿಕ ತಳಮಳಗಳನ್ನು ಗಮನಿಸುವುದಿಲ್ಲ. ವೃದ್ಧಾಪ್ಯದಲ್ಲಿರುವವರು ಅವರ ಮಾನಸಿಕ ಸಮತೋಲನವನ್ನು ಚೆನ್ನಾಗಿಟ್ಟುಕೊಳ್ಳಲು ತಮ್ಮ ಸಮಾನಮನಸ್ಕರ ಜೊತೆಗೆ ಬೆರೆಯುವುದು ಮತ್ತು ತಮ್ಮ ಇಷ್ಟದ ಚಟುವಟಿಕೆಗಳಲ್ಲಿ ಪಾಲುಗೊಳ್ಳುವುದು ಅತ್ಯಗತ್ಯ. ಹಿರಿಯರು ಸಾಮಾಜಿಕವಾಗಿ ಮೂಲೆಗೆ ಸರಿದರೆ ಅದು ಅವರ ಆತ್ಮವಿಶ್ವಾಸ ಮತ್ತು ಮಾನಸಿಕ ಸಂತೃಪ್ತಿಯ ಮೇಲೆ ಕೆಟ್ಟ ಪ್ರಭಾವವನ್ನು ಬೀರಿ ದೈಹಿಕ ಆರೋಗ್ಯವನ್ನು ಹಾಳುಮಾಡಬಲ್ಲದು. ಅವರನ್ನು ಬಂಗಾರದ ಪಂಜರದೊಳಗೆ ಇಡುವ ಬದಲು ತಮಗಿಷ್ಟದ ಚಟುವಟಿಕೆಗಳನ್ನು ಮಾಡಲು ಅವಕಾಶ ಮಾಡಿಕೊಟ್ಟಲ್ಲಿ ಅವರ ಆಯುಸ್ಸು ವೃದ್ಧಿಯಾಗುವುದರಲ್ಲಿ ಅನುಮಾನವಿಲ್ಲ. ಮನೆಯಲ್ಲಿ ಆಟವಾಡಲು ಮೊಮ್ಮಕ್ಕಳಿದ್ದಾಗ ಹಿರಿಯರ ಆರೋಗ್ಯ ವೃದ್ಧಿಯಾಗುವುದನ್ನು ನಾವು ಅನೇಕ ಮನೆಗಳಲ್ಲಿ ಗಮನಿಸಬಹುದು. ವಯಸ್ಸಾದ ಹಿರಿಯರು ಮಕ್ಕಳಂತೆ ನಡೆದುಕೊಳ್ಳುವುದು, ಹಠ ಮಾಡುವುದು ಸಹಜ. ಅವರಿಗೆ ಭಾವನಾತ್ಮಕವಾಗಿ ಸ್ಪಂದಿಸುವ ವಾತಾವರಣವಿದ್ದಲ್ಲಿ ಮತ್ತು ಮಕ್ಕಳನ್ನು ನೋಡಿಕೊಳ್ಳುವಂತೆ ಅವರ ಆರೋಗ್ಯ ಮತ್ತು ಆಹಾರದ ಕುರಿತು ಕಾಳಜಿವಹಿಸಿದ್ದರೆ ಅವರು ತಮ್ಮ ಜೀವನದ ಕೊನೆಯ ವರ್ಷಗಳು ಹೆಚ್ಚು ಅರ್ಥಪೂರ್ಣವಾಗಿ ಕಳೆಯಬಲ್ಲರು. ❖

ಆಪ್ತ ಸಮಾಲೋಚನೆ ಎಂಬ ದಿಕ್ಸೂಚಿ

ಡಾ. ವಿನಯ ಶ್ರೀನಿವಾಸ್



ಈ ಮನಸ್ಸು ಗೊಂದಲ-ಗೋಜಲುಗಳ ಗೂಡು. ನಾವು ಎಷ್ಟೇ ಕ್ರಮಬದ್ಧವಾದ ಜೀವನವನ್ನು ನಡೆಸುತ್ತಿದ್ದರೂ ಒಮ್ಮೊಮ್ಮೆ ಮನಸ್ಸು ಭಾವಯಾನದ ತೀವ್ರಾತೀವ್ರತೆಯಲ್ಲಿ ಹೊಯ್ದಾಡುವುದಿದೆ. ಎಷ್ಟೋ ಬಾರಿ ನಮ್ಮ ನಿರ್ಧಾರಗಳು ಮತ್ತು ನಡವಳಿಕೆಗಳು ಸರಿಯೋ ತಪ್ಪೋ ಎಂಬ ದ್ವಂದ್ವದಲ್ಲಿಯೇ ದಿನಗಳನ್ನು ನೂಕುತ್ತಿರುತ್ತೇವೆ. ಇನ್ನು ಕೆಲವರಿಗೆ ಮಹತ್ವದ ಕಾರ್ಯಗಳನ್ನು ಮಾಡುವ ಮನಸ್ಸು ಮತ್ತು ಪ್ರತಿಭೆಯಿದ್ದರೂ ಸಮಯ ನಿರ್ವಹಣೆಯಲ್ಲಿ ಸೋಲುತ್ತಾರೆ. ಮತ್ತೆ ಕೆಲವರಿಗೆ ತಮ್ಮ ಸಾಮರ್ಥ್ಯ ಮೀರಿ ಸಾಧಿಸುವ ಆಸೆ. ಒಮ್ಮೆಲೇ ಹತ್ತು ಹಲವು ಕಡೆ ಕೈ ಹಾಕಿ ಎಲ್ಲಿಯೂ ಮುಂದಕ್ಕೆ ಸಾಗದೆ ನಿಂತ ನೀರಿನಂತಾಗುತ್ತಾರೆ, ಹತಾಶರಾಗುತ್ತಾರೆ. ಇಂತಹ ಪ್ರಸಂಗಗಳು ಮನಸ್ಸನ್ನು ಗಾಸಿಗೊಳಿಸಿದಾಗ ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನೂ ಪರಿಪೂರ್ಣವಾಗಿ ಪೂರೈಸಲು ಅಸಮರ್ಥರಾಗುತ್ತಾರೆ. ಅದರಿಂದ ಮತ್ತಷ್ಟು ಅಸಮಾಧಾನಗೊಳ್ಳುತ್ತಾರೆ; ಎಲ್ಲ ಕೆಲಸಗಳಲ್ಲಿ ಹಿಂದುಳಿಯುತ್ತಾರೆ. ಇದು ವ್ಯಕ್ತಿಯನ್ನು ಸಮಸ್ಯೆಯ ಸುಳಿಗಳಲ್ಲಿ ಸಿಕ್ಕಿಸಿ, ಇನ್ನಷ್ಟು ಕುಗ್ಗಿಸುತ್ತದೆ.

ಇಂಥ ಪರಿಸ್ಥಿತಿಯಲ್ಲಿ ವ್ಯಕ್ತಿ ತನ್ನ ಮನಸ್ಸಿನ ತುಮುಲಗಳನ್ನು ಮತ್ತೊಬ್ಬರಲ್ಲಿ ಹಂಚಿಕೊಂಡರೆ ಒಂದಿಷ್ಟು ಸಮಾಧಾನ ಸಿಗುತ್ತದೆ. ಅಷ್ಟೇ ಅಲ್ಲ, ಅವರ ಸಣ್ಣಪುಟ್ಟ ಸಮಸ್ಯೆಗಳಿಗೆ ಪರಿಹಾರವೂ ಸಿಗಬಹುದು. ಮುಂದಿನ ಬದುಕಿನ ದಿಕ್ಸೂಚಿಯೂ ದೊರೆಯಬಹುದು. ಆದರೆ, ತೀರ ವೈಯಕ್ತಿಕ ವಿಷಯಗಳನ್ನು ಎಲ್ಲರೊಂದಿಗೂ ಹಂಚಿಕೊಳ್ಳಲಾಗುವುದಿಲ್ಲ. ಅಂತಹದ್ದಕ್ಕೆ ಎದುರಿನ ವ್ಯಕ್ತಿ ಆತ್ಮೀಯನಾಗಿರಬೇಕು. ಕುಟುಂಬದ ಸದಸ್ಯನೋ ಅಥವಾ ಆಪ್ತ ಗೆಳೆಯ/ಗೆಳತಿಯಾಗಿದ್ದರೆ ಇನ್ನೂ ಸೂಕ್ತ. ಆದರೆ, ಕೆಲವೊಮ್ಮೆ ಹತ್ತಿರದವರ ಬಳಿಯೂ ನಿವೇದಿಸಿಕೊಳ್ಳಲು ಮುಜುಗರವಾಗಬಹುದು. ಮುಂದಿನ ಜೀವನವೆಲ್ಲ ಜೊತೆಯಲ್ಲಿಯೇ ಇರಬೇಕಾದ ಕುಟುಂಬದವರೊಡನೆ ತಮ್ಮ ಮನಸ್ಸಿನಾಳದ ವಿಷಯಗಳನ್ನು ವ್ಯಕ್ತಪಡಿಸಲು ಕೆಲವೊಮ್ಮೆ ಇರಿಸುಮುರಿಸಾಗಬಹುದು. ಅಂತರ್ಯದ ಎಲ್ಲ ವಿಚಾರಗಳನ್ನು ತೆರೆದ ಮನಸ್ಸಿನಿಂದ ಹೇಳಲು ಕಷ್ಟವೆನಿಸಬಹುದು. ಅಷ್ಟೇ ಅಲ್ಲ, ಕೇಳಿಸಿಕೊಳ್ಳುವ ಎದುರಿನ ವ್ಯಕ್ತಿಗೆ ಸಹನೆ ಸಮಾಧಾನವಿಲ್ಲದಿದ್ದರೆ, ಅಂತಹವರಲ್ಲಿ ಸಮಸ್ಯೆಗಳನ್ನು ಹೇಳಿಕೊಳ್ಳುವುದು ವ್ಯರ್ಥ ಎನಿಸಬಹುದು. ಗಂಭೀರವಾಗಿ ವ್ಯಕ್ತಿ ತನ್ನ ಸಮಸ್ಯೆ ನೋವುಗಳನ್ನು ಹಂಚಿಕೊಳ್ಳುವ ವೇಳೆ ಎದುರಿನವರು ನಿರಾಸಕ್ತಿ ತೋರಿದರೆ, ಸರಿಯಾಗಿ ಸ್ಪಂದಿಸದಿದ್ದರೆ ಮತ್ತಷ್ಟು ಹತಾಶೆಯೇ. ಬಹು ನಿರೀಕ್ಷೆಯಿಂದ ನಮ್ಮ ದ್ವಂದ್ವಗಳನ್ನು ಮತ್ತು ಮನಸ್ಸಿನ ವಿಚಾರಗಳನ್ನು ನಿವೇದಿಸಿಕೊಳ್ಳುವಾಗ ಎದುರಿನ ವ್ಯಕ್ತಿ ಅಂತಹದ್ದೇ ಆತನ ಸಮಸ್ಯೆಗಳನ್ನು ಹೇಳಿಕೊಳ್ಳಲು ಶುರು ಮಾಡಿದರೆ ಅದು ಮತ್ತಷ್ಟು ಹಿಂಸೆ. ಪರಿಹಾರ ಸೂಚಿಸದೆ ಸಮಸ್ಯೆಯ ಸುತ್ತಲೇ ಗಿರಕಿ ಹೊಡೆದರೆ ಅದು ವ್ಯಕ್ತಿಯನ್ನು ಮತ್ತಷ್ಟು ಗಾಸಿಗೊಳಿಸೀತು. ನಮ್ಮ ಅಸಲಿ ಭಾವನೆಗಳನ್ನು ನಕಲಿ ಮನುಷ್ಯರೊಂದಿಗೆ ಹಂಚಿಕೊಳ್ಳಲಾಗುವುದೇ? ಹಾಗಾಗಿಯೇ ಇಂತಹದ್ದಕ್ಕೆ ಎದುರಿನ ವ್ಯಕ್ತಿ ಸಮಚಿತ್ತತೆಯನ್ನು ಹೊಂದಿದ, ಸಂಭಾವಿತ ಆತ್ಮೀಯನಾಗಿರಬೇಕು. ಇಲ್ಲದಿದ್ದರೆ ಸಮಸ್ಯೆ ಜಟಿಲಗೊಳ್ಳುವುದು ದಿಟ.

ಸಮಾಲೋಚನೆಯ ನೆರವು

ಇಂಥ ಮನಸ್ಸಿನ ಕಿರಿಕಿರಿಗಳಿಂದ ಹೊರಬರಲು, ನಮ್ಮಲ್ಲಿರುವ ಸಾಮರಸ್ಯಗಳನ್ನು ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳಲು, ಸಮಯ ನಿರ್ವಹಣೆಯನ್ನು ಕರಗತ ಮಾಡಿಕೊಳ್ಳಲು, ನಮ್ಮ ಕ್ಷಮತೆಯನ್ನು ಶೇಕಡ ನೂರರಷ್ಟು ಹೊರತರಲು ನಮಗೆ ಎಷ್ಟೋ ಬಾರಿ ಇನ್ನೊಬ್ಬರಿಂದ ಸಮಾಲೋಚನೆ/ ಸಾಂತ್ವನದ ಅಗತ್ಯವಿರುತ್ತದೆ. ಅಂತಹ ಎಲ್ಲ ಸನ್ನಿವೇಶಗಳಲ್ಲಿ ನಮ್ಮ ನೆರವಿಗೆ ಬರುವವರು ಆಪ್ತ ಸಮಾಲೋಚಕರು.

ಆದರೆ ಸಮಾಲೋಚಕರನ್ನು ಆಯ್ಕೆ ಮಾಡಿಕೊಳ್ಳುವಾಗ ಕೆಲವು ಅಂಶಗಳನ್ನು ನೆನಪಿನಲ್ಲಿಡಬೇಕು. ಆದಷ್ಟೂ ವೃತ್ತಿಪರ ಮತ್ತು ಮನೋವೈದ್ಯರ ಸಂಪರ್ಕವಿರುವ ಆಪ್ತ ಸಮಾಲೋಚಕರನ್ನು ಆರಿಸಿಕೊಳ್ಳುವುದು ಸೂಕ್ತ. ನಮ್ಮ ಗೋಜಲುಗಳಿಗೆ ಕಿವಿಯಾಗುವ ಚಾಕಚಕ್ಯತೆಯು ವೃತ್ತಿಪರ ಆಪ್ತಸಮಾಲೋಚಕರಿಗೆ ಇರುತ್ತದೆ. ಅವರು ನಮ್ಮ ಸಮಸ್ಯೆಗಳನ್ನು ಆಲಿಸಿ, ಅವುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುತ್ತಾರೆ. ನಮ್ಮ ವ್ಯಕ್ತಿತ್ವದ ಮಜಲುಗಳನ್ನು ಅರ್ಥ ಮಾಡಿಕೊಳ್ಳುವ ವಿಧಾನಗಳನ್ನು ಅವರು ಅಧ್ಯಯನದಿಂದ ಅರಿತಿರುತ್ತಾರೆ. ಸಾಮಾನ್ಯವಾಗಿ ಉತ್ತಮ ಕೇಳುಗರಾಗಿರುವ ಆಪ್ತ ಸಮಾಲೋಚಕರು ನಮ್ಮ ವಿಷಯಧಾರೆಯನ್ನು ಸಾವಧಾನದಿಂದ ಕೇಳಿಸಿಕೊಂಡು ಸಮರ್ಪಕವಾದ ಸ್ಪಂದನೆಯನ್ನು ಕೊಡುತ್ತಾರೆ. ನಮ್ಮ ಅಭಿಪ್ರಾಯ, ನಡವಳಿಕೆ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿ ತಪ್ಪುಗಳಿದ್ದರೆ ನಮ್ಮ ಅರಿವಿಗೆ ತರುತ್ತಾರೆ. ನಮ್ಮ ಮಿತಿಯಲ್ಲಿರುವ ಸುಧಾರಣಾ ಕ್ರಮಗಳ ಬಗ್ಗೆ ತಿಳಿ ಹೇಳುತ್ತಾರೆ. ನಮ್ಮಲ್ಲಿನ ಕುಂದುಗಳನ್ನು ಎತ್ತಿ ತೋರಿಸಿ, ಸರಿಪಡಿಸುವ ಮಾರ್ಗಗಳನ್ನೂ ಸೂಚಿಸುತ್ತಾರೆ. ನಾವು ತಪ್ಪು ದಾರಿಯನ್ನು ತುಳಿಯುತ್ತಿದ್ದರೆ, ತಪ್ಪು ನಿಲುವುಗಳನ್ನು ಹೊಂದಿದ್ದರೆ ಅದನ್ನೂ ತಿದ್ದುತ್ತಾರೆ. ಎಷ್ಟೋ ಬಾರಿ ಒಬ್ಬ ದಕ್ಷ ಆಪ್ತ ಸಮಾಲೋಚಕನ ಬಳಿ ಸಮಸ್ಯೆಯ ನಿವೇದನೆಯೇ ಮನಸ್ಸನ್ನು ಹಗುರಾಗಿಸುತ್ತದೆ.

ನುರಿತ ಹಾಗೂ ವೃತ್ತಿಪರ ಸಮಾಲೋಚಕರು ಮನೋವೈದ್ಯಕೀಯ ಕಾಯಿಲೆಗಳ ಗುಣಲಕ್ಷಣಗಳ ಬಗ್ಗೆಯೂ ಅಧ್ಯಯನದ ವೇಳೆ ಅಭ್ಯಸಿಸಿರುತ್ತಾರೆ. ಒಂದು ವೇಳೆ ನಮ್ಮ ಸಮಸ್ಯೆಯು ಸರಳವಾಗಿರದೆ, ಮನೋವೈಕಲ್ಯಕ್ಕೆ ಸಂಬಂಧಿಸಿದ್ದು ಎಂದು ತಿಳಿದು ಬಂದರೆ ಒಮ್ಮೆ ಮನೋವೈದ್ಯರ ಸಲಹೆಯನ್ನು ಪಡೆಯಲೂ ಸೂಚಿಸುತ್ತಾರೆ. ಹೀಗೆ ಮುದುಡಿದ ಮನಸ್ಸನ್ನು ಅರಳಿಸುವ ಎಲ್ಲ ಪ್ರಯತ್ನಗಳನ್ನು ಸಮಾಲೋಚಕರು ಮಾಡುವುದರಿಂದ ಗೊಂದಲದ ಗೂಡಾದ ಮನಸ್ಸು ತಿಳಿಯಾಗುತ್ತದೆಯಲ್ಲದೆ ನಮ್ಮ ಕ್ಷಮತೆಯೂ ವೃದ್ಧಿಸುತ್ತದೆ.

ಮುಚ್ಚಿದ ದಾರಿ ತೆರೆಯಲಿ

ನಾವು ಎಷ್ಟೇ ಶಿಸ್ತುಬದ್ಧ ಬದುಕನ್ನು ನಡೆಸುತ್ತೇವಾದರೂ ಒಮ್ಮೊಮ್ಮೆ ಎಡವುದಿದೆ. ಹಲವು ಜವಾಬ್ದಾರಿಗಳನ್ನು, ಕರ್ತವ್ಯಗಳನ್ನು ನಿಭಾಯಿಸುವಾಗ ಮನಸ್ಸು ಗೊಂದಲಗೊಳ್ಳುವುದಿದೆ. ಏನೇ ಸರಿಪಡಿಸಿಕೊಂಡರೂ ನಮ್ಮ ತಪ್ಪುಗಳು ನಮಗೆ ಕಾಣಿಸದೆ ಸುತ್ತಲಿನವರ ತಪ್ಪುಗಳೇ ಎದ್ದುಕಾಣುವುದಿದೆ. ನಮ್ಮ ಬೆನ್ನು ನಮಗೆ ಕಾಣದು – ಎಂಬಂತೆ ನಮ್ಮ ಲೋಪದೋಷಗಳು ನಮ್ಮರಿವಿಗೆ ಬಾರದೆಯೇ ಉಳಿದುಬಿಡುತ್ತವೆ. ಬದುಕಿನಲ್ಲಿ ಸರಿ-ತಪ್ಪುಗಳನ್ನು ವಿಶ್ಲೇಷಿಸಲು ಅಸಮರ್ಥರಾಗಿಬಿಡುತ್ತೇವೆ. ಇಂತಹ ಪರಿಸ್ಥಿಯಲ್ಲಿ ಒಬ್ಬ ವೃತ್ತಿಪರ ಹಾಗೂ ಮನೋವೈದ್ಯರ ಸಂಪರ್ಕದಲ್ಲಿ ಕಾರ್ಯನಿರ್ವಹಿಸುವ ಆಪ್ತಸಮಾಲೋಚಕರ ಭೇಟಿ ಅತ್ಯಗತ್ಯ. ಅವರು ನಮ್ಮ ಸಮಸ್ಯೆಯ ತಿರುಳನ್ನು ವೈಜ್ಞಾನಿಕವಾಗಿ ಹೊಕ್ಕು, ಹೆಚ್ಚಿನ ಸಂದರ್ಭಗಳಲ್ಲಿ ನಮ್ಮ ಸಮಸ್ಯೆಗೆ ನಾವೇ ಪರಿಹಾರ ಕಂಡುಕೊಳ್ಳುವಲ್ಲಿ ನೆರವಾಗುತ್ತಾರೆ. ಕರುಣೆ ಮತ್ತು ಅನುಭೂತಿಯಿಂದ ಸ್ಪಂದಿಸಿ ಬದುಕಿನಲ್ಲಿ ಮುಚ್ಚಿದ ದಾರಿಯನ್ನು ತೆರೆಯಲು ಅನುವು ಮಾಡಿಕೊಡುತ್ತಾರೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಅಧ್ಯಾಯ1 :ಸಮಾಂತರ ಶ್ರೇಢಿ

ಅಭ್ಯಾಸ 1.1

3) ಇವುಗಳಲ್ಲಿ ಯಾವುವು ಸಮಾಂತರ ಶ್ರೇಢಿಗಳಾಗಿವೆ? ಸಮಾಂತರ ಶ್ರೇಢಿಗಳಾಗಿದ್ದಲ್ಲಿ ಸಾಮಾನ್ಯ ವ್ಯತ್ಯಾಸ ಕಂಡುಹಿಡಿದು ಅದರ ಮುಂದಿನ ಮೂರು ಪದಗಳನ್ನು ಬರೆಯಿರಿ

(..........ಹಿಂದಿನ ಸಂಚಿಕೆಯಿಂದ)

(x) $a, 2a, 3a, 4a, \ldots$

(xi) $a, a^2, a^3, a^4, \ldots$

(xii) $\sqrt{2}, \sqrt{8}, \sqrt{18}, \sqrt{32} \ \cdots$

(xiii) $\sqrt{3}, \sqrt{6}, \sqrt{9}, \sqrt{12}$................

(xiv) $1^2, 3^2, 5^2, 7^2, \ldots$

(xv) $1^2, 5^2, 7^2, 73, \ldots$

ಪರಿಹಾರ: (i) 2, 4, 8, 16, . . .

$a_2 - a_1 = 4 - 2 = 2 \Rightarrow a_3 - a_2 = 8 - 4 = 4$

$a_4 - a_3 = 16 - 8 = 8$

ಇಲ್ಲಿ $a_2 - a_1 \neq a_3 - a_2$ ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(ii) 2, 5/2 , 3, 7/2 ....

ಪರಿಹಾರ:

$2, \frac{5}{2}, 3, \frac{7}{2}, \ldots\ldots\ldots$

$$a_2 - a_1 = \frac{5}{2} - 2 = \frac{1}{2}$$

$$a_3 - a_2 = 3 - \frac{5}{2} = \frac{1}{2}$$

$$a_4 - a_3 = \frac{7}{2} - 3 = \frac{1}{2}$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = \frac{1}{2}$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

ಮುಂದಿನ ಮೂರು ಪದಗಳು

$$\frac{7}{2} + \frac{1}{2} = 4$$

$$4 + \frac{1}{2} = \frac{9}{2}$$

$$\frac{9}{2} + \frac{1}{2} = 5$$

(iii) – 1.2, – 3.2, – 5.2, – 7.2, ...

ಪರಿಹಾರ:

- 1.2, - 3.2, - 5.2, - 7.2, . . .

$$a_2 - a_1 = -3.2 - (-1.2) = -3.2 + 1.2 = 2.0$$

$$a_3 - a_2 = 5.2 - (-3.2) = -5.2 + 3.2 = 2.0$$

$$a_4 - a_3 = -7.2 - (-5.2) = -7.2 + 5.2 = 2.0$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = -2.0$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$-7.2 + (-2.0) = -9.2$$

$$-9.2 + (-2.0) = -11.2$$

$$-11.2 + (-2.0) = -13.2$$

(iv) – 10, – 6, – 2, 2, ...

ಪರಿಹಾರ:

$-10, -6, -2, 2, \ldots\ldots\ldots\ldots .$

$$a_2 - a_1 = -6 - (-10) = -6 + 10 = 4$$

$$a_3 - a_2 = -2 - (-6) = -2 + 6 = 4$$

$$a_4 - a_3 = 2 - (-2) = 2 + 2 = 4$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$2 + 4 = 6$$

$$6 + 4 = 10$$

$$10 + 4 = 14$$

(v) $3, 3+\sqrt{2}, 3+2\sqrt{2}, 3+3\sqrt{2}, \ldots$

Soln: $3, 3+\sqrt{2}, 3+2\sqrt{2}, 3+3\sqrt{2}, \ldots\ldots\ldots\ldots$

$$a_2 - a_1 = (3+\sqrt{2}) - 3 = \sqrt{2}$$

$$a_3 - a_2 = (3+2\sqrt{2}) - (3+\sqrt{2}) = \sqrt{2}$$

$$a_4 - a_3 = (3+3\sqrt{2}) - (3+2\sqrt{2}) = \sqrt{2}$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = \sqrt{2}$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$(3+3\sqrt{2}) + \sqrt{2} = 3 + 4\sqrt{2}$$

$$(3+4\sqrt{2}) + \sqrt{2} = 3 + 5\sqrt{2}$$

$$(3+5\sqrt{2}) + \sqrt{2} = 3 + 6\sqrt{2}$$

(vi) 0.2, 0.22, 0.222, 0.2222, . . .

ಪರಿಹಾರ:

0.2, 0.22, 0.222, 0.2222, ...

$$a_2 - a_1 = (0.22) - 0.2 = 0.02$$

$$a_3 - a_2 = (0.222) - (0.22) = 0.002$$

ಇಲ್ಲಿ $a_2 - a_1 \neq a_3 - a_2$ ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(vii) 0, – 4, – 8, –12, ...

Soln: 0, -4, -8, -12, ...

$$a_2 - a_1 = -4 - 0 = -4$$

$$a_3 - a_2 = -8 - (-4) = -8 + 4 = -4$$

$$a_4 - a_3 = -12 - (-8) = -12 + 8 = -4$$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 2

ELECTROSTATIC POTENTIAL AND CAPACITANCE

13. A metal foil is placed midway between the plates of a parallel plate capacitor. What is the capacitance of the capacitor?

Ans:- When a metal foil is placed midway between the plates of a parallel plate capacitor, the capacitance of the capacitor remains unchanged.

14. Which is the conductor that can take unlimited charge?

Ans:- Earth is the conductor that can take unlimited charge.

15. What is a variable capacitor?

Ans:- A variable capacitor is the one in which the effective area of the plates and hence the capacitance of the capacitor can be varied between certain limits.

16. What is the dielectric constant of a perfect conductor?

Ans:- Infinity.

17. What are supercaps?

Ans:- The supercaps are super capacitors of modest size having a large capacitance of the order of one farad. They are used as the back-up voltage sources for computers.

18. A capacitor has a charge of 6 x 10^{-4} C. When the p.d across the plates is 150 Volts, what is the capacitance?

$$\text{Ans}: - \text{The capacitance}, C = \frac{Q}{V} = \frac{6 \times 10^{-4}}{150} = 4\,\mu F$$

19. Compare the effective capacitance of two equal capacitors when connected in series and in parallel.

Ans:- The ratio of the effective capacitance of the 'n' identical capacitors first connected in series and then in parallel is $1 : n^2$

Therefore , when n = 2; the ratio of the capacitance is 1 : 4.

20. Three capacitors of capacitance 3 μF, 4 μF and 5 μF are in parallel across a cell. What is the ratio of their charges?

Ans:- The capacitance of the capacitors in parallel combination is directly proportional to the charge on it. Therefore, the ratio of their charges are 3 : 4 : 5.

21. A pair of capacitors is connected in parallel while an identical pair is connected in series. Which pair will be more dangerous to handle when the same p.d is given to both of them?

Ans:- A pair of capacitors connected in parallel will be more dangerous to handle.

22. Write a note on the electrostatic field energy density in a parallel plate capacitor.

Ans:- Electrostatic field energy density In a parallel plate capacitor - The energy stored in the capacitor is, the energy stored in the electric field in the space between the plates of a capacitor.

This energy stored per unit volume of the space between the plates of the capacitor is known as energy density.

Consider a parallel plate capacitor of capacitance C. Let A be the area of each plate and d be the distance between the two plates of the capacitors. When the capacitor is charged to voltage V, the energy stored in the capacitor,

$$U = \frac{1}{2} CV^2 \quad \ldots\ldots\ldots\ldots(i)$$

But capacitance of a parallel plate capacitor is given by

$$C = \frac{\epsilon_0 A}{d} \quad \ldots\ldots\ldots\ldots(ii)$$

and potential difference, $V = Ed$ ……(iii)

Using eqn. (ii) and (iii) in eqn. (i), we get

$$U = \frac{1}{2} \epsilon_0 E^2 Ad$$

Since volume of the capacitor = Ad

$$\therefore \text{Energy density}, U_E = \frac{1}{2} \epsilon_0 E^2 = \frac{1}{2} \epsilon_0 \vec{E}.\vec{E} \quad \ldots\ldots.(iv)$$

SI unit of energy density is J m^{-3}.

Dimensional formula of energy

$$\text{density} = \frac{\text{energy}}{\text{volume}} = \frac{ML^2T^{-2}}{L^3} = [ML^{-1}T^{-2}]$$

23. Write a note on the Common Potential.

Ans:- When two capacitors charged to different potentials are connected in parallel by a metallic wire, charge flows from a capacitor at higher potential to the capacitor at lower potential. This flow of charge continues till potential of both the capacitors become equal. The equal potential of both the capacitors is known as common potential.

During sharing of charge, no charge is lost or gained. Consider two capacitors of capacitance C_1 and C_2.

Let V_1 and V_2 be their potentials respectively.

Total charge on both the capacitors before sharing, $q = C_1 V_1 + C_2 V_2$

Let V be the common potential of both the capacitors sharing the charges. (Contd….)

ಅಂಡಮಾನ್ ಮತ್ತು ನಿಕೋಬಾರ್‌ನ ಪೋರ್ಟ್‌ಬ್ಲೇರ್‌ನಲ್ಲಿ ವಿಮಾನ ವಿಳಂಬ

ಕರ್ನಾಟಕದ ಪ್ರವಾಸಿಗರು ಅತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಡಮಾನ್ ಮತ್ತು ನಿಕೋಬಾರ್ ದ್ವೀಪಕ್ಕೆ ಪ್ರವಾಸ ತೆರಳಿದ್ದ ಕರ್ನಾಟಕದ ಸುಮಾರು 150 ಮಂದಿ ಪ್ರವಾಸಿಗರು ನಿಗದಿತ ವೇಳೆಗೆ ವಿಮಾನ ಸೇವೆ ಲಭ್ಯವಾಗದ ಕಾರಣ ಪೋರ್ಟ್‌ ಬ್ಲೇರ್ ವಿಮಾನನಿಲ್ದಾಣದಲ್ಲಿ ಅತಂತ್ರರಾಗಿದ್ದಾರೆ.

ಈ ಪ್ರವಾಸಿಗರು ಮೇ 22ರಂದು ಬೆಂಗಳೂರಿನಿಂದ 'ವಿಸ್ತಾರ' ವಿಮಾನದಲ್ಲಿ ಬಂದಿದ್ದರು. ಸೋಮವಾರ (ಮೇ 27) ಮಧ್ಯಾಹ್ನ 1.30ಗೆ ಇದೇ ಸಂಸ್ಥೆಯ ವಿಮಾನದಲ್ಲಿ ವಾಪಸಾಗಬೇಕಿತ್ತು. ಆದರೆ, ಸಂಜೆಯವರೆವಿಗೂ ವಿಮಾನ ಸೇವೆ ಲಭ್ಯವಾಗಿರಲಿಲ್ಲ.

ಪೂರ್ವನಿಗದಿಯಂತೆ ವಿಮಾನ ಏರಲು,ಬೆಳಿಗ್ಗೆ 11 ಗಂಟೆ ವೇಳೆಗೆ ನಿಲ್ದಾಣಕ್ಕೆ ಬಂದಿದ್ದೆವು. ಚೆಕ್ ಇನ್ ಆಗಿ ಬೋರ್ಡಿಂಗ್ ಪಾಸ್ ಕೂಡಾ ಕೊಟ್ಟಿದ್ದರು. ಸಂಜೆಯಾದರೂ ವಿಮಾನ ಬಂದಿರಲಿಲ್ಲ. ಸಮರ್ಪಕ ಮಾಹಿತಿ ನೀಡಿರಲಿಲ್ಲ. ಊಟ, ನೀರಿನ ವ್ಯವಸ್ಥೆಯನ್ನು ಸಂಬಂಧಿತ ಸಂಸ್ಥೆಯವರು ಮಾಡಲಿಲ್ಲ ಎಂದು ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದರು.



ಪೋರ್ಟ್‌ಬ್ಲೇರ್ ವಿಮಾನ ನಿಲ್ದಾಣದಲ್ಲಿ ಅತಂತ್ರರಾಗಿರುವ ಕರ್ನಾಟಕದ ಮೂಲದ ಪ್ರವಾಸಿಗರು

'ತಾಂತ್ರಿಕ ಕಾರಣದಿಂದ ವಿಮಾನ ನಿಲ್ದಾಣದಲ್ಲಿ ಇಳಿದಿಲ್ಲ ಎಂದು ಸ್ಥಳೀಯ ಸಿಬ್ಬಂದಿ ತಿಳಿಸುತ್ತಿದ್ದಾರೆ. ಸಂಜೆ 7 ಗಂಟೆಯಾದರೂ ವಿಮಾನ ಬರುವ ಸೂಚನೆಗಳು ಇಲ್ಲ. ನಿಲ್ದಾಣದಲ್ಲಿಯೇ ಉಳಿಯಲು ಅವಕಾಶವಿಲ್ಲ ಎಂದು ಅಧಿಕಾರಿಗಳು ತಿಳಿಸುತ್ತಿದ್ದಾರೆ. ಇದರಿಂದ ಆತಂಕವಾಗಿದೆ ಎಂದು ಮೈಸೂರಿನ ನಿವೃತ್ತ ಪ್ರಾಂಶುಪಾಲರಾದ ಪರಮೇಶ್ವರ ಅಳಲು ತೋಡಿಕೊಂಡರು.

ಮೈಸೂರಿನ 9 ಕುಟುಂಬಗಳ 18 ಜನರಿದ್ದಾರೆ. ಚಿತ್ರದುರ್ಗ, ದಾವಣಗೆರೆ, ಬೆಂಗಳೂರಿನ ಪ್ರವಾಸಿಗರು ಸೇರಿ ಕರ್ನಾಟಕದ ಸುಮಾರು 180 ಜನರಿದ್ದಾರೆ. ವಿಮಾನ ಸೇವೆ ಲಭ್ಯವಾಗುವ ಕುರಿತು ಸಿಬ್ಬಂದಿ ಖಚಿತ ಮಾಹಿತಿ ಸಿಗುತ್ತಿಲ್ಲ ಎಂದು ವಿವರಿಸಿದರು.

ಇಂಡಿಗೊ ಮತ್ತು ಏರ್ ಇಂಡಿಯಾ ವಿಮಾನಗಳು ನಿಲ್ದಾಣದಲ್ಲಿ ಇಳಿದಿವೆ. ವಾತಾವರಣವು ತಿಳಿಯಾಗಿದೆ. 'ವಿಸ್ತಾರ'ದ ಒಂದು ವಿಮಾನ ಬಂದಿತಾದರೂ ಆಗಸದಲ್ಲಿಯೇ ಎರಡು ಸುತ್ತು ಹಾಕಿ, ಚೆನ್ನೈಗೆ ಮರಳಿದೆ ಎಂದು ಮಾಹಿತಿ ನೀಡಿದರು.

ವಿಮಾನ ಸೇವೆಯು ವಿಳಂಬವಾದ ಕಾರಣ ನಿಲ್ದಾಣದ ಸ್ಥಳೀಯ ಅಧಿಕಾರಿಗಳು ಬ್ರೆಡ್ ತರಿಸಿಕೊಟ್ಟಿದ್ದಾರೆ. ಪ್ರವಾಸಿಗರಲ್ಲಿ 55–60 ವರ್ಷ ಮೀರಿದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ಅವರು ತಿಳಿಸಿದರು.

'ಮುಂಗಾರಿನ ಮುನ್ನಡೆಗೆ ಅನುಕೂಲಕರ ಸ್ಥಿತಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಗಾರು ಮಾರುತದ ಮುನ್ನಡೆಯು ವಾಡಿಕೆಗೆ ಅನುಗುಣವಾಗಿಯೇ ಇದ್ದು, ಅದು ದೇಶದ ಎಲ್ಲೆಡೆ ವ್ಯಾಪಿಸಲು ಅಗತ್ಯವಿರುವ ಸ್ಥಿತಿ ಮುಂದುವರಿಯಲಿದೆ ಎಂದು ಕೇಂದ್ರ ಹವಾಮಾನ ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ತಿಳಿಸಿದರು.

ಮುಂಗಾರು ಮಾರುತವು ಮುನ್ನಡೆ ಕಾಣುತ್ತದೆ. ಅದು ಜೂನ್ 1ರ ಬದಲು, ಮೇ 31ರಂದೇ ಕೇರಳ ಪ್ರವೇಶಿಸುವ ನಿರೀಕ್ಷೆ ಇದೆ ಎಂದು ಮಹಾಪಾತ್ರ ಹೇಳಿದರು. ದೇಶದ ಬಹುತೇಕ ಭಾಗಗಳಲ್ಲಿ ಈ ವರ್ಷ ಮುಂಗಾರು ಮಳೆಯು ವಾಡಿಕೆಗಿಂತ ತುಸು ಹೆಚ್ಚಿರಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಜೂನ್‌ನಿಂದ ಸೆಪ್ಟೆಂಬರ್ ವರೆಗಿನ ಮುಂಗಾರಿನ ಅವಧಿಯಲ್ಲಿ ಭಾರತದ ಕೇಂದ್ರ ಭಾಗದಲ್ಲಿ ಹಾಗೂ ದಕ್ಷಿಣ ಭಾಗದಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗುವ ನಿರೀಕ್ಷೆ ಇದೆ. ವಾಯವ್ಯ ಭಾಗದಲ್ಲಿ ವಾಡಿಕೆಗೆ ತಕ್ಕಷ್ಟು ಮಳೆಯಾಗಲಿದೆ. ಈಶಾನ್ಯ ಭಾಗದಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಆಗಲಿದೆ ಎಂದು ಇಲಾಖೆಯು ಹೇಳಿದೆ.

ಮುಂಗಾರು ಮಳೆಯ ಪ್ರಮಾಣವು ದೀರ್ಘಾವಧಿಯ ಸರಾಸರಿಗೆ ಹೋಲಿಸಿದರೆ ಈ ಬಾರಿ ಶೇ 106ರಷ್ಟು ಇರಲಿದೆ. ಈ ಲೆಕ್ಕಾಚಾರದಲ್ಲಿ ಶೇ 4ರಷ್ಟು ವ್ಯತ್ಯಾಸ ಆಗಲೂಬಹುದು ಎಂದಿದೆ.

ಮತ್ತೆ ಬಿಸಿಗಾಳಿ

ನವದೆಹಲಿ (ಪಿಟಿಐ): ದೇಶದ ವಾಯವ್ಯ ಭಾಗದಲ್ಲಿ ಹಾಗೂ ಕೇಂದ್ರದ ಭಾಗಕ್ಕೆ ಹೊಂದಿರುವ ಪ್ರದೇಶಗಳಲ್ಲಿ ಜೂನ್ ತಿಂಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಿಸಿಗಾಳಿಯ ದಿನಗಳು ಇರಲಿವೆ ಎಂದು ಹವಾಮಾನ ಇಲಾಖೆ ಹೇಳಿದೆ. ಆದರೆ ಮುಂದಿನ ಕೆಲವು ದಿನಗಳವರೆಗೆ ಹೆಚ್ಚಿನ ತಾಪಮಾನದಿಂದ ವಿನಾಯಿತಿ ಸಿಗಲಿದೆ ಎಂದು ಅದು ಹೇಳಿದೆ.

'ವಾಯವ್ಯ ಭಾರತದಲ್ಲಿ ಹಾಗೂ ಅದರ ಅಕ್ಕ–ಪಕ್ಕದಲ್ಲಿ ಇರುವ ಪ್ರದೇಶಗಳಲ್ಲಿ ಜೂನ್‌ನಲ್ಲಿ ಎರಡರಿಂದ ಮೂರು ದಿನಗಳ ಕಾಲ ಉಷ್ಣಗಾಳಿಯ ಪ್ರಭಾವ ಇರುವುದು ವಾಡಿಕೆ. ಈ ಬಾರಿ ಈ ಪ್ರದೇಶಗಳಲ್ಲಿ ಉಷ್ಣ ಗಾಳಿಯ ಪ್ರಭಾವವು 4– 6 ದಿನಗಳವರೆಗೆ ಇರಬಹುದು ಎಂಬುದು ನಮ್ಮ ನಿರೀಕ್ಷೆ' ಎಂದು ಮಹಾಪಾತ್ರ ತಿಳಿಸಿದರು. ಗುಜರಾತ್ ಮತ್ತು ರಾಜಸ್ಥಾನದಲ್ಲಿ ಮೇ ತಿಂಗಳಲ್ಲಿ ಒಂಬತ್ತರಿಂದ 12 ದಿನಗಳ ಕಾಲ ಉಷ್ಣಗಾಳಿಯ ಪ್ರಭಾವ ಇತ್ತು. ಅಲ್ಲಿ ತಾಪಮಾನವು 45 ಡಿಗ್ರಿ ಸೆಲ್ಸಿಯಸ್‌ನಿಂದ 50 ಡಿಗ್ರಿ ಸೆಲ್ಸಿಯಸ್‌ವರೆಗೂ ತಲುಪಿತ್ತು ಎಂದು ಅವರು ಹೇಳಿದರು. ಅಸ್ಸಾಂ ಕೂಡ ಉಷ್ಣಗಾಳಿಯ ಪ್ರಭಾವವನ್ನು ಅನುಭವಿಸಿತು ಎಂದರು.

'ರೀಮಲ್' ಅಬ್ಬರ: 2 ಲಕ್ಷ ಜನ ಅತಂತ್ರ

ಒಂದನೇ ಪುಟದಿಂದ..

24 ಬ್ಲಾಕ್‌ಗಳಲ್ಲಿ ಪರಿಣಾಮ: ಪಶ್ಚಿಮ ಬಂಗಾಳದಲ್ಲಿ 'ರೀಮಲ್' ಪರಿಣಾಮವು 24 ಬ್ಲಾಕ್‌ಗಳಲ್ಲಿ ಕಾಣಿಸಿಕೊಂಡಿದೆ. ಪ್ರಾಥಮಿಕ ವರದಿಗಳ ಪ್ರಕಾರ, 2,140 ಮರಗಳು, 337 ವಿದ್ಯುತ್ ಕಂಬಗಳು ಉರುಳಿವೆ. 14,941 ಮನೆಗಳು ಜಖಂಗೊಂಡಿವೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಈ ಪೈಕಿ ಒಟ್ಟು 1,003 ಮನೆಗಳು ಪೂರ್ಣವಾಗಿ ನಾಶವಾಗಿವೆ. ನಷ್ಟದ ಅಂದಾಜು ಹಾಗೂ ರಕ್ಷಣಾ ಕಾರ್ಯ ತ್ವರಿತಗತಿಯಲ್ಲಿ ನಡೆದಿದೆ. ಹಾನಿ ಪ್ರಮಾಣ ಏರಿಕೆಯಾಗಬಹುದು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಮುಂಜಾಗ್ರತೆಯಾಗಿ 2.07 ಲಕ್ಷ ಜನರನ್ನು ಸ್ಥಳಾಂತರಿಸಲಾಗಿದೆ. 1,438 ನಿರಾಶ್ರಿತ ಶಿಬಿರಗಳಲ್ಲಿ 77,288 ಜನರು ಸದ್ಯ ಆಶ್ರಯ ಪಡೆದಿದ್ದಾರೆ. ನಿವಾಸಿಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಕಾಕ್‌ದ್ವಿಪ್, ನಮ್ಖಾನಾ, ಸಾಗರ್ದ್ ದ್ವೀಪ, ಡೈಮಂಡ್ ಹಾರ್ಬರ್, ಫ್ರಸೇರ್‌ಗಂಜ್, ಬಖ್ಖಾಲಿ, ಮಂದಾರ್‌ಮನಿ ಪ್ರದೇಶಗಳಲ್ಲಿ ಸಮಸ್ಯೆ ಹೆಚ್ಚಾಗಿದೆ. ಭಾರಿ ಮಳೆ, ಗಾಳಿಯಿಂದ ಮನೆಗಳಿಗೆ ಹಾನಿ ಜೊತೆಗೆ ಮೂಲಸೌಲಭ್ಯಗಳು ಹಾಳಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನಗಳ ಮಾರ್ಗ ಬದಲು: ಪ್ರತಿಕೂಲ ಹವಾಮಾನದಿಂದಾಗಿ ಕೋಲ್ಕತ್ತ ನಿಲ್ದಾಣದಲ್ಲಿ ಇಳಿಯಬೇಕಾಗಿದ್ದ 8 ವಿಮಾನಗಳ ಮಾರ್ಗ ಬದಲಿಸಿ, ಗಯಾ, ಗುವಾಹಟಿ, ವಾರಾಣಸಿ, ಭುವನೇಶ್ವರ ನಿಲ್ದಾಣಗಳಲ್ಲಿ ಇಳಿಸಲಾಗಿದೆ. ವಿಮಾನ ನಿಲ್ದಾಣದ ಸೇವೆಯನ್ನು 21 ಗಂಟೆ ಸ್ಥಗಿತಗೊಳಿಸಲಾಗಿತ್ತು ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ರೀಮಲ್ ಚಂಡಮಾರುತದಿಂದ ಕೋಲ್ಕತ್ತದ ವಿಮಾನ ನಿಲ್ದಾಣದಲ್ಲಿ ಯಾವುದೇ ಹಾನಿ ಸಂಭವಿಸಿಲ್ಲ ಹಾಗೂ ವಿಮಾನ ನಿರ್ವಹಣಾ ಆವರಣ, ರನ್‌ವೇನಲ್ಲಿ ನೀರು ಸಂಗ್ರಹವಾಗಿಲ್ಲ ಎಂದೂ ಮಾಹಿತಿ ನೀಡಿದ್ದಾರೆ.


ಬಾಂಗ್ಲಾದ ಪಟುವಾಖಾಲಿಯಲ್ಲಿ ಸೊನಟೊಲ ನದಿ ಪಾತ್ರದಲ್ಲಿ ಭೂಮಿ ಕೊಚ್ಚಿಹೋಗಿದೆ —ಎಎಫ್‌ಪಿ ಚಿತ್ರ

'ರೀಮಲ್' ಎಂದರೆ...

ಢಾಕಾ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಮುಂಗಾರು ಪೂರ್ವದಲ್ಲಿ ಕಾಣಿಸಿಕೊಂಡಿರುವ ಈ ಹಂಗಾಮಿನ ಮೊದಲ ಚಂಡಮಾರುತ ಇದಾಗಿದೆ. ಇದಕ್ಕೆ 'ರೀಮಲ್' ಎಂದು ಒಮಾನ್ ಹೆಸರಿಸಿದೆ.

ರೀಮಲ್ ಎಂಬುದು ಅರೇಬಿಕ್ ಪದ. ಇದರ ಅರ್ಥ 'ಮರಳು' ಎಂಬುದಾಗಿದೆ ಎಂದು ಹಿಂದೂ ಮಹಾಸಾಗರ ವಲಯದಲ್ಲಿ ಚಂಡಮಾರುತಗಳಿಗೆ ಹೆಸರು ಸೂಚಿಸುವ ವ್ಯವಸ್ಥೆಯು ಮಾಹಿತಿ ನೀಡಿದೆ.

ಬಾಂಗ್ಲಾ: ವಿದ್ಯುತ್ ವ್ಯತ್ಯಯ– 1.5 ಕೋಟಿ ಜನರಿಗೆ ಸಮಸ್ಯೆ

ಒಂದನೇ ಪುಟದಿಂದ..

ಸುಮಾರು 1.5 ಕೋಟಿ ಜನರು ವಿದ್ಯುತ್ ಸಂಪರ್ಕದಿಂದ ವಂಚಿತರಾಗಿದ್ದಾರೆ.

'ಸೋಮವಾರದಂದು ಗಾಳಿಯ ವೇಗವು ಗಂಟೆಗೆ 80–90 ಕಿ.ಮೀಗೆ ತಗ್ಗಿದೆ' ಎಂದು ಹವಾಮಾನ ಇಲಾಖೆಯು ತಿಳಿಸಿದೆ.

ಚಂಡಮಾರುತದಿಂದಾಗಿ ಧಾರಾಕಾರ ಮಳೆಯಾಗಿದೆ. ಸದ್ಯ ಚಂಡಮಾರುತ ತುಸು ದುರ್ಬಲಗೊಂಡಿದೆ. ಇದರ ಪರಿಣಾಮವು ಪ್ರಮುಖವಾಗಿ ಬಾಂಗ್ಲಾದ ಬರಿಸಲ್, ಭೋಲಾ, ಪಟುವಾಖಾಲಿ, ಸತ್ಖಿರಾ ಮತ್ತು ಛಟ್ಟೊಗ್ರಾಂ ವ್ಯಾಪ್ತಿಯಲ್ಲಿ ಕಾಣಿಸಿಕೊಂಡಿದೆ. ಗ್ರಾಮೀಣ ಭಾಗದಲ್ಲಿ ವಿದ್ಯುತ್ ಪೂರೈಕೆ ಬಹುತೇಕ ವ್ಯತ್ಯಯವಾಗಿದೆ.

ಚಂಡಮಾರುತವು ಸದ್ಯ ಬಾಂಗ್ಲಾದ ಖುಲ್ನಾದ ಕೋಯ್ರಾ ಗ್ರಾಮ ವ್ಯಾಪ್ತಿಯಲ್ಲಿ ಸಕ್ರಿಯವಾಗಿದೆ. ಉತ್ತರಾಭಿಮುಖವಾಗಿ ಸಾಗುತ್ತಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ವಿಧಾನ ಪರಿಷತ್ ಚುನಾವಣೆಗೆ ಕಾಂಗ್ರೆಸ್‌ನ ಅಭ್ಯರ್ಥಿ ಆಯ್ಕೆ

ಸಿ.ಎಂ, ಡಿಸಿಎಂ ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ 11 ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ದೊರಕಲಿರುವ ಏಳು ಸ್ಥಾನಗಳ ಅಭ್ಯರ್ಥಿಗಳ ಆಯ್ಕೆ ಕುರಿತು ಪಕ್ಷದ ವರಿಷ್ಠರ ಜತೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಂಗಳವಾರ ದೆಹಲಿಗೆ ತೆರಳುವರು.

11 ಸ್ಥಾನಗಳ ಪೈಕಿ ಏಳು ಕಾಂಗ್ರೆಸ್‌ಗೆ ದೊರಕಲಿದ್ದು, ಬಿಜೆಪಿಗೆ ಮೂರು ಹಾಗೂ ಜೆಡಿಎಸ್‌ಗೆ ಒಂದು ಸ್ಥಾನ ದೊರಕಲಿವೆ. ಏಳು ಸ್ಥಾನಗಳಿಗೆ ಕಾಂಗ್ರೆಸ್‌ನಲ್ಲಿ 75ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ. ನಿವೃತ್ತಿಯಾಗುತ್ತಿರುವ ನಾಲ್ವರಲ್ಲಿ ಕೆಲವರು ಮತ್ತೊಂದು ಅವಧಿಗೆ ಮುಂದುವರಿಸುವಂತೆ ವರಿಷ್ಠರ ಮುಂದೆ ಬೇಡಿಕೆ ಇಟ್ಟಿದ್ದಾರೆ.

'ವಿವಿಧ ಸಂದರ್ಭಗಳಲ್ಲಿ ಪಕ್ಷದ 20ಕ್ಕೂ ಹೆಚ್ಚು ಮುಖಂಡರಿಗೆ ವಿಧಾನಪರಿಷತ್ ಸದಸ್ಯ ಸ್ಥಾನ ನೀಡುವುದಾಗಿ ವರಿಷ್ಠರು ಭರವಸೆ ನೀಡಿದ್ದರು. ಆ ಪಟ್ಟಿ ಹಾಗೂ ವಿಧಾನ ಪರಿಷತ್ ಸದಸ್ಯ ಸ್ಥಾನದ ಆಕಾಂಕ್ಷಿಗಳಾಗಿರುವವರ ಪಟ್ಟಿಗಳೊಂದಿಗೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಎಐಸಿಸಿ ಪ್ರಮುಖರನ್ನು ಭೇಟಿ ಮಾಡಲಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಜತೆ ಚರ್ಚಿಸಿದ ಬಳಿಕ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ.

ಆಕಾಂಕ್ಷಿಗಳೂ ದೆಹಲಿಯತ್ತ: ಪರಿಷತ್ ಸದಸ್ಯ ಸ್ಥಾನದ ಆಕಾಂಕ್ಷಿಗಳಾಗಿರುವ ಕೆಲವರು ಈಗಾಗಲೇ ದೆಹಲಿ ತಲುಪಿದ್ದು, ಹೈಕಮಾಂಡ್ ಪ್ರಮುಖರ ಮನವೊಲಿಕೆಗೆ ಯತ್ನಿಸುತ್ತಿದ್ದಾರೆ. ಅಭ್ಯರ್ಥಿಗಳ ಆಯ್ಕೆಗಾಗಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ದೆಹಲಿಗೆ ಹೊರಟಿರುವುದು ತಿಳಿಯುತ್ತಿದ್ದಂತೆ ಮತ್ತಷ್ಟು ಮಂದಿ ಆಕಾಂಕ್ಷಿಗಳು ರಾಷ್ಟ್ರ ರಾಜಧಾನಿಯತ್ತ ದೌಡಾಯಿಸುತ್ತಿದ್ದಾರೆ.

ಎರಡು ದಿನಗಳ ಕಾಲ ಚರ್ಚೆ ನಡೆಯಲಿದ್ದು, ಬುಧವಾರ ಸಂಜೆಯ ವೇಳೆಗೆ ಪಟ್ಟಿ ಅಂತಿಮಗೊಳ್ಳುವ ಸಾಧ್ಯತೆ ಇದೆ. ಆ ಬಳಿಕ ಇಬ್ಬರೂ ವಾಪಸಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಪಟ್ಟಿ ಸಿದ್ದ?: ಬಿಜೆಪಿ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ವರಿಷ್ಠರಿಗೆ ಕಳುಹಿಸಿದ್ದು, ಮಂಗಳವಾರ ಅಭ್ಯರ್ಥಿಗಳನ್ನು ಘೋಷಿಸುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಮೂರು ಸ್ಥಾನಗಳಿಗೆ 40 ಆಕಾಂಕ್ಷಿಗಳಿದ್ದು, 12 ಮಂದಿಯ ಪಟ್ಟಿಯೊಂದನ್ನು ರಾಜ್ಯ ಬಿಜೆಪಿ ದೆಹಲಿಗೆ ಕಳುಹಿಸಿದೆ. ಪಕ್ಷ ನಿಷ್ಠೆ, ಸಾಮಾಜಿಕ ಮತ್ತು ಪ್ರಾದೇಶಿಕ ನ್ಯಾಯವನ್ನು ಪರಿಗಣಿಸಿ ಅಭ್ಯರ್ಥಿಗಳ ಆಯ್ಕೆ ಆಗಲಿದೆ ಎಂದು ಮೂಲಗಳು ಹೇಳಿವೆ.

ಸಭೆ ನಡೆಸದಂತೆ ಮುಖ್ಯ ಚುನಾವಣಾಧಿಕಾರಿ ಸೂಚನೆ

ಲೋಕಸಭಾ ಚುನಾವಣೆ ಮತ್ತು ವಿಧಾನ ಪರಿಷತ್ ಚುನಾವಣೆಯ ಪ್ರಯುಕ್ತ ಮಾದರಿ ನೀತಿಸಂಹಿತೆ ಜೂನ್ 6ರವರೆಗೂ ಜಾರಿಯಲ್ಲಿದ್ದು, ಅಲ್ಲಿಯವರೆಗೆ ಅಧಿಕಾರಿಗಳ ಸಭೆ ಹಾಗೂ ವಿಡಿಯೊ ಸಂವಾದ ನಡೆಸದಂತೆ ರಾಜ್ಯದ ಮುಖ್ಯ ಚುನಾವಣಾಧಿಕಾರಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದ್ದಾರೆ.

'ಲೋಕಸಭಾ ಚುನಾವಣೆಯ ನೀತಿಸಂಹಿತೆ ಜೂನ್ 4ರವರೆಗೆ ಜಾರಿಯಲ್ಲಿದ್ದು, ವಿಧಾನ ಪರಿಷತ್ ಚುನಾವಣೆ ನೀತಿಸಂಹಿತೆ ಜೂನ್ 6ರವರೆಗೂ ಜಾರಿಯಲ್ಲಿರಲಿದೆ. ಈ ಮಧ್ಯೆಯೇ ಕೆಲವು ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಸೇರಿದಂತೆ ಇಲಾಖಾ ಮುಖ್ಯಸ್ಥರು ಸಭೆಗಳನ್ನು ನಡೆಸುತ್ತಿದ್ದಾರೆ. ಇದರಿಂದ ಲೋಕಸಭಾ ಚುನಾವಣೆಯ ಮತ ಎಣಿಕೆಗೆ ಸಿದ್ಧತೆ ಹಾಗೂ ವಿಧಾನ ಪರಿಷತ್ ಚುನಾವಣಾ ಕೆಲಸಗಳ ನಿರ್ವಹಣೆಗೆ ಅಡಚಣೆಯಾಗುತ್ತಿದೆ' ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರಿಗೆ ಸೋಮವಾರ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಜೂನ್ 6ರವರೆಗೆ ಅಂತಹ ಯಾವುದೇ ಸಭೆ ನಡೆಸಬಾರದು. ತುರ್ತು ಅಗತ್ಯವಿದ್ದರೆ ಮುಖ್ಯ ಚುನಾವಣಾಧಿಕಾರಿಯ ಕಚೇರಿ ಜತೆ ಸಮಾಲೋಚಿಸುವಂತೆ ಎಲ್ಲ ಇಲಾಖೆಗಳಿಗೆ ನಿರ್ದೇಶನ ನೀಡಬೇಕು ಎಂದು ಕೋರಿದ್ದಾರೆ.

ಸಲ್ಲಿಕೆಯಾಗದ ನಾಮಪತ್ರ

ವಿಧಾನಸಭೆಯಿಂದ ವಿಧಾನ ಪರಿಷತ್‌ನ 11 ಸ್ಥಾನಗಳ ಚುನಾವಣೆಗೆ ಸೋಮವಾರದಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿದ್ದು, ಮೊದಲ ದಿನ ಯಾವುದೇ ನಾಮಪತ್ರ ಸಲ್ಲಿಕೆಯಾಗಿಲ್ಲ.

ಸೋಮವಾರ ಚುನಾವಣಾ ಅಧಿಸೂಚನೆ ಪ್ರಕಟಿಸಲಾಗಿದೆ. ನಾಮಪತ್ರ ಸಲ್ಲಿಕೆಗೆ ಜೂನ್ 3 ಕೊನೆಯ ದಿನ. ಜೂನ್ 4ಕ್ಕೆ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಜೂನ್ 6 ಕೊನೆಯ ದಿನ. ಅಗತ್ಯವಿದ್ದಲ್ಲಿ ಜೂನ್ 13ಕ್ಕೆ ಮತದಾನ ನಡೆಯಲಿದೆ.

ಮೊದಲ ದಿನವೇ ಪಠ್ಯಪುಸ್ತಕ, ಸಮವಸ್ತ್ರ ವಿತರಣೆ • 31ರಂದು ಮಕ್ಕಳಿಗೆ ಪ್ರಾರಂಭೋತ್ಸವದ ಸಿಹಿಯೂಟ

ರಾಜ್ಯದಲ್ಲಿ ಶಾಲೆಗಳ ಪುನರಾರಂಭ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಮೇ 29 ರಿಂದ ಪುನರಾರಂಭವಾಗುತ್ತಿದ್ದು, 31ರಂದು ರಾಜ್ಯದ ಎಲ್ಲ ಶಾಲೆಗಳಲ್ಲೂ ಏಕಕಾಲಕ್ಕೆ ಪ್ರಾರಂಭೋತ್ಸವ ಹಮ್ಮಿಕೊಳ್ಳಲಾಗಿದೆ.

2024–25 ನೇ ಸಾಲಿನ ಶಿಕ್ಷಣವನ್ನು 'ಶೈಕ್ಷಣಿಕ ಬಲವರ್ಧನೆ' ಪರಿಕಲ್ಪನೆಯ ಆಧಾರದಲ್ಲಿ ನಿರ್ವಹಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಘೋಷ ವಾಕ್ಯ ಸಿದ್ಧಪಡಿಸಿದ್ದು, ಕಲಿಕಾ ಗುಣಮಟ್ಟ ಹಾಗೂ ತಂತ್ರಜ್ಞಾನ ಆಧಾರಿತ ಬೋಧನೆಗೆ ಹೆಚ್ಚಿನ ಒತ್ತು ನೀಡಲು ಸೂಚಿಸಿದೆ.

ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಶಾಲೆ ಆರಂಭಕ್ಕೂ ಎರಡು ದಿನಗಳ ಮೊದಲೇ ಕೆಲಸಕ್ಕೆ ಹಾಜರಾಗಿದ್ದು, ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ. ಶಾಲೆಯ ಅಂಗಳ ಹಾಗೂ ಶಾಲಾ ಕೊಠಡಿ, ಶೌಚಾಲಯಗಳನ್ನು ಈಗಾಗಲೇ ಸ್ವಚ್ಛಗೊಳಿಸಲಾಗಿದೆ. ಬಹುತೇಕ ಕಡೆ ಸಣ್ಣಪುಟ್ಟ ದುರಸ್ತಿ ಕಾರ್ಯ ಪೂರ್ಣಗೊಳಿಸಲಾಗಿದೆ. 31ರ ಪ್ರಾರಂಭೋತ್ಸವಕ್ಕೆ ಮಾವಿನ ತೋರಣ, ಬಾಳೆಕಂದು ಕಟ್ಟಿ, ರಂಗೋಲಿ ಬಿಡಿಸಿ ಶಾಲೆಗಳನ್ನು ಸಿಂಗಾರಗೊಳಿಸಲಾಗುತ್ತಿದ್ದು, ಅಂದು ಒಂದು ರೀತಿ ಹಬ್ಬದ ಸಂಭ್ರಮವಿರಲಿದೆ. ಮಧ್ಯಾಹ್ನದ ಬಿಸಿಯೂಟದಲ್ಲಿ ಕೇಸರಿಬಾತ್, ಹೆಸರುಬೇಳೆ ಪಾಯಸ ಇಲ್ಲವೆ ಯಾವುದಾದರೂ ಒಂದು ಸಿಹಿ ತಿನಿಸು ನೀಡಲಾಗುತ್ತದೆ. ಈಗಾಗಲೇ ಆಹಾರ ಪದಾರ್ಥಗಳನ್ನು ಸಂಗ್ರಹಿಸಿಡಲಾಗಿದೆ.

ಮೊದಲ ದಿನವೇ ಪಠ್ಯಪುಸ್ತಕ, ಸಮವಸ್ತ್ರ: ಶಾಲಾ ಮಕ್ಕಳಿಗೆ ಮೊದಲ ದಿನದಿಂದಲೇ ಪಠ್ಯಪುಸ್ತಕ, ಎರಡು ಜತೆ ಸಮವಸ್ತ್ರ ವಿತರಿಸಲಾಗುತ್ತದೆ. ಇದೇ ಮೊದಲ ಬಾರಿ ಶಾಲಾ ಆರಂಭಕ್ಕೂ ಮೊದಲೇ ಎಲ್ಲ ವಿಷಯಗಳ ಪಠ್ಯಪುಸ್ತಕಗಳು ಶಾಲೆಗಳನ್ನು ತಲುಪಿವೆ. ಒಂದೇ ಬಾರಿಗೆ ಎರಡೂ ಜತೆ ಸಮವಸ್ತ್ರ ನೀಡಲಾಗುತ್ತಿದೆ.

ಮುಖ್ಯಾಂಶಗಳು

- ಬೇರೊಂದು ಶಾಲೆಗೆ ಸೇರುವ ಮಕ್ಕಳಿಗೆ ಒಂದು ವಾರದ ಒಳಗೆ ವರ್ಗಾವಣೆ ಪತ್ರ
- ಖಾಸಗಿ ಶಾಲೆ ತೊರೆದು ಸರ್ಕಾರಿ, ಅನುದಾನಿತ ಶಾಲೆಗೆ ಸೇರುವ ಮಕ್ಕಳಿಗೆ ಸರ್ಕಾರದ ಅಭಯ
- ಹೊಸ ಪೋಷಕರನ್ನು ಒಳಗೊಂಡ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಪುನರ್‌ರಚನೆಗೆ ಕ್ರಮ



ಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕೆ ಪ್ರಾಶಸ್ತ್ಯ ನೀಡಲಾಗಿದೆ. ಶಿಕ್ಷಕರ ಕೊರತೆ ಇರುವ ಎಲ್ಲ ಶಾಲೆಗಳಿಗೂ ಅತಿಥಿ ಶಿಕ್ಷಕರ ನೇಮಕ ಮಾಡಿಕೊಳ್ಳಲು ತಕ್ಷಣ ಕ್ರಮ ಕೈಗೊಳ್ಳಲಾಗುವುದು

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ



ಮೊದಲ ದಿನದ ಖುಷಿ.... ಬೆಂಗಳೂರಿನಲ್ಲಿ ಕೆಲವು ಶಾಲೆಗಳು ಸೋಮವಾರವೇ ಪುನರಾರಂಭವಾಗಿದ್ದು ಪುಟಾಣಿಗಳು ಮೊದಲ ದಿನ ಶಾಲೆಗೆ ಬಂದ ಕ್ಷಣ

– ಪ್ರಜಾವಾಣಿ ಚಿತ್ರ/ರಂಜು ಪಿ.



6 ವರ್ಷ ಕಡ್ಡಾಯ ಈ ಬಾರಿ ಇಲ್ಲ

ಒಂದನೇ ತರಗತಿಗೆ ಸೇರುವ ಮಕ್ಕಳಿಗೆ ಜೂನ್ 1ಕ್ಕೆ 6 ವರ್ಷ ಪೂರ್ಣಗೊಂಡಿರಬೇಕು ಎಂಬ ನಿಯಮ ರೂಪಿಸಲಾಗಿದೆ. ಆದರೆ, ಈ ನಿಯಮ 2024–25ನೇ ಶೈಕ್ಷಣಿಕ ಸಾಲಿಗೆ ಅನ್ವಯಿಸುವುದಿಲ್ಲ. ಮುಂದಿನ ವರ್ಷದಿಂದ ಶಾಲೆಗೆ ಸೇರಿಸುವ ಮಕ್ಕಳಿಗೆ ಈ ನಿಯಮ ಕಡ್ಡಾಯ.

ಶಾಲೆಗೆ ಮಕ್ಕಳನ್ನು ಸೇರಿಸುವಾಗ ಜನನ ಪ್ರಮಾಣಪತ್ರ, ಆಸ್ಪತ್ರೆ ದಾಖಲೆ, ಅಂಗನವಾಡಿ, ಆರೋಗ್ಯ ಸಹಾಯಕಿಯರ ದೃಢೀಕರಣ, ಇಲ್ಲವೇ, ಪೋಷಕರು ನೀಡುವ ಸ್ವಯಂ ದೃಢೀಕರಿಸಿದ ಪ್ರಮಾಣ ಪತ್ರ ಸೇರಿದಂತೆ ಯಾವುದಾದರೂ ಒಂದು ದಾಖಲೆ ಸಲ್ಲಿಸಬೇಕು.

ಶೌಚಾಲಯ ಸ್ವಚ್ಛತೆಗೆ ಮಕ್ಕಳ ಬಳಕೆ ನಿಷಿದ್ಧ

ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಕೆಲ ಶಾಲೆಗಳಲ್ಲಿ ಶೌಚಾಲಯಗಳನ್ನು ಮಕ್ಕಳಿಂದ ಸ್ವಚ್ಛಗೊಳಿಸಿದ್ದು ವಿವಾದವಾಗಿತ್ತು. ಹಾಗಾಗಿ, ಈ ಶೈಕ್ಷಣಿಕ ಸಾಲಿನಲ್ಲಿ ಅಂತಹ ಘಟನೆಗಳು ನಡೆಯದಂತೆ ಜಾಗ್ರತೆ ವಹಿಸಲು ಎಲ್ಲ ಶಾಲೆಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರಿಗೆ ಸೂಚಿಸಲಾಗಿದೆ. ಮಕ್ಕಳನ್ನು ಶೌಚಾಲಯ ಸ್ವಚ್ಛತಾ ಕಾರ್ಯಗಳಿಗೆ ಬಳಸುವುದನ್ನು ಕಡ್ಡಾಯವಾಗಿ ನಿಷೇಧಿಸಿ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಆಹ್ವಾನಕ್ಕೆ ಕಾದಿರುವ 'ಅತಿಥಿ'ಗಳು

ಮಂಗಳೂರು: ಬೇಸಿಗೆ ರಜೆ ಕಳೆದು ಹೊಸ ಶೈಕ್ಷಣಿಕ ವರ್ಷ ಆರಂಭಿಸಲು ಶಾಲೆಗಳು ಸಜ್ಜಾಗಿವೆ. ಇದೇ 29ರಿಂದ ಶಾಲೆಗಳು ಪುನರಾರಂಭಗೊಳ್ಳಲಿವೆ. ಈ ನಡುವೆ ಶಿಕ್ಷಕರ ಕೊರತೆ ಇರುವ ಶಾಲೆಗಳಿಗಾಗಿ ಆಹ್ವಾನವನ್ನು ನಿರೀಕ್ಷಿಸುತ್ತ ಸಾವಿರಾರು ಅತಿಥಿ ಶಿಕ್ಷಕರು ಕಾಯುತ್ತಿದ್ದಾರೆ.

ಪ್ರತಿ ವರ್ಷ ಶಾಲೆ ಆರಂಭವಾಗುವ ಸಂದರ್ಭದಲ್ಲಿ ಶಿಕ್ಷಕರ ಕೊರತೆಯ ಲೆಕ್ಕಹಾಕಿ ಪ್ರತಿ ಶೈಕ್ಷಣಿಕ ಜಿಲ್ಲೆಯಿಂದ ಶಿಕ್ಷಣ ಇಲಾಖೆಗೆ ಮಾಹಿತಿ ರವಾನಿಸಲಾಗುತ್ತಿದೆ. ಈ ಬಾರಿ ಈಗಾಗಲೇ ಮಾಹಿತಿ ಸಿಕ್ಕಿದ್ದರೂ 'ಅತಿಥಿ' ಶಿಕ್ಷಕರ ನೇಮಕಾತಿ ವಿಳಂಬ ಆಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಚುನಾವಣಾ ನೀತಿ ಸಂಹಿತೆಯಿಂದಾಗಿ ಈ ಬಾರಿ ತಡವಾಗಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದರೂ ಪ್ರತಿ ವರ್ಷ ಒಂದಿಲ್ಲ ಒಂದು ಕಾರಣ ಹೇಳಿ 'ಅತಿಥಿಗಳ ಆಹ್ವಾನ' ವಿಳಂಬ ಮಾಡಲಾಗುತ್ತದೆ ಎಂಬುದು ಅತಿಥಿ ಶಿಕ್ಷಕರ ದೂರು.

'ಕಳೆದ ಬಾರಿ ಎರಡು ತಿಂಗಳು ತಡವಾಗಿ ನೇಮಕ ಮಾಡಿಕೊಳ್ಳಲಾಗಿತ್ತು. ಎರಡು ತಿಂಗಳ ಬೇಸಿಗೆ ರಜೆಯೂ ಸೇರಿ ಒಟ್ಟು ನಾಲ್ಕು ತಿಂಗಳು ಸಂಪಾದನೆ ಇಲ್ಲದೇ ಕಾಲ ಕಳೆಯಬೇಕಾಯಿತು' ಎಂದು ಕಳೆದ ವರ್ಷ ಅತಿಥಿ ಶಿಕ್ಷಕಿಯಾಗಿದ್ದವರೊಬ್ಬರು ಹೇಳಿದರು.

'ನಮಗೆ ನೇಮಕಾತಿ ಪತ್ರ ಕೊಡುವುದಿಲ್ಲ. ಎರಡು–ಮೂರು ತಿಂಗಳಿಗೊಮ್ಮೆ ಸಂಭಾವನೆ ಕೊಡುತ್ತಾರೆ. ಬಿಡುವಿನ ಸಂದರ್ಭದಲ್ಲಿ ಬೇರೇನು ಕೆಲಸ ಮಾಡುವುದಕ್ಕೂ ಅವಕಾಶ ಇಲ್ಲ. ಶಾಲೆಯಲ್ಲೇ ಕುಳಿತಿರಬೇಕು ಎಂದು ಹೇಳುತ್ತಾರೆ. ಮುಂದಿನ ವರ್ಷ ಕೆಲಸ ಸಿಗುತ್ತದೆಯೋ ಇಲ್ಲವೋ ಎಂಬುದು ಖಾತರಿ ಇಲ್ಲ' ಎಂದು ಆಹ್ವಾನಕ್ಕಾಗಿ ಕಾಯುತ್ತಿರುವ ಮತ್ತೊಬ್ಬರು ಹೇಳಿದರು.

'ದಕ್ಷಿಣ ಕನ್ನಡ ಜಿಲ್ಲೆಯ ಶಾಲೆಗಳಲ್ಲಿ 6ರಿಂದ 8ನೇ ತರಗತಿವರೆಗೆ ಖಾಲಿ ಇದ್ದ ಹುದ್ದೆಗಳ ಪೈಕಿ 413 ಶಿಕ್ಷಕರ ಹುದ್ದೆಗಳನ್ನು ಕಳೆದ ಬಾರಿ ಭರ್ತಿ ಮಾಡಲಾಗಿದೆ. ಈ ವರ್ಷ ಪ್ರಾಥಮಿಕ ಹಂತಕ್ಕೆ 1,079 ಮತ್ತು ಹೈಸ್ಕೂಲ್ ವಿಭಾಗದಲ್ಲಿ 249 ಶಿಕ್ಷಕರ ಅಗತ್ಯವಿದೆ' ಎಂದು ಡಿಡಿಪಿಐ ವೆಂಕಟೇಶ್ ಪಟಗಾರ ತಿಳಿಸಿದರು.

ಸುದ್ದಿ 2 ನಿಮಿಷ

ವೈದ್ಯ ಶಂಕರ್‌ಗೆ ₹76 ಲಕ್ಷ ವಂಚನೆ

ಕಲಬುರಗಿ: ಮುಂಬೈ ಕ್ರೈಂ ಬ್ರಾಂಚ್ ಪೊಲೀಸ್ ಅಧಿಕಾರಿಯ ಸೋಗಿನಲ್ಲಿ ಹಿರಿಯ ವೈದ್ಯ ಡಾ.ಪಿ.ಎಸ್. ಶಂಕರ್ ಅವರಿಗೆ ಫೋನ್ ಕರೆಮಾಡಿದ ವಂಚಕ, ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಾಗಿದೆ ಎಂದು ಬೆದರಿಸಿ ₹76.65 ಲಕ್ಷ ವಂಚಿಸಿದ ಬಗ್ಗೆ 'ಸೆನ್' ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇ 13ರಂದು ಶಂಕರ್ ಅವರಿಗೆ ಕರೆ ಬಂದಿತ್ತು. ಮಾತನಾಡಿದ ವ್ಯಕ್ತಿ ತನ್ನ ಹೆಸರು ವಿಜಯಕುಮಾರ ಚೌಬೆ, ಮುಂಬೈ ಕ್ರೈಂ ಬ್ರಾಂಚ್ ಪೊಲೀಸ್ ಇನ್‌ಸ್ಪೆಕ್ಟರ್ ಎಂದು ಹೇಳಿಕೊಂಡಿದ್ದ. ನಿಮ್ಮ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಾಗಿದೆ. ಜೆಟ್ ಏರ್‌ವೇಸ್ ಮಾಲೀಕ 256 ಬ್ಯಾಂಕ್‌ಗಳು ಖಾತೆಗಳನ್ನು ತೆರೆದಿದ್ದಾರೆ. ಅವುಗಳಲ್ಲಿ ನಿಮ್ಮ ಹೆಸರಿನ ಬ್ಯಾಂಕ್ ಖಾತೆಯಿಂದ ಹಣ ಅಕ್ರಮ ವರ್ಗಾವಣೆ ಮಾಡಿಕೊಂಡಿದ್ದಾರೆ. ನೀವು ಅಪರಾಧ ಮಾಡಿಲ್ಲ. ಆದರೆ, ನಿಮ್ಮ ವಿಚಾರಣೆ ಮಾಡಬೇಕಾಗುತ್ತದೆ ಎಂದ ವಂಚಕ, ವಿವಿಧ ಬ್ಯಾಂಕ್‌ಗಳಲ್ಲಿ ಶಂಕರ್ ಅವರು ಇರಿಸಿದ ಠೇವಣಿಯ ಮಾಹಿತಿ ಕೇಳಿದ ಎಂದು ಪೊಲೀಸರು ತಿಳಿಸಿದ್ದಾರೆ.



ವಂಚಕನ ಮಾತು ನಂಬಿದ ಶಂಕರ್ ಅವರು, ಟಿಎಂಬಿ ಬ್ಯಾಂಕ್‌ನಲ್ಲಿ ₹ 45 ಲಕ್ಷ, ಎಸ್‌ಬಿಐ ಬ್ಯಾಂಕ್‌ನಲ್ಲಿ ₹ 49 ಲಕ್ಷ ಹಾಗೂ ಕೆನರಾ ಬ್ಯಾಂಕ್‌ನಲ್ಲಿ ₹ 10 ಲಕ್ಷ ಇರಿಸಿದ್ದಾಗಿ ತಿಳಿಸಿದ್ದರು. ಈ ಬಗ್ಗೆ ಯಾರೊಂದಿಗೂ ಮಾಹಿತಿ ಹಂಚಿಕೊಳ್ಳದೆ, 15 ದಿನ ಎಲ್ಲಿಗೂ ಹೋಗದಂತೆ ವಂಚಕ ಹೆದರಿಸಿದ್ದ ಎಂದಿದ್ದಾರೆ.

ರೇವ್ ಪಾರ್ಟಿ: ವಿಚಾರಣೆಗೆ ಕಾಲಾವಕಾಶ ಕೇಳಿದ ನಟಿ

ಬೆಂಗಳೂರು: ಹೆಬ್ಬಗೋಡಿ ಬಳಿಯ ಹುಸ್ಕೂರು ಸಮೀಪದಲ್ಲಿರುವ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿ ಪ್ರಕರಣದ ವಿಚಾರಣೆಗೆ ಹಾಜರಾಗಲು ಕಾಲಾವಕಾಶ ನೀಡುವಂತೆ ತೆಲುಗು ಸಿನಿಮಾ ನಟಿ ಹೇಮಾ ಹಾಗೂ ಇತರರು ಸಿಸಿಬಿ ಪೊಲೀಸರಿಗೆ ಪತ್ರ ಬರೆದಿದ್ದಾರೆ.

'ಸನ್‌ಸೆಟ್ ಟು ಸನ್‌ರೈಸ್ ವಿಕ್ಟರಿ' ಹೆಸರಿನಲ್ಲಿ ಮೇ 19ರಂದು ಆಯೋಜಿಸಿದ್ದ ರೇವ್ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ನಟಿ ಹೇಮಾ ಹಾಗೂ ಇತರರಿಗೆ ಸಿಸಿಬಿ ಪೊಲೀಸರು ನೋಟಿಸ್ ನೀಡಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿ ಪತ್ರ ಬರೆದಿರುವ ಹೇಮಾ ಹಾಗೂ ಇತರರು, 'ಏಳು ದಿನಗಳ ಬಳಿಕ ವಿಚಾರಣೆಗೆ ಹಾಜರಾಗುತ್ತೇವೆ' ಎಂದು ಹೇಳಿದ್ದಾರೆಂದು ಗೊತ್ತಾಗಿದೆ.

'ಪಾರ್ಟಿಯಲ್ಲಿ ಪಾಲ್ಗೊಂಡಿದ್ದ 103 ಮಂದಿ ಪೈಕಿ, ನಟಿ ಹೇಮಾ ಸೇರಿದಂತೆ 86 ಮಂದಿ ಡ್ರಗ್ಸ್ ತೆಗೆದುಕೊಂಡಿದ್ದರು ಎಂಬುದು ವೈದ್ಯಕೀಯ ಪರೀಕ್ಷೆಯಿಂದ ಗೊತ್ತಾಗಿದೆ. ಹೀಗಾಗಿ, ಎಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಪಾರ್ಟಿ ಆಯೋಜಿಸಿದ್ದ ಹಾಗೂ ಡ್ರಗ್ಸ್ ಪೂರೈಸಿದ್ದ ಐವರು ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಇವರ ಬಳಿ ₹50 ಲಕ್ಷಕ್ಕೂ ಹೆಚ್ಚು ಹಣ ಪತ್ತೆಯಾಗಿದೆ. ಇವರೆಲ್ಲರೂ ಡ್ರಗ್ಸ್ ಮಾರಾಟ, ಕ್ರಿಕೆಟ್ ಬೆಟ್ಟಿಂಗ್, ಇತರೆ ದಂಧೆಗಳಲ್ಲಿ ತೊಡಗಿರುವ ಮಾಹಿತಿ ಇದೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದು ತಿಳಿಸಿವೆ.

ಮೇ 31ರಂದು ಹಾಜರು: ಪ್ರಜ್ವಲ್

ಒಂದನೇ ಪುಟದಿಂದ...

'ಏಪ್ರಿಲ್ 26ರಂದು ಚುನಾವಣೆ ನಡೆಯುವವರೆಗೂ ನನ್ನ ವಿರುದ್ಧ ಯಾವುದೇ ಪ್ರಕರಣಗಳು ಇರಲಿಲ್ಲ. ಎಸ್‌ಐಟಿ ಸಹ ರಚನೆಯಾಗಿರಲಿಲ್ಲ. 26ರಂದು ವಿದೇಶಕ್ಕೆ ಹೋಗುವುದು ಮುಂಚೆಯೇ ತೀರ್ಮಾನವಾಗಿತ್ತು. ಹೀಗಾಗಿ, ವಿದೇಶಕ್ಕೆ ಬಂದಿದ್ದೇನೆ. ನನ್ನ ವಿರುದ್ಧ ದಾಖಲಾಗಿರುವ ಪ್ರಕರಣದ ಬಗ್ಗೆ ಮಾಧ್ಯಮಗಳ ಮೂಲಕ ಗೊತ್ತಾಯಿತು. ಎಸ್‌ಐಟಿ ಸಹ ನೋಟಿಸ್ ನೀಡಿತ್ತು. ನಾನು ಸಹ ಸಾಮಾಜಿಕ ಮಾಧ್ಯಮ 'ಎಕ್ಸ್' ಮೂಲಕ ಹಾಗೂ ನನ್ನ ವಕೀಲರ ಮೂಲಕ ಉತ್ತರ ನೀಡಿದ್ದೆ. 7 ದಿನ ಸಮಯಾವಕಾಶ ಕೋರಿದ್ದೆ' ಎಂದು ಅವರು ಹೇಳಿದ್ದಾರೆ.

'ನೋಟಿಸ್‌ಗೆ ಉತ್ತರ ನೀಡಿದ ಬಳಿಕ, ಮರುದಿನದಿಂದಲೇ ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ ಹಾಗೂ ಇತರರು ನನ್ನ ಪ್ರಕರಣದ ಬಗ್ಗೆ ಸಾರ್ವಜನಿಕ ವೇದಿಕೆಗಳಲ್ಲಿ ಚರ್ಚೆ ಆರಂಭಿಸಿದರು. ರಾಜಕೀಯ ಪಿತೂರಿ ಮಾಡಲಾರಂಭಿಸಿದರು. ನಾನು ಮಾನಸಿಕ ಖಿನ್ನತೆಗೆ ಒಳಗಾಗಿ, ಯಾರ ಸಂಪರ್ಕಕ್ಕೂ ಸಿಗದೇ ಉಳಿದುಕೊಂಡೆ. ಆದ್ದರಿಂದ, ನಾನು ಈಗ ಎಲ್ಲರ ಕ್ಷಮೆ ಕೋರುತ್ತಿದ್ದೇನೆ' ಎಂದು ತಿಳಿಸಿದ್ದಾರೆ.

'ಹಾಸನದಲ್ಲಿಯೂ ಕೆಲ ಶಕ್ತಿಗಳು ಒಟ್ಟಿಗೆ ಸೇರಿಕೊಂಡು ನನ್ನ ವಿರುದ್ಧ ರಾಜಕೀಯ ಪಿತೂರಿ ಮಾಡುತ್ತಿವೆ. ರಾಜಕೀಯವಾಗಿ ನಾನು ಬೆಳೆಯುತ್ತಿದ್ದೇನೆ. ನನ್ನನ್ನು ಮುಗಿಸಬೇಕೆಂದು ಎಲ್ಲರೂ ಒಟ್ಟಿಗೆ ಕೆಲಸ ಮಾಡುತ್ತಿದ್ದಾರೆ. ಇದರಿಂದ ನಾನು ಆಘಾತಕ್ಕೆ ಒಳಗಾಗಿದ್ದೇನೆ' ಎಂದು ಪ್ರಜ್ವಲ್ ಹೇಳಿದ್ದಾರೆ.

'ಯಾರೂ ತಪ್ಪು ತಿಳಿದುಕೊಳ್ಳುವುದು ಬೇಡ. ನಾನೇ ಮೇ 31ರಂದು ಶುಕ್ರವಾರ ಎಸ್‌ಐಟಿ ಮುಂದೆ ಖುದ್ದಾಗಿ ಹಾಜರಾಗಿ ತನಿಖೆಗೆ ಸಂಪೂರ್ಣ ಸಹಕಾರ ನೀಡಲಿದ್ದೇನೆ. ಸರಿಯಾದ ರೀತಿಯಲ್ಲಿ ಉತ್ತರ ಕೊಡುತ್ತೇನೆ. ನ್ಯಾಯಾಲಯದ ಮೇಲೆ ನನಗೆ ನಂಬಿಕೆ ಇದೆ. ಈ ಸುಳ್ಳು ಪ್ರಕರಣದಿಂದ ಹೊರಬರುವ ಕೆಲಸವನ್ನು ನ್ಯಾಯಾಲಯದ ಮೂಲಕ ಮಾಡುತ್ತೇನೆ. ದೇವರು, ಜನರ ಆಶೀರ್ವಾದ ಹಾಗೂ ನನ್ನ ಕುಟುಂಬದ ಆಶೀರ್ವಾದ ನನ್ನ ಮೇಲಿರಲಿ. ಖಂಡಿತವಾಗಿಯೂ ನಾನು ಮೇ 31ರಂದು ಶುಕ್ರವಾರ ಎಸ್‌ಐಟಿ ತನಿಖೆಗೆ ಹಾಜರಾಗುವ ಮೂಲಕ ಎಲ್ಲದಕ್ಕೂ ತೆರೆ ಎಳೆಯುವ ಕೆಲಸ ಮಾಡಲಿದ್ದೇನೆ. ನನ್ನ ಮೇಲೆ ನಂಬಿಕೆ ಇರಲಿ, ಎಲ್ಲರಿಗೂ ಧನ್ಯವಾದಗಳು' ಎಂದೂ ಪ್ರಜ್ವಲ್ ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ.



ಎಸ್‌ಐಟಿ ಬಳಿ ಇರುವ ಮಾಹಿತಿ, ದಾಖಲೆಗಳ ಆಧಾರದ ಮೇಲೆ ಪ್ರಜ್ವಲ್ ವಿಚಾರಣೆ ನಡೆಯಲಿದೆ. ಈಗಾಗಲೇ ಬಂಧನ ವಾರಂಟ್ ಜಾರಿಯಾಗಿದೆ. ತನಿಖೆಗಾಗಿ ಬಂಧಿಸಬೇಕಾಗುವುದು

ಪರಮೇಶ್ವರ, ಗೃಹ ಸಚಿವ

'ಬಾಯಿಗೆ ಬೀಗ ಹಾಕಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜ್ವಲ್ ರೇವಣ್ಣ ಏನು ಬೇಕಾದರೂ ಹೇಳಿಕೊಳ್ಳಲಿ. ಯಾರ ಬಾಯಿಗೂ ನಾವು ಬೀಗ ಹಾಕಲು ಆಗುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿದೇಶದಿಂದ ಪ್ರಜ್ವಲ್ ರೇವಣ್ಣ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಕುರಿತು ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ಪ್ರಜ್ವಲ್ ಅವರ ವಿಡಿಯೊ ಸಂದೇಶದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಅವರು ಮಾತನಾಡುತ್ತಾರೆ ಎಂದು ನಾನು ಮಾತನಾಡಲು ಆಗುವುದಿಲ್ಲ. ಅವರು ಎಸ್‌ಐಟಿ ಮುಂದೆ ವಿಚಾರಣೆಗೆ ಹಾಜರಾಗದೇ ಬೇರೆ ದಾರಿಯಿಲ್ಲ. ಈ ಪ್ರಕರಣದಲ್ಲಿ ಕಾನೂನು ತನ್ನ ಕ್ರಮ ಕೈಗೊಳ್ಳಲಿದೆ' ಎಂದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಬಂದ ವರದಿಗಳನ್ನು ಆಧರಿಸಿ ರಾಹುಲ್ ಗಾಂಧಿ ಅವರು ಮಾತನಾಡಿದ್ದಾರೆ. ರಾಹುಲ್ ಗಾಂಧಿ ವಿಚಾರ ಪ್ರಸ್ತಾಪ ಮಾಡಿರುವ ಪ್ರಜ್ವಲ್‌ಗೆ ಕಾಲವೇ ಉತ್ತರ ಕೊಡಲಿದೆ ಎಂದು ಹೇಳಿದರು.

ಮರಣ ಪತ್ರ ಪತ್ತೆ • ₹85 ಕೋಟಿ ಅವ್ಯವಹಾರ ಆರೋಪ, ಸಿಐಡಿ ತನಿಖೆ

ವಾಲ್ಮೀಕಿ ನಿಗಮದ ಅಧೀಕ್ಷಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಚಂದ್ರಶೇಖರ್

ಶಿವಮೊಗ್ಗ: ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಬೆಂಗಳೂರು ಕಚೇರಿಯಲ್ಲಿ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಚಂದ್ರಶೇಖರ್ ಪಿ. (52) ಅವರು ಇಲ್ಲಿನ ವಿನೋಬ ನಗರದ ಕೆಂಚಪ್ಪ ಲೇಔಟ್ ಬಳಿಯಿರುವ ತಮ್ಮ ನಿವಾಸದಲ್ಲಿ ಭಾನುವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಮ್ಮ ಸಾವಿಗೆ ಕಾರಣರಾಗಿದ್ದಾರೆ ಎನ್ನಲಾದವರ ಹೆಸರು ಮತ್ತು ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಡೆತ್‌ನೋಟ್‌ನಲ್ಲಿ ಚಂದ್ರಶೇಖರ್ ಅವರು ವಿವರವಾಗಿ ಉಲ್ಲೇಖಿಸಿದ್ದಾರೆ.

'ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ನಮ್ಮ ವಿಶೇಷ ತಂಡ ಶಿವಮೊಗ್ಗಕ್ಕೆ ತೆರಳಿ ಮಾಹಿತಿ ಸಂಗ್ರಹಿಸಲಿದೆ' ಎಂದು ಸಿಐಡಿ ಡಿಜಿಪಿ ಎಂ.ಎ. ಸಲೀಂ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯವರಾದ ಇವರು, ಬೆಂಗಳೂರಿನಿಂದ ಮೇ 25ರಂದು ನಗರಕ್ಕೆ ಬಂದಿದ್ದರು. 26ರಂದು ಪತ್ನಿ ಕವಿತಾ ಮತ್ತಿತರರು ಮೃತರೊಬ್ಬರ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಲು ಮಾಚೇನಹಳ್ಳಿಗೆ ತೆರಳಿದ್ದರಿಂದ ಮನೆಯಲ್ಲಿ ಯಾರೂ ಇರಲಿಲ್ಲ. ಈ ಸಮಯದಲ್ಲಿ ನೇಣು ಹಾಕಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಂದ್ರಶೇಖರ್ ಅವರ ಆತ್ಮಹತ್ಯೆ ಪ್ರಕರಣ ಕುರಿತು ಅವರ ಪತ್ನಿ ದೂರು ನೀಡಿದ್ದಾರೆ. ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಜಿ.ಕೆ.ಮಿಥುನ್‌ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಮರಣ ಪತ್ರ ಪತ್ತೆ: 'ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ, ಲೆಕ್ಕಾಧಿಕಾರಿ ಪರಶುರಾಮ ದುರುಗಣ್ಣವರ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕಿ ಶುಚಿಸ್ಮಿತಾ ರವುಲ್ ನನ್ನ ಸಾವಿಗೆ ಕಾರಣ. ಮಾನ್ಯ ಸಚಿವರು ಮೌಖಿಕವಾಗಿ ಸೂಚಿಸಿದ್ದಾರೆ ಎಂದು ಹಣ ವರ್ಗಾಯಿಸಲು ಲೆಕ್ಕಾಧಿಕಾರಿ ಹೇಳಿದ ಹಿನ್ನೆಲೆಯಲ್ಲಿ ನಿಗಮದ ₹187.33 ಕೋಟಿ ಅನುದಾನವನ್ನು ಬೇರೆ ಬೇರೆ ಖಾತೆಗಳಿಗೆ ವರ್ಗಾಯಿಸಲಾಗಿದೆ. ವ್ಯವಸ್ಥಾಪಕ ನಿರ್ದೇಶಕರು ಒತ್ತಾಯಪೂರ್ವಕ ಅನುದಾನ ವರ್ಗಾಯಿಸುತ್ತಿದ್ದರು. ನಮಗೆ ಅವರ ಒಳಸಂಚು ಅರ್ಥವೇ ಆಗಿಲ್ಲ. ಬ್ಯಾಂಕ್‌ನವರು ಚೆಕ್ ಬುಕ್ ಮತ್ತು ಪಾಸ್ ಬುಕ್‌ನ್ನು ಈವರೆಗೂ ನೀಡಿಲ್ಲ. ಇದಲ್ಲದೇ ನಿಗಮದಲ್ಲಿ ಅಂದಾಜು ₹80 ಕೋಟಿಯಿಂದ ₹85 ಕೋಟಿ ಅವ್ಯವಹಾರ ಆಗಿದೆ. ಅಧಿಕಾರಿಗಳು ಅಕ್ರಮವಾಗಿ ಹಣ ವರ್ಗಾವಣೆ ಮಾಡಿಸಿದ್ದಾರೆ' ಎಂದು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿದ್ದಾರೆ.


'ನಾನು ನಿಗಮಕ್ಕೆ ಮೋಸ ಮಾಡಿಲ್ಲ. ಅವ್ಯವಹಾರದಲ್ಲಿ ಭಾಗಿ ಆಗಿಲ್ಲ. ವಂಚನೆಯನ್ನೂ ಮಾಡಿಲ್ಲ. ಬೇರೆಯವರು ನಿಯಮಬಾಹಿರವಾಗಿ ಹಣ ಲೂಟಿ ಮಾಡಿರುವುದು ಕಂಡುಬರುತ್ತಿದೆ. ಇದರಲ್ಲಿ ನನ್ನ ಪಾತ್ರವಿಲ್ಲ. ಕೆಲಸದ ಒತ್ತಡದಲ್ಲಿ ನಾನು ಮಾಡಿರುವ ತಪ್ಪು ಏನೆಂದರೆ, ಖಾತೆಯ ಚೆಕ್ ಬುಕ್ ಮತ್ತು ಕ್ಯಾಶ್ ಪುಸ್ತಕ ಮುಕ್ತಾಯಗೊಳಿಸದಿರುವುದು' ಎಂದು ಬರೆದಿದ್ದಾರೆ.

'ನಾನು ಹೇಡಿಯಲ್ಲ. ಅಲ್ಲದೇ, ಅವಮಾನವನ್ನು ಸಹಿಸಲಾರೆ. ನನಗೆ ಬೇರೆ ದಾರಿ ತೋಚಲಿಲ್ಲ. ಎಲ್ಲರೂ ಕ್ಷಮಿಸಿ' ಎಂದು ಚಂದ್ರಶೇಖರ್ ಬರೆದಿದ್ದಾರೆ.

ಮರಣ ಪತ್ರ ಆಧಾರದ ಮೇಲೆ ಅವರ ಪತ್ನಿ ಕವಿತಾ ಅವರು ಇಲ್ಲಿನ ವಿನೋಬ ನಗರ ಪೊಲೀಸ್ ಠಾಣೆಯಲ್ಲಿ ಮೂವರು ಅಧಿಕಾರಿಗಳ ವಿರುದ್ಧ ದೂರು ನೀಡಿದ್ದಾರೆ.

ಅಧಿಕಾರಿ ಆತ್ಮಹತ್ಯೆ; ಸರ್ಕಾರದ ಭ್ರಷ್ಟಾಚಾರಕ್ಕೆ ಹೊಸ ಪುರಾವೆ

ಕೋಲಾರ: ಅಧಿಕಾರಿಯೊಬ್ಬರು ₹187 ಕೋಟಿ ಅವ್ಯವಹಾರ ಸಂಬಂಧ ಅಧಿಕಾರಿಗಳ ಹೆಸರು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದು ನೈತಿಕತೆ, ಮಾನ ಮರ್ಯಾದೆ ಇದ್ದರೆ ಮುಖ್ಯಮಂತ್ರಿ ಕೂಡಲೇ ರಾಜೀನಾಮೆ ನೀಡಿ ಮನೆಗೆ ಹೋಗಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ.



ಆರ್. ಅಶೋಕ

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಈ ಸರ್ಕಾರ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿದೆ. ಈಗ ದಾಖಲೆ ಸಮೇತ ಸಿಕ್ಕಿಬಿದ್ದಿದೆ. ಕಾಂಗ್ರೆಸ್ ಸರ್ಕಾರವು ಕರ್ನಾಟಕ ರಾಜ್ಯವನ್ನು ಲೂಟಿ ಮಾಡಿ ಬೇರೆ ಬೇರೆ ರಾಜ್ಯಗಳ ಚುನಾವಣೆಗೆ ಹಣ ಕಳುಹಿಸಿಕೊಡುತ್ತಿದೆ ಎಂಬುದಾಗಿ ಈಚೆಗೆ ಪ್ರಧಾನಿ ಮೋದಿ ಹೇಳಿದ್ದರು. ಅಂಗೈ ಹುಣ್ಣಿಗೆ ಕನ್ನಡಿ ಬೇಕೇ' ಎಂದು ಪ್ರಶ್ನಿಸಿದರು.

'ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಲೂಟಿ ಸರ್ಕಾರ ಎಂದು ಟೀಕಿಸುತ್ತಿದ್ದವರಿಗೆ ಸಿದ್ದರಾಮಯ್ಯ ದಾಖಲೆ ಕೇಳುತ್ತಿದ್ದರು. ಅಧಿಕಾರಿ ಶಿವಮೊಗ್ಗದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದು, ಡೆತ್ ನೋಟ್‌ನಲ್ಲಿ ಅಧಿಕಾರಿಗಳ ಹೆಸರು ನಮೂದಿಸಿದ್ದಾರೆ. ಲೂಟಿ ಸರ್ಕಾರ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೇ' ಎಂದು ಕೇಳಿದರು.

ವಿಚಾರಣೆಗೆ ಒಪ್ಪಿಗೆ ಸಮಾಧಾನ ತಂದಿದೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ಎಸ್‌ಐಟಿ ಎದುರು ವಿಚಾರಣೆಗೆ ಹಾಜರಾಗಬೇಕು ಮತ್ತು ಸಹಕಾರ ನೀಡಬೇಕು ಎಂದು ದೇವೇಗೌಡರು ಪ್ರಜ್ವಲ್‌ಗೆ ಎಚ್ಚರಿಕೆ ನೀಡಿದ್ದರು. ನಾನು ಸಹ ಮನವಿ ಮಾಡಿದ್ದೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

'ನಮ್ಮ ಮನವಿಗೆ ಓಗೊಟ್ಟು ವಿಚಾರಣೆಗೆ ಹಾಜರಾಗುವುದಾಗಿ ಪ್ರಜ್ವಲ್ ಹೇಳಿದ್ದಾನೆ. ಇದು ನಮಗೂ ಸಮಾಧಾನ ತಂದಿದೆ' ಎಂದು ನಗರದಲ್ಲಿ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಜೆಡಿಎಸ್ ಕಾರ್ಯಕರ್ತರ ನೋವಿಗೆ ಸ್ಪಂದಿಸಿ ಕ್ಷಮೆ ಕೋರುವಂತೆ ಹೇಳಿದ್ದೆವು. ಆ ಪ್ರಕಾರ ಕ್ಷಮೆ ಕೋರಿದ್ದಾನೆ. ಪಕ್ಷದ ಕಾರ್ಯಕರ್ತರ ಮೇಲೆ ಮಮತೆ ಇದೆ ಎನ್ನುವುದನ್ನು ತೋರಿಸಿಕೊಂಡಿದ್ದಾನೆ. ನನಗೆ ಸಮಾಧಾನವಿದೆ' ಎಂದರು.

ಪ್ರಜ್ವಲ್ ರೇವಣ್ಣ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿದರೆ ಪೆನ್‌ಡ್ರೈವ್ ಕೊಟ್ಟ ಅವರೇ (ಕಾಂಗ್ರೆಸ್) ಸಿಕ್ಕಿಹಾಕಿಕೊಳ್ಳುತ್ತಾರೆ ಎಂದು ಕುಮಾರಸ್ವಾಮಿ ಹೇಳಿದರು.

ಕೆಲವು ಸಚಿವರು ತಮ್ಮ ಇಲಾಖೆ ನಿರ್ವಹಣೆಗಿಂತ ಪ್ರಜ್ವಲ್ ರೇವಣ್ಣ ಪ್ರಕರಣದ ವಕೀಲಿಕೆ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

'ಶುಂಠಿ ಬೆಳೆದವರು ಬೀದಿಗೆ ಬಂದಿದ್ದಾರೆ. ಹೆಣ್ಣು ಮಕ್ಕಳು ಕಣ್ಣೀರು ಹಾಕುತ್ತಿದ್ದಾರೆ. ಸರ್ಕಾರ ಮಾತ್ರ ಪ್ರಜ್ವಲ್ ಪ್ರಕರಣಕ್ಕೆ ದೊಡ್ಡ ಪ್ರಚಾರ ಕೊಡುತ್ತಿದೆ. ಇದರಿಂದ ಏನು ಸಾಧನೆ ಮಾಡುತ್ತೀರಿ' ಎಂದು ಪ್ರಶ್ನಿಸಿದರು.

'ಇದು ಯಾರೂ ಬೆನ್ನು ತಟ್ಟುವ ಪ್ರಕರಣವಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ವಾತಾವರಣದಲ್ಲಿ ತನಿಖೆ ನಡೆಯುತ್ತದೆಯೇ ಎನ್ನುವುದೇ ನನ್ನ ಸಂಶಯ' ಎಂದರು.

ಬಿಎಸ್‌ವೈ ವಿರುದ್ಧ ದೂರು ನೀಡಿದ್ದ ಮಹಿಳೆ ಸಾವು

ಬೆಂಗಳೂರು: 'ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಹದಿನೇಳು ವರ್ಷ ವಯಸ್ಸಿನ ನನ್ನ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಪೊಲೀಸರಿಗೆ ದೂರು ನೀಡಿದ್ದ ಮಹಿಳೆ ನಗರದ ಆಸ್ಪತ್ರೆಯೊಂದರಲ್ಲಿ ಭಾನುವಾರ ರಾತ್ರಿ ಅಸುನೀಗಿದ್ದಾರೆ.

'ಹುಳಿಮಾವು ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ 53 ವರ್ಷದ ಮಹಿಳೆಯ ಆರೋಗ್ಯದಲ್ಲಿ ಭಾನುವಾರ ಏರುಪೇರು ಕಂಡುಬಂದಿತ್ತು. ಮಕ್ಕಳು ಹಾಗೂ ಸಂಬಂಧಿಕರು, ಮಹಿಳೆಯನ್ನು ಮನೆ ಬಳಿಯ ನ್ಯಾನೊ ಆಸ್ಪತ್ರೆಗೆ ರಾತ್ರಿ 8.30ರಸುಮಾರಿಗೆ ಸೇರಿಸಿದ್ದರು. ರಾತ್ರಿ 9.30ಗಂಟೆ ಸುಮಾರಿಗೆ ಅವರು ತೀರಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಮಹಿಳೆ ನೀಡಿದ್ದ ದೂರು ಆಧರಿಸಿ ಬಿಎಸ್‌ವೈ ವಿರುದ್ಧ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ನಂತರ ತಮಗೆ ಜೀವ ಬೆದರಿಕೆ ಇರುವುದಾಗಿ ದೂರುದಾರ ಮಹಿಳೆ ಆರೋಪಿಸಿದ್ದರು. ಹೀಗಾಗಿ, ಅವರ ಮನೆಗೆ ಪೊಲೀಸ್ ಭದ್ರತೆ ನೀಡಲಾಗಿತ್ತು. ದಿನದ 24 ಗಂಟೆಯೂ ಮನೆ ಬಳಿ ಪಾಳಿ ಪ್ರಕಾರ ಇಬ್ಬರು ಸಿಬ್ಬಂದಿ ಕಾವಲು ಕಾಯುತ್ತಿದ್ದರು' ಎಂದಿವೆ.

ಒಂದೂವರೆ ವರ್ಷದಿಂದ ಚಿಕಿತ್ಸೆ: 'ಮಹಿಳೆಯು ಒಂದೂವರೆ ವರ್ಷದಿಂದ ಆರೋಗ್ಯ ಸಮಸ್ಯೆಯೊಂದರಿಂದ ಬಳಲುತ್ತಿದ್ದರು. ಇದಕ್ಕಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಈ ಬಗ್ಗೆ ಅವರ ಮಗ, ಮಗಳು ಹಾಗೂ ಚಿಕ್ಕಪ್ಪ ಮಾಹಿತಿ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭಾನುವಾರ ರಾತ್ರಿ ಉಸಿರಾಟದ ತೊಂದರೆ ಕಾಣಿಸಿಕೊಂಡು ಮಹಿಳೆಯ ಆರೋಗ್ಯ ತೀವ್ರ ಹದಗೆಟ್ಟಿತ್ತು. ಚಿಕಿತ್ಸೆಗೆಂದು ನ್ಯಾನೊ ಆಸ್ಪತ್ರೆಗೆ ಕರೆದೊಯ್ದಾಗ ಅವರು ಮೃತಪಟ್ಟಿದ್ದಾರೆ. ಇವರ ಸಾವಿನ ಬಗ್ಗೆ ಮಾಹಿತಿ ಮಾತ್ರ ಸಂಗ್ರಹಿಸಲಾಗಿದೆ. ಮಕ್ಕಳಾಗಲಿ ಹಾಗೂ ಸಂಬಂಧಿಕರಾಗಲಿ, ಸಾವಿನಲ್ಲಿ ಅನುಮಾನ ವ್ಯಕ್ತಪಡಿಸಿ ಯಾವುದೇ ದೂರು ನೀಡಿಲ್ಲ' ಎಂದು ಮೂಲಗಳು ತಿಳಿಸಿವೆ. ಮಹಿಳೆ ಸಾವಿನ ಬಗ್ಗೆ ಪ್ರತಿಕ್ರಿಯೆ ಪಡೆಯಲು ಮಕ್ಕಳು ಹಾಗೂ ಸಂಬಂಧಿಕರು ಲಭ್ಯರಾಗಲಿಲ್ಲ.

ಮಹಿಳೆಗೆ ಕಿರುಕುಳ ಆರೋಪ: ಬಿಎಸ್‌ವೈ ವಿರುದ್ಧ ದೂರು ನೀಡಿದ ನಂತರ, ಮಹಿಳೆಗೆ ಹಲವರು ಕಿರುಕುಳ ನೀಡುತ್ತಿದ್ದರೆಂಬ ಆರೋಪವಿದೆ. ಬಿಎಸ್‌ವೈ ವಿರುದ್ಧದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳ ಎದುರು ಮಹಿಳೆ ಹಲವು ಮಾಹಿತಿ ಹಂಚಿಕೊಂಡಿದ್ದರು. ಇದೇ ಕಾರಣಕ್ಕೆ ಅವರ ಮನೆಗೆ ಭದ್ರತೆ ಒದಗಿಸಲಾಗಿತ್ತು ಎಂಬುದಾಗಿ ಸಿಐಡಿ ಮೂಲಗಳು ಹೇಳಿವೆ.

'ದೂರುದಾರ ಮಹಿಳೆ ಸಾವಿನ ಬಗ್ಗೆ ವಿಷಯ ಗೊತ್ತಾಗಿದೆ. ಸಂಬಂಧಪಟ್ಟ ಠಾಣೆ ಅಧಿಕಾರಿಗಳು ಹಾಗೂ ಕುಟುಂಬದವರಿಂದ ಮಾಹಿತಿ ಪಡೆಯಲಾಗುವುದು' ಎಂದು ಮೂಲಗಳು ತಿಳಿಸಿವೆ.

ಮೂರು ವರ್ಷಗಳ ಹಿಂದೆ ನಡೆದಿದ್ದ ₹ 41.10 ಕೋಟಿ ಅಕ್ರಮ ಪ್ರಕರಣ

ಟ್ರಕ್ ಟರ್ಮಿನಲ್ ಮಾಜಿ ಎಂ.ಡಿ ಬಂಧನ

ಪ್ರಜಾವಾಣಿ ವಾರ್ತೆ



ಎಸ್. ಶಂಕರಪ್ಪ

ಬೆಂಗಳೂರು: ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ (ಡಿಡಿಯುಟಿಟಿಎಲ್) ನಡೆದಿದೆ ಎನ್ನಲಾದ ₹47.10 ಕೋಟಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಮಾಜಿ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಎಸ್. ಶಂಕರಪ್ಪ ಅವರನ್ನು ಸೋಮವಾರ ಬಂಧಿಸಿದ್ದಾರೆ.

'ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕರಾಗಿರುವ ಎಸ್. ಶಂಕರಪ್ಪ, ಈ ಹಿಂದೆ ಡಿಡಿಯುಟಿಟಿಎಲ್‌ನಲ್ಲಿ ಎಂ.ಡಿ ಆಗಿ ಕೆಲಸ ಮಾಡಿದ್ದರು. ಇವರ ಅಧಿಕಾರದ ಅವಧಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಪುರಾವೆಗಳು ಲಭ್ಯವಾಗಿದ್ದು, ಇವುಗಳನ್ನು ಆಧರಿಸಿ ಶಂಕರಪ್ಪ ಅವರನ್ನು ಬಂಧಿಸಲಾಗಿದೆ' ಎಂದು ಸಿಐಡಿ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್ ಅಕ್ರಮ ಪ್ರಕರಣದಲ್ಲಿ ಆರೋಪಿ ಶಂಕರಪ್ಪ ಬಂಧನವಾಗಿದೆ. ತನಿಖೆ ಪೂರ್ಣಗೊಂಡ ಬಳಿಕವೇ ಅಕ್ರಮದ ಬಗ್ಗೆ ನಿಖರ ಮಾಹಿತಿ ಲಭ್ಯವಾಗಲಿದೆ

ಎಂ.ಎ. ಸಲೀಂ, ಸಿಐಡಿ ಡಿಜಿಪಿ

'ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಇವರನ್ನು ಹೆಚ್ಚಿನ ವಿಚಾರಣೆಗಾಗಿ ಐದು ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದರು.

'ಡಿಡಿಯುಟಿಟಿಎಲ್‌ನಲ್ಲಿ 2021 ರಿಂದ 2023ರ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಹಾಲಿ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಸಿ.ಎನ್. ಶಿವಪ್ರಕಾಶ್ ಅವರು ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದರು. 2023ರ ಸೆಪ್ಟೆಂಬರ್ 23ರಂದು ಎಫ್‌ಐಆರ್ ದಾಖಲಾಗಿತ್ತು. ಪ್ರಕರಣದ ತನಿಖೆಯನ್ನು ಸರ್ಕಾರ ಸಿಐಡಿಗೆ ವಹಿಸಿತ್ತು' ಎಂದು ಮಾಹಿತಿ ನೀಡಿದರು.

ನಕಲಿ ದಾಖಲೆ ಸೃಷ್ಟಿ: 'ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ 2021ರ ಅಕ್ಟೋಬರ್ 25ರಂದು 194ನೇ ನಿರ್ದೇಶಕ ಮಂಡಳಿ ಸಭೆ ನಡೆಸಲಾಗಿತ್ತು. ಎಂ.ಡಿ ಶಂಕರಪ್ಪ ಹಾಗೂ ಇತರರು ಆ ಸಭೆಯಲ್ಲಿದ್ದರು. ಟ್ರಕ್ ಟರ್ಮಿನಲ್‌ಗಳ ದುರಸ್ತಿ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ತುರ್ತಾಗಿ ₹10 ಕೋಟಿವರೆಗೆ ತುಂಡು ಗುತ್ತಿಗೆ ನೀಡಲು ಅಕ್ರಮವಾಗಿ ಅನುಮೋದನಾ ನಿರ್ಣಯ ಮಾಡಲಾಗಿತ್ತು. ಕಾಮಗಾರಿ ನಡೆಯದಿದ್ದರೂ ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಣ ಪಡೆಯಲಾಗಿತ್ತು' ಎಂದು ಸಿಐಡಿ ಮೂಲಗಳು ಹೇಳಿವೆ.

'ಪ್ರಕರಣಕ್ಕೆ ಸಂಬಂಧಪಟ್ಟಂತೆ ಡಿಡಿಯುಟಿಟಿಎಲ್ ಕಚೇರಿ ಹಾಗೂ ಹಲವರ ಮನೆಗಳ ಮೇಲೆ ಇತ್ತೀಚೆಗೆ ದಾಳಿ ಮಾಡಲಾಗಿತ್ತು. 600ಕ್ಕೂ ಹೆಚ್ಚು ದಾಖಲೆಗಳನ್ನು ಜಪ್ತಿ, ಪರಿಶೀಲನೆ ನಡೆಸಲಾಗಿತ್ತು' ಎಂದು ಹೇಳಿವೆ.

'ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದ ಹಾಲಿ ಎಂ.ಡಿ ಸಿ.ಎನ್. ಶಿವಪ್ರಕಾಶ್, ₹ 47.10 ಕೋಟಿ ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಎಂ.ಡಿ ಹಾಗೂ ಇತರರು ಅಕ್ರಮದಲ್ಲಿ ಭಾಗಿಯಾಗಿರುವ ಶಂಕೆಯಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

ಬಂಧನ ಭೀತಿಯಲ್ಲಿದ್ದ ಶಂಕರಪ್ಪ ಅವರು ನಿರೀಕ್ಷಣಾ ಜಾಮೀನು ಕೋರಿ ಇತ್ತೀಚೆಗಷ್ಟೇ ಅರ್ಜಿ ಸಲ್ಲಿಸಿದ್ದರು.

'ವಿಜಯೇಂದ್ರ ಭ್ರಮೆ ಬಿಡಲಿ'

ಚಿತ್ರದುರ್ಗ: 'ತಮ್ಮ ತಂದೆ ಬಿ.ಎಸ್. ಯಡಿಯೂರಪ್ಪ ಇನ್ನೂ ಮುಖ್ಯಮಂತ್ರಿ ಹುದ್ದೆಯಲ್ಲಿದ್ದಾರೆ ಎಂಬ ಭ್ರಮೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಅವರಲ್ಲಿದೆ. ಅವರು ಆ ಭ್ರಮೆಯಿಂದ ಹೊರಬರಲಿ' ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಕುಟುಕಿದರು.

ತಮ್ಮ ತಲೆಗೂದಲು ಹಾಗೂ ಸಿನಿಮಾ ರಂಗದ ಆಸಕ್ತಿ ಬಗ್ಗೆ ಟೀಕೆ ಮಾಡಿದ್ದ ವಿಜಯೇಂದ್ರ ಅವರಿಗೆ ಸೋಮವಾರ ತಿರುಗೇಟು ನೀಡಿದರು.

'ನನ್ನ ಹೇರ್‌ಕಟ್ ಮಾಡುವವರು ಬಿಡುವಾಗಿಲ್ಲ. ಅವರು (ವಿಜಯೇಂದ್ರ) ಬಿಡುವಾಗಿದ್ದರೆ ಬಂದು ಮಾಡಲು ಹೇಳಿ' ಎಂದು ಪ್ರತಿಕ್ರಿಯಿಸಿದರು.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿರುವ ವಿಜಯೇಂದ್ರ, ಜವಾಬ್ದಾರಿಯಿಂದ ಮಾತನಾಡಬೇಕು. ಚಿತ್ರರಂಗದ ಕುರಿತು ಅವರು ಆಡಿದ ಮಾತು ಸರಿಯಲ್ಲ. ಜೂನ್ 4ರಂದು ಅವರ ಹಣೆಬರಹ ನಿರ್ಧಾರವಾಗಲಿದೆ' ಎಂದು ಹೇಳಿದರು.

'ಶಿಕ್ಷಣ ಸಚಿವರು ಶಿಸ್ತಿನಿಂದ ಇರಬೇಕು' (ಉಡುಪಿ ವರದಿ) : 'ಶಿಕ್ಷಣ ಕ್ಷೇತ್ರಕ್ಕೆ ತುಂಬಾ ಪಾವಿತ್ರ್ಯತೆ ಇದೆ. ಶಿಕ್ಷಕರು, ಮಕ್ಕಳು ಶಿಸ್ತಿನಿಂದ ಶಾಲೆಗೆ ಬರುವಂತೆ ಶಿಕ್ಷಣ ಸಚಿವರು ಶಿಸ್ತಿನಿಂದ ಇರಬೇಕು. ಇದು ವೈಯಕ್ತಿಕ ಅಭಿಪ್ರಾಯವಲ್ಲ; ಬಹಳಷ್ಟು ಶಿಕ್ಷಕರು, ಪೋಷಕರು ಹಾಗೂ ಮಕ್ಕಳ ಅಭಿಪ್ರಾಯ' ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

ಸೋಮವಾರ ಇಲ್ಲಿ ಮಾತನಾಡಿದ ಅವರು, 'ಕನ್ನಡ ಬರುವುದಿಲ್ಲ ಎಂದು ಸಚಿವ ಮಧು ಬಂಗಾರಪ್ಪ ಒಪ್ಪಿಕೊಂಡಿದ್ದಾರೆ. ಹಾಗಾಗಿ ಕನ್ನಡ ಗೊತ್ತಿರುವ , ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡುವವರಿಗೆ ಅಧಿಕಾರ ಸಿಗಲಿ. ಕನ್ನಡ ಅರಿವಿರುವವರು ಸಚಿವರಾದರೆ ರಾಜ್ಯಕ್ಕೂ, ಶಿಕ್ಷಣ ಕ್ಷೇತ್ರಕ್ಕೂ ಒಳ್ಳೆಯದು. ಸಚಿವರು ಮನಸ್ಸಿಗೆ ನೋವು ಮಾಡಿಕೊಳ್ಳುವುದನ್ನು ಬಿಟ್ಟು ಶಿಕ್ಷಣ ಕ್ಷೇತ್ರವನ್ನು ಉದ್ಧಾರ ಮಾಡಬೇಕು. ಹಾಗೆ ಮಾಡುತ್ತಾರೆ ಎಂಬ ವಿಶ್ವಾಸವಿಲ್ಲ' ಎಂದರು.

'ರಾಜ್ಯ ಸರ್ಕಾರವೇ ವೆಚ್ಚ ಭರಿಸಲಿದೆ'

ಬೆಂಗಳೂರು: 'ಹುಲಿ ಯೋಜನೆಗೆ 50 ವರ್ಷ ತುಂಬಿದ ಪ್ರಯುಕ್ತ 2023ರ ಏಪ್ರಿಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿಯವರ ಆತಿಥ್ಯದ ₹80 ಲಕ್ಷ ಬಿಲ್ ಅನ್ನು ರಾಜ್ಯ ಸರ್ಕಾರವೇ ಭರಿಸಲಿದೆ' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಪ್ರಧಾನಿ ಆತಿಥ್ಯದ ಬಿಲ್‌ನ ಬಾಕಿ ಮೊತ್ತ ಪಾವತಿಸುವಂತೆ ಮೈಸೂರಿನ ರಾಡಿಸನ್ ಬ್ಲೂ ಹೋಟೆಲ್ ಆಡಳಿತವು ನೋಟಿಸ್ ನೀಡಿರುವ ಕುರಿತು ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ಪ್ರಧಾನಿ, ರಾಷ್ಟ್ರಪತಿ ಸೇರಿದಂತೆ ಅತಿಗಣ್ಯ ವ್ಯಕ್ತಿಗಳು ರಾಜ್ಯಕ್ಕೆ ಬಂದಾಗ ರಾಜ್ಯ ಸರ್ಕಾರವೇ ಆತಿಥ್ಯ ವೆಚ್ಚ ಭರಿಸುತ್ತದೆ. ಅದೇ ಮಾದರಿಯಲ್ಲಿ ಈ ವೆಚ್ಚವನ್ನೂ ಪಾವತಿಸಲಾಗುವುದು' ಎಂದರು.



‘ಆರ್ಥಿಕತೆ ಬಗ್ಗೆ ಮೋದಿ ಮಾತಾಡಲಿ’

ಮಂಗಳಸೂತ್ರ, ಮುಜ್ರಾ, ಮಟನ್ ಬಗ್ಗೆ ಮಾತ್ರ ಮೋದಿ ಭಾಷಣ ಮಾಡುತ್ತಾರೆ: ಮಲ್ಲಿಕಾರ್ಜುನ ಖರ್ಗೆ ಟೀಕೆ

ನವದೆಹಲಿ (ಪಿಟಿಐ): ‘ಮೇಕ್ ಇನ್ ಇಂಡಿಯಾ’ ಯೋಜನೆ ಜಾರಿಯಲ್ಲಿದ್ದರೂ ದೇಶದ ಆರ್ಥಿಕ ಸ್ಥಿತಿಗತಿ, ರಫ್ತು, ಹೆಚ್ಚುತ್ತಿರುವ ವ್ಯಾಪಾರ ಕೊರತೆ ಕುರಿತು ನರೇಂದ್ರ ಮೋದಿ ಸರ್ಕಾರದ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದಾರೆ. ವ್ಯಾಪಾರದಲ್ಲಿ ಚೀನಾವನ್ನು ಅತಿ ದೊಡ್ಡ ಪಾಲುದಾರರನ್ನಾಗಿ ಮಾಡಿಕೊಳ್ಳುವ ಮೂಲಕ ನಕಲಿ ರಾಷ್ಟ್ರೀಯತೆಯನ್ನು ಅನುಸರಿಸುತ್ತಿದ್ದಾರೆ ಎಂದು ಸೋಮವಾರ ಆರೋಪಿಸಿದರು.


ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಮೋದಿ ಅವರೇ, ಮಂಗಳಸೂತ್ರ, ಮಟನ್, ಮಚ್ಛಲಿ, ಮುಜ್ರಾ ಬಗ್ಗೆ ಮಾತನಾಡುತ್ತೀರಿ. ಆದರೆ, ಮೇಕ್ ಇನ್ ಇಂಡಿಯಾ ಬಗ್ಗೆ ಮಾತನಾಡುವುದಿಲ್ಲ, ಏಕೆ? ಆರ್ಥಿಕತೆಯ ಬಗ್ಗೆ ಒಂದೇ ಒಂದು ಪದವನ್ನೂ ಮಾತನಾಡುವುದಿಲ್ಲ, ಏಕೆ? ಅದಕ್ಕೆ ಉತ್ತರ ಅವರ ಸರ್ಕಾರದ ದಯನೀಯ ಸೋಲಿನಲ್ಲಿದೆ’ ಎಂದು ಹೇಳಿದರು.

‘ಮೇಕ್ ಇನ್ ಇಂಡಿಯಾ ವಿಫಲವಾಗಿದೆ, ಉತ್ಪನ್ನ ಆಧಾರಿತ ಉತ್ತೇಜನ ಯೋಜನೆ (ಪಿಎಲ್‌ಐ) ತೆವಳುತ್ತಿದೆ ಮತ್ತು ರಫ್ತು ಕುಸಿದಿದೆ’ ಎಂದು ಆರೋಪಿಸಿದರು

‘56 ಇಂಚಿನ ಎದೆ ಎಂದು ಹೇಳಿಕೊಳ್ಳುವುದು ಮತ್ತು ಆ್ಯಪ್ ನಿಷೇಧ, ನಕಲಿ ರಾಷ್ಟ್ರೀಯತೆಯ ನಡುವೆಯೂ ಮೋದಿಯವರು ಚೀನಾವನ್ನು ಭಾರತದ ಅತಿ ದೊಡ್ಡ ವ್ಯಾಪಾರ ಪಾಲುದಾರರನ್ನಾಗಿ ಮಾಡಿಕೊಂಡಿದ್ದಾರೆ’ ಎಂದು ಆರೋಪಿಸಿದರು.

‘ಗಾಲ್ವನ್ ಕಣಿವೆಯಲ್ಲಿ ನಮ್ಮ ಯೋಧರ ತ್ಯಾಗದ ನಂತರವೂ ಚೀನಾವನ್ನು ಮೋದಿ ಆರೋಪಮುಕ್ತಗೊಳಿಸಿದರು. ಅದಕ್ಕೆ ಉಚಿತ ಕೊಡುಗೆಯಾಗಿ ಭಾರತಕ್ಕೆ ಸಿಕ್ಕಿದ್ದು, ಚೀನಾದಿಂದ ಆಮದಿನ ಹೆಚ್ಚಳ. ಜೂನ್ 2020 ಮತ್ತು ಜುಲೈ 2020ರ ನಡುವೆ ಚೀನಾದಿಂದ ಭಾರತಕ್ಕೆ ಆಮದಾದ ವಸ್ತುಗಳ ಮೌಲ್ಯ ಶೇ 68ರಷ್ಟು ಹೆಚ್ಚಳವಾಗಿತ್ತು’ ಎಂದು ವಿವರಿಸಿದರು.

ಕಳೆದ ವರ್ಷ ಭಾರತವು ರಫ್ತು ಮಾಡಿದ್ದಕ್ಕಿಂತ ಚೀನಾದಿಂದ ಆಮದು ಮಾಡಿಕೊಂಡ ವಸ್ತುಗಳ ಮೌಲ್ಯವು ₹7 ಲಕ್ಷ ಕೋಟಿ ಹೆಚ್ಚು ಎಂದರು.



ಮಲ್ಲಿಕಾರ್ಜುನ ಖರ್ಗೆ

‘ನಷ್ಟದ ಹೊರೆ ಬಡವರ ಮೇಲೆ’

ರೈಲ್ವೆ ಇಲಾಖೆಯ ನಷ್ಟದ ಭಾರವನ್ನು ಬಡ ಪ್ರಯಾಣಿಕರ ಹೊರಿಸಲಾಗಿದೆ ಎಂದು ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಕೇಂದ್ರ ಸರ್ಕಾರವನ್ನು ಟೀಕಿಸಿದ್ದಾರೆ.

‘ಮೋದಿ ಅವರ ಒಂದು ದಶಕದ ಆಡಳಿತದಲ್ಲಿ ಭಾರತದ ಜನರ ಪ್ರಮುಖ ಸಾರಿಗೆಯಾದ ರೈಲುಗಳ ಬಗ್ಗೆ ಅವರ ಸರ್ಕಾರ ವಿಶೇಷ ಗಮನ ಹರಿಸಿದೆ. ಆದರೆ, ರೈಲುಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿದೆ. ಜೊತೆಗೆ ಪ್ರಯಾಣವು ದುಬಾರಿಯಾಗಿದೆ. ಬಡವರು ಸಂಚರಿಸುವ ರೈಲುಗಳಲ್ಲಿ ಆಸನಗಳ ಸಂಖ್ಯೆ ಕಡಿಮೆಯಾಗಿದೆ. ಹೀಗಾಗಿ ದಟ್ಟಣೆ ಹೆಚ್ಚಾಗಿದೆ. ರೈಲುಗಳ ವೇಗ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಇದ್ದಷ್ಟೇ ಇದೆ’ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

	ಯುಪಿಎ ಅವಧಿ (2004–14)	ಎನ್‌ಡಿಎ ಅವಧಿ (2014–22)
ಉತ್ಪಾದನಾ ಬೆಳವಣಿಗೆ	ಶೇ 7.85	ಶೇ 6.0
ರಫ್ತು ಬೆಳವಣಿಗೆ	ಶೇ 186.59 (2004–10)	ಶೇ 21.14 (2014–20)
	ಶೇ 94.39 (2009–14)	ಶೇ 56.86 (2019–24)


ಹೆಚ್ಚುತ್ತಿರುವ ವ್ಯಾಪಾರ ಕೊರತೆಯ ಬಗ್ಗೆ ಉಲ್ಲೇಖಿಸಿರುವ ಖರ್ಗೆ ಅವರು, ‘ಮೋದಿಯವರ ಆಡಳಿತದಲ್ಲಿ ಭಾರತವು 2023–24ರಲ್ಲಿ ಚೀನಾ, ರಷ್ಯಾ, ಸಿಂಗಪುರ ಮತ್ತು ಕೊರಿಯಾ ಸೇರಿದಂತೆ 10 ವ್ಯಾಪಾರ ಪಾಲುದಾರ ದೇಶಗಳ ಪೈಕಿ 9ರಲ್ಲಿ ವ್ಯಾಪಾರ ಕೊರತೆಯನ್ನು ದಾಖಲಿಸಿದೆ’ ಎಂದಿದ್ದಾರೆ.

‘ಮೋದಿ ಅವಧಿಯಲ್ಲಿ ಭಾರತದ ವ್ಯಾಪಾರ ಕೊರತೆಯು ಶೇ 194.19ರಷ್ಟು ಹೆಚ್ಚಾಗಿದೆ ಎಂದ ಖರ್ಗೆ ಅವರು, ‘ಯುಪಿಎ ಅವಧಿಯಲ್ಲಿ ವ್ಯಾಪಾರ ಕೊರತೆಯು ₹8.1 ಲಕ್ಷ ಕೋಟಿ ಇದ್ದರೆ, ಎನ್‌ಡಿಎ ಅವಧಿಯಲ್ಲಿ (2023–24ರಲ್ಲಿ) ₹23.83 ಲಕ್ಷ ಕೋಟಿ ಆಗಿದೆ’ ಎಂದರು.

‘ಮೋದಿ ತಾವು ಜೈವಿಕವಾಗಿ ಜನಿಸಿದವರಲ್ಲ ಎಂದು ಹೇಳಿಕೊಂಡಿದ್ದಾರೆ. ಈಗ ಜನ ತಾರ್ಕಿಕವಾಗಿ ಮಾಡಬೇಕಿರುವುದೇನೆಂದರೆ, ಬಿಜೆಪಿಯನ್ನು ಸೋಲಿಸಿ ‘ಇಂಡಿಯಾ’ವನ್ನು ಗೆಲ್ಲಿಸುವುದು’ ಎಂದು ಹೇಳಿದರು.

‘ಹುದ್ದೆ ಕಳೆದುಕೊಳ್ಳಲಿರುವ ಖರ್ಗೆ’

ಕುಶಿನಗರ/ಬಲ್ಲಿಯಾ/ಚಂಡೌಳಿ (ಪಿಟಿಐ): ಜೂನ್ 4ರಂದು ಲೋಕಸಭಾ ಚುನಾವಣೆಯ ಫಲಿತಾಂಶ ಘೋಷಣೆಯಾದ ನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಹುದ್ದೆ ಕಳೆದುಕೊಳ್ಳಲಿದ್ದಾರೆ ಮತ್ತು ಪಕ್ಷದ ಸೋಲಿಗೆ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಅವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಹೇಳಿದರು.



ರಾಹುಲ್ ಗಾಂಧಿ ಅವರ ಜನ ಪತ್ರಿಕಾಗೋಷ್ಠಿ ನಡೆಸಿ, ಇವಿಎಂಗಳಿಂದ ತಾವು ಸೋತಿದ್ದಾಗಿ ಹೇಳುತ್ತಾರೆ ಎಂದು ಪ್ರತಿಪಾದಿಸಿದರು.

ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಅವರು, ‘ಐದು ಹಂತಗಳ ಮತದಾನದ ಮಾಹಿತಿ ನನ್ನ ಬಳಿ ಇದೆ. ಐದು ಹಂತಗಳಲ್ಲಿ ಮೋದಿ ಅವರು 310 ಕ್ಕೂ ಹೆಚ್ಚು ಸ್ಥಾನ ಗಳಿಸಿದ್ದಾರೆ. ರಾಹುಲ್ ಅವರು 40 ಸ್ಥಾನಗಳನ್ನೂ ಪಡೆಯುವುದಿಲ್ಲ ಮತ್ತು ಅಖಿಲೇಶ್ ಯಾದವ್ ಅವರು ಕನಿಷ್ಠ 4 ಸ್ಥಾನಗಳನ್ನೂ ಪಡೆಯುವುದಿಲ್ಲ’ ಎಂದು ಅಭಿಪ್ರಾಯಪಟ್ಟರು.

‘ಹಿಂದೆ ಎಸ್‌ಪಿ ಆಡಳಿತದಲ್ಲಿ ‘ಒಂದು ಜಿಲ್ಲೆ ಒಂದು ಮಾಫಿಯಾ’ ಇತ್ತು, ಈಗ ಜನರಿಗಾಗಿ ‘ಒಂದು ಜಿಲ್ಲೆ ಒಂದು ಉತ್ಪನ್ನ’ ಯೋಜನೆ ಇದೆ’ ಎಂದು ಪ್ರತಿಪಾದಿಸಿದರು.

‘ಹಿಂದೆ ಕಾಂಗ್ರೆಸ್ ಅಧಿಕಾರ ನಡೆಸುತ್ತಿದ್ದ ಕಾಲದಲ್ಲಿ ಉಗ್ರರು ಪಾಕಿಸ್ತಾನದಿಂದ ಬಂದು ದೇಶದಲ್ಲಿ ಬಾಂಬ್ ಸ್ಫೋಟಿಸಿ ಹೋಗುತ್ತಿದ್ದರು. ಮೋದಿ ಬಂದ ನಂತರ ಉರಿ ಮತ್ತು ಪುಲ್ವಾಮಾ ಸ್ಫೋಟಗಳು ನಡೆದವು, ಅವರದ್ದೇ ನೆಲದಲ್ಲಿ ವಾಯು ದಾಳಿ ಮಾಡಿದೆವು’ ಎಂದು ಹೇಳಿದರು.

ಚುನಾವಣಾ ಛಾಯಾಚಿತ್ರ: ‘ಪ್ರಜಾವಾಣಿ’ಯ ಫಕ್ರುದ್ದೀನ್ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ–2024ರ ಅಂಗವಾಗಿ ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ಕಚೇರಿ ವತಿಯಿಂದ ಮಾಧ್ಯಮ ಹಾಗೂ ಹವ್ಯಾಸಿ ಛಾಯಾಗ್ರಾಹಕರಿಗಾಗಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆಯಲ್ಲಿ ‘ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್’ನ ಮಂಗಳೂರು ಛಾಯಾಗ್ರಾಹಕ ಎಚ್. ಫಕ್ರುದ್ದೀನ್ ಪ್ರಥಮ ಬಹುಮಾನ ಪಡೆದಿದ್ದಾರೆ.



ಫಕ್ರುದ್ದೀನ್

ಬಾಗಲಕೋಟೆಯ ಇಂದ್ರಕುಮಾರ್ ಬಿ. ದಸ್ತೇನವರ (ದ್ವಿತೀಯ), ಮೂಡುಬಿದರೆಯ ಜಿನೇಶ್ ಪ್ರಸಾದ್ (ತೃತೀಯ), ಉಡುಪಿಯ ಆಸ್ಟ್ರೋ ಮೋಹನ್, ಬೆಂಗಳೂರಿನ ಪೂರ್ಣಿಮಾ ರವಿ (ಸಮಾಧಾನಕರ), ಮೈಸೂರಿನ ಕೆ.ಎಚ್. ಚಂದ್ರು, ಕಲಬುರಗಿಯ ಶಿವಶರಣಪ್ಪ ಬೆನ್ನೂರ್ (ವಿಶೇಷ) ಬಹುಮಾನಗಳಿಗೆ ಭಾಜನರಾಗಿದ್ದಾರೆ.


ಪ್ರಥಮ ಬಹುಮಾನ ₹25 ಸಾವಿರ, ದ್ವಿತೀಯ ₹15 ಸಾವಿರ, ತೃತೀಯ ₹10 ಸಾವಿರ, ಸಮಾಧಾನಕರ ₹3 ಸಾವಿರ ಹಾಗೂ ವಿಶೇಷ ಬಹುಮಾನ ₹2,500 ನಗದು ಪುರಸ್ಕಾರ ಒಳಗೊಂಡಿದೆ.



ಚುನಾವಣಾ ಆಯೋಗದಿಂದ ಪ್ರಶಸ್ತಿ ಪಡೆದ ಚಿತ್ರ... ಹಿರಿಯರೊಬ್ಬರು ಮತದಾನ ಮಾಡಲು ವಿದ್ಯಾರ್ಥಿನಿಯರು ನೆರವು ನೀಡಿದ ಈ ನೋಟವನ್ನು ಪ್ರಜಾವಾಣಿ ಛಾಯಾಗ್ರಾಹಕ ಎಚ್. ಫಕ್ರುದ್ದೀನ್ ಸೆರೆಹಿಡಿದಿದ್ದರು

‘30 ಲಕ್ಷ ಸರ್ಕಾರಿ ಹುದ್ದೆ ಭರ್ತಿ’

ಬಖ್ತಿಯಾರ್‌ಪುರ/ಪಾಲಿಗಂಜ್ (ಬಿಹಾರ) (ಪಿಟಿಐ): ಲೋಕಸಭಾ ಚುನಾವಣೆ ಬಳಿಕ ಕೇಂದ್ರದಲ್ಲಿ ‘ಇಂಡಿಯಾ’ ಮೈತ್ರಿಕೂಟದ ಸರ್ಕಾರ ರಚನೆಯಾದರೆ, ಮುಚ್ಚಿರುವ ಎಲ್ಲ ಕೈಗಾರಿಕೆಗಳನ್ನು ತೆರೆಯುತ್ತೇವೆ ಮತ್ತು ಖಾಲಿ ಇರುವ 30 ಲಕ್ಷ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದರು.



ಬಿಹಾರದಲ್ಲಿ ಮಹಾಘಟಬಂಧನ್ ಅಭ್ಯರ್ಥಿಗಳ ಪರವಾಗಿ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಸೋಮವಾರ ಮಾತನಾಡಿದ ಅವರು, ‘ನಾವು ಅಧಿಕಾರಕ್ಕೆ ಬಂದರೆ ಅಗ್ನಿಪಥ ಯೋಜನೆಯನ್ನು ರದ್ದುಪಡಿಸುತ್ತೇವೆ ಮತ್ತು ಪ್ರತಿ ತಿಂಗಳು ಮಹಿಳೆಯರ ಖಾತೆಗೆ ತಲಾ ₹8,500 ಜಮೆ ಮಾಡುತ್ತೇವೆ’ ಎಂದು ಪುನರುಚ್ಚರಿಸಿದರು.

‘ದೇಶದಲ್ಲಿ ನಮ್ಮ ಮೈತ್ರಿ ಪರ ಅಲೆ ಇರುವುದು ಸ್ಪಷ್ಟವಾಗಿದೆ. ಹೀಗಾಗಿ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗಲು ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದರು.

‘ಮೋದಿ ಅವರು ಅಗ್ನಿಪಥ ಯೋಜನೆ ತಂದು ಸೈನಿಕರನ್ನು ಕಾರ್ಮಿಕರನ್ನಾಗಿ ಮಾಡಿದ್ದಾರೆ. ಕೇಂದ್ರವು ಸೇನೆಯಲ್ಲಿ ಅಗ್ನಿವೀರರು ಮತ್ತು ಇತರರು ಎಂದು ಎರಡು ವಿಭಾಗಗಳನ್ನು ಸೃಷ್ಟಿಸಿದೆ. ಅಗ್ನಿವೀರರು ಗಾಯಗೊಂಡರೆ ಅವರಿಗೆ ಪರಿಹಾರ ಸಿಗುವುದಿಲ್ಲ. ಅಲ್ಲದೆ ಅವರು ಹುತಾತ್ಮರಾದರೆ ಹುತಾತ್ಮರ ಸ್ಥಾನಮಾನವೂ ಸಿಗುವುದಿಲ್ಲ. ಏಕೆ ಈ ತಾರತಮ್ಯ’ ಎಂದು ಪ್ರಶ್ನಿಸಿದರು.

ತನ್ನನ್ನು ದೇವರೇ ಕಳಿಸಿದ್ದಾನೆ ಎನ್ನುವ ಮೋದಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಜೂನ್ 4ರ ಬಳಿಕ, ಜಾರಿ ನಿರ್ದೇಶನಾಲಯವು ಭ್ರಷ್ಟಾಚಾರದ ಬಗ್ಗೆ ಮೋದಿ ಅವರನ್ನು ಕೇಳಿದರೆ, ಅವರು ನನಗೇನು ಗೊತ್ತಿಲ್ಲ. ಏಕೆಂದರೆ ನನ್ನನ್ನು ದೇವರೇ ಕಳುಹಿಸಿರುವುದು ಎನ್ನುತ್ತಾರೆ’ ಎಂದರು.

ಮೋದಿ ಅವರು 22 ಶತಕೋಟ್ಯಧಿಪತಿಗಳನ್ನು ಸೃಷ್ಟಿಸಿದ್ದಾರೆ. ಆದರೆ ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಕೋಟಿಗಟ್ಟಲೆ ಕೋಟ್ಯಧಿಪತಿಗಳನ್ನು ಸೃಷ್ಟಿಸಲಿದ್ದೇವೆ ಎಂದು ಹೇಳಿದರು. ತಮ್ಮ ಶತಕೋಟ್ಯಧಿಪತಿ ಸ್ನೇಹಿತರ ₹16 ಲಕ್ಷ ಕೋಟಿ ಸಾಲವನ್ನು ಮೋದಿ ಅವರು ಮನ್ನಾ ಮಾಡಿದ್ದಾರೆ ಎಂದು ಆರೋಪಿಸಿದ ಅವರು, ಇದನ್ನು ದೇಶದ ಜನರು ಎಂದಿಗೂ ಕ್ಷಮಿಸುವುದಿಲ್ಲ ಎಂದು ಪ್ರತಿಪಾದಿಸಿದರು.

ಈ ಚುನಾವಣೆಯು ದೇಶ, ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ಬಡವರ ಮೀಸಲಾತಿ ಉಳಿಸಲು ನಡೆಯುತ್ತಿದೆ ಎಂದು ಅವರು ಹೇಳಿದರು.

‘ರಾಷ್ಟ್ರೀಯ ಭದ್ರತೆ ಜತೆ ಮೋದಿ ಸರ್ಕಾರದ ಆಟ’

ನವದೆಹಲಿ (ಪಿಟಿಐ): ಅಗ್ನಿಪಥ ಯೋಜನೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಿಡಿ ಕಾರಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಮೋದಿ ಸರ್ಕಾರವು ರಾಷ್ಟ್ರೀಯ ಭದ್ರತೆ ಮತ್ತು ಯುವಜನರ ಭವಿಷ್ಯದ ಜತೆ ಆಟವಾಡುತ್ತಿದೆ ಎಂದು ಆರೋಪಿಸಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ಅಗ್ನಿಪಥ ಯೋಜನೆಯು ‘ನಿರ್ಗಮಿಸುತ್ತಿರುವ ಪ್ರಧಾನಿ’ಯ ಕೊಡುಗೆಯಾಗಿದ್ದು, ಕೇಂದ್ರದಲ್ಲಿ ನಮ್ಮ ಸರ್ಕಾರ ಬಂದ ಬಳಿಕ ಈ ಯೋಜನೆಯನ್ನು ರದ್ದುಗೊಳಿಸಲಾಗುವುದು’ ಎಂದು ಪ್ರತಿಪಾದಿಸಿದ್ದಾರೆ.

ಅಗ್ನಿಪಥ ಯೋಜನೆ ಜಾರಿಗೂ ಮುನ್ನ ದೇಶದಲ್ಲಿ 75,000 ಯುವಕರು ಪ್ರತಿ ವರ್ಷ ಸಶಸ್ತ್ರ ಪಡೆಗಳಿಗೆ ನೇಮಕ ಆಗುತ್ತಿದ್ದರು. ಆದರೆ ಈಗ ಅದು ನಾಲ್ಕನೇ ಒಂದು ಭಾಗದಷ್ಟು ಕಡಿಮೆಯಾಗಿದೆ ಎಂದು ಹೇಳಿದ್ದಾರೆ.

‘ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆಯ ಮುಖ್ಯಸ್ಥರುಗಳು ಅಗ್ನಿಪಥ ಯೋಜನೆಯನ್ನು ವಿರೋಧಿಸಿದ್ದರು. ಸೇನೆಯ ಮಾಜಿ ಮುಖ್ಯಸ್ಥ ಎಂ.ಎಂ. ನರವಣೆ ಅವರು ತಮ್ಮ ಪುಸ್ತಕದಲ್ಲಿ ಈ ಕುರಿತು ಪ್ರಸ್ತಾಪಿಸಿದ್ದಾರೆ. ಜೂನ್ 4ರಂದು ಮೋದಿ ಅವರು ಇದಕ್ಕೆ ಉತ್ತರ ನೀಡಬೇಕು. ಈ ಯೋಜನೆ ಮೂಲಕ ದೇಶದ ಭದ್ರತೆಯೊಂದಿಗೆ ಏಕೆ ಆಟವಾಡಲಾಯಿತು ಎಂಬುದನ್ನು ತಿಳಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಅಧಿಕಾರ ಹಿಡಿಯುವುದೇ ಗುರಿ’

ಶಿಮ್ಲಾ (ಪಿಟಿಐ): ಯಾವುದೇ ರೀತಿಯಲ್ಲಾದರೂ ಅಧಿಕಾರ ಹಿಡಿಯುವುದು ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ನಾಯಕರ ಏಕೈಕ ಗುರಿಯಾಗಿದ್ದು, ಅದಕ್ಕಾಗಿ ಅವರು ಹಣಬಲ, ಶಾಸಕರಿಗೆ ಲಂಚ ನೀಡುವುದು, ದೇವರ ಹೆಸರಿನಲ್ಲಿ ಜನರ ದಿಕ್ಕುತಪ್ಪಿಸುವುದು ಮುಂತಾದ ಭ್ರಷ್ಟ ಪದ್ಧತಿಗಳಲ್ಲಿ ತೊಡಗಿದ್ದಾರೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಸೋಮವಾರ ಹೇಳಿದರು.



ಹಿಮಾಚಲ ಪ್ರದೇಶದ ಚಂಬಾದಲ್ಲಿ ಅವರು ಚುನಾವಣಾ ಪ್ರಚಾರ ನಡೆಸಿದರು.

‘ಕಾಂಗ್ರೆಸ್ 55 ವರ್ಷಗಳ ಕಾಲ ಅಧಿಕಾರದಲ್ಲಿತ್ತು. ಆದರೆ, ಶ್ರೀಮಂತ ಪಕ್ಷ ಆಗಲಿಲ್ಲ. ಆದರೆ, ಕೇವಲ 10 ವರ್ಷ ಆಡಳಿತ ನಡೆಸಿದ ಬಿಜೆಪಿ ಶ್ರೀಮಂತ ಪಕ್ಷವಾಯಿತು’ ಎಂದು ಅಭಿಪ್ರಾಯಪಟ್ಟರು.

ಮತದಾನಕ್ಕಾಗಿ ಅಭಿನಂದನೆ

ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರದ ಅನಂತನಾಗ್–ರಾಜೌರಿ ಲೋಕಸಭಾ ಕ್ಷೇತ್ರದಲ್ಲಿ ದಾಖಲೆ ಮತದಾನಕ್ಕೆ ಕಾರಣರಾದ ಮತದಾರರಿಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ವಿಶೇಷ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.



ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ, ‘ಲೋಕಸಭಾ ಚುನಾವಣೆಯ ದಾಖಲೆ ಮತದಾನಕ್ಕಾಗಿ ಅನಂತನಾಗ್–ರಾಜೌರಿಯ ನನ್ನ ಸೋದರರಿಗೆ ಹಾಗೂ ಸೋದರಿಯರಿಗೆ ವಿಶೇಷ ಅಭಿನಂದನೆಗಳು. ನಿಮ್ಮ ಉತ್ಸಾಹದ ಪಾಲ್ಗೊಳ್ಳುವಿಕೆಯು ಪ್ರಜಾಪ್ರಭುತ್ವವಾದಿ ಚೈತನ್ಯದ ರೋಮಾಂಚಕ ಪುರಾವೆ’ ಎಂದು ಉಲ್ಲೇಖಿಸಿದ್ದಾರೆ.

ಮೇ 25ರಂದು ಆರನೇ ಹಂತದಲ್ಲಿ ಮತದಾನ ನಡೆದಿದ್ದ ಕ್ಷೇತ್ರದಲ್ಲಿ ಶೇ 54.84ರಷ್ಟು ಮತದಾನ ನಡೆದಿತ್ತು. ಇದು ಇತ್ತೀಚಿನ ದಶಕಗಳಲ್ಲಿಯೇ ಅತ್ಯುತ್ತಮವಾದ ಮತದಾನ ಪ್ರಮಾಣ ಎನ್ನಲಾಗಿದೆ.

ಕಾಶ್ಮೀರ ಕಣಿವೆಯಲ್ಲಿ ಜನ ಅತ್ಯುತ್ಸಾಹದಿಂದ ಮತದಾನದಲ್ಲಿ ಭಾಗವಹಿಸಿದ್ದು, ಈ ಹಿಂದೆ ಕಡಿಮೆ ಮತದಾನವಾಗುತ್ತಿದ್ದಂಥ ಪ್ರದೇಶಗಳಲ್ಲಿಯೂ ಉತ್ತಮ ಮತ ಪ್ರಮಾಣ ದಾಖಲಾಗಿದೆ.

ಬಿಜೆಪಿ ಅಭ್ಯರ್ಥಿ ಬಿಡುಗಡೆಗೆ ಪ್ರತಿಭಟನೆ

ಖುರ್ದಾ (ಒಡಿಶಾ) (ಪಿಟಿಐ): ಇವಿಎಂ ಹಾನಿಗೊಳಿಸಿರುವ ಆರೋಪದ ಮೇಲೆ ಬಂಧಿಸಲಾಗಿರುವ ಖುರ್ದಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಶಾಂತ್ ಜಗದೇವ್ ಅವರನ್ನು ಬೇಷರತ್ತಾಗಿ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಸೋಮವಾರ ಖುರ್ದಾ ಜಿಲ್ಲಾ ಉಪ ವಿಭಾಗಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಒಡಿಶಾದಲ್ಲಿ ಮೇ 25ರಂದು ಲೋಕಸಭೆಯ ಆರು ಮತ್ತು ವಿಧಾನಸಭೆಯ 42 ಕ್ಷೇತ್ರಗಳಿಗೆ ಏಕಕಾಲದಲ್ಲಿ ಮತದಾನ ನಡೆದಿತ್ತು.

ಜಗದೇವ್ ಅವರನ್ನು ಬಿಡುಗಡೆ ಮಾಡದಿದ್ದರೆ ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿ, ಖುರ್ದಾ ಪಟ್ಟಣ ಬಂದ್‌ಗೆ ಕರೆ ನೀಡಬೇಕಾಗುತ್ತದೆ ಎಂದು ಪ್ರತಿಭಟನಕಾರರು ಎಚ್ಚರಿಕೆ ನೀಡಿದರು.

ಜಗದೇವ್ ಅವರನ್ನು ಬಂಧಿಸಲು ಆಡಳಿತಾರೂಢ ಬಿಜೆಡಿ ಸಂಚು ರೂಪಿಸಿದೆ ಎಂದು ಆರೋಪಿಸಿದ ಬಿಜೆಪಿ ಕಾರ್ಯಕರ್ತರು, ಮತಗಟ್ಟೆಯ ಸಿ.ಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಬಹಿರಂಗಗೊಳಿಸಬೇಕು ಎಂದು ಆಗ್ರಹಿಸಿದರು.

‘ಮತಗಟ್ಟೆ ಅಧಿಕಾರಿ ನೀಡಿದ ದೂರನ್ನು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ. ಎಂದು ಖುರ್ದಾದ ಪೊಲೀಸ್ ವರಿಷ್ಠಾಧಿಕಾರಿ ಅವಿನಾಶ್ ಕುಮಾರ್ ತಿಳಿಸಿದರು.

ಚುಟುಕು

ಜೂನ್ 1ಕ್ಕೆ ‘ಇಂಡಿಯಾ’ ಸಭೆ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ತಮ್ಮ ಸಾಧನೆಯ ಬಗ್ಗೆ ಚರ್ಚಿಸಲು ಮತ್ತು ಮುಂದಿನ ಕಾರ್ಯತಂತ್ರ ರೂಪಿಸಲು ‘ಇಂಡಿಯಾ’ ಕೂಟದ ಪ್ರಮುಖ ನಾಯಕರು ಜೂನ್ 1ಕ್ಕೆ ಸಭೆ ಸೇರಲಿದ್ದಾರೆ.

ಜೂನ್ 1ರಂದು ಲೋಕಸಭಾ ಚುನಾವಣೆಯ ಕೊನೆಯ ಹಂತದ ಮತದಾನ ನಡೆಯಲಿದ್ದು, ಅಂದು ಮಧ್ಯಾಹ್ನ ನವದೆಹಲಿಯಲ್ಲಿ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

‘ಇಂಡಿಯಾ’ ಕೂಟದ ಪ್ರಮುಖ ಪಾಲುದಾರ ಪಕ್ಷವಾದ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಸಭೆಯ ನೇತೃತ್ವ ವಹಿಸಲಿದ್ದಾರೆ ಎನ್ನಲಾಗಿದೆ.

ಟಿಎಂಸಿ ಪಾಲ್ಗೊಳ್ಳುವುದಿಲ್ಲ: ಜೂನ್ 1ರ ‘ಇಂಡಿಯಾ’ ಕೂಟದ ಸಭೆಯಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮುಖಂಡರು ಭಾಗವಹಿಸುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಜೂನ್ 1ರಂದು ಕೋಲ್ಕತ್ತ ದಕ್ಷಿಣ ಮತ್ತು ಕೋಲ್ಕತ್ತ ಉತ್ತರ ಸೇರಿದಂತೆ ಒಂಬತ್ತು ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಅವು ಪಕ್ಷದ ಪಾಲಿಗೆ ಮಹತ್ವದ ಕ್ಷೇತ್ರಗಳು. ಜತೆಗೆ ಅಂದು ಪಕ್ಷದ ಪ್ರಮುಖರಾದ ಮಮತಾ ಬ್ಯಾನರ್ಜಿ, ಅಭಿಷೇಕ್ ಬ್ಯಾನರ್ಜಿ ಮುಂತಾದವರು ಮತದಾನ ಮಾಡಲಿದ್ದಾರೆ. ಹೀಗಾಗಿ ಅಂದು ನಡೆಯುವ ಸಭೆಯಲ್ಲಿ ಪಕ್ಷದ ಪ್ರತಿನಿಧಿಗಳು ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ. ಈ ವಿಚಾರವನ್ನು ಸಭೆಗೆ ತಿಳಿಸಲಾಗಿದೆ. ಚುನಾವಣೆ ಮತ್ತು ಚಂಡಮಾರುತದ ಪರಿಹಾರ ಕಾರ್ಯಗಳಿಂದಾಗಿ ಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ ಎಂದು ಮಮತಾ ಬ್ಯಾನರ್ಜಿ ಸ್ಪಷ್ಟಪಡಿಸಿದ್ದಾರೆ.

‘ಸರ್ಕಾರ ಬೀಳಿಸುವ ಬೆದರಿಕೆ’

ಚಂಡೀಗಢ (ಪಿಟಿಐ): ‘ಪಂಜಾಬ್‌ನ ಭಗವಂತ ಮಾನ್ ಸರ್ಕಾರವನ್ನು ಉರುಳಿಸುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಬೆದರಿಕೆ ಒಡ್ಡುತ್ತಿದ್ದಾರೆ’ ಎಂದು ಆರೋಪಿಸಿರುವ ಎಎಪಿ ರಾಷ್ಟ್ರೀಯ ಸಂಚಾಲಕ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, ‘ಇದು ಸರ್ವಾಧಿಕಾರ’ ಆಗಿದೆ ಎಂದು ದೂರಿದರು.



ಲುಧಿಯಾನದಲ್ಲಿ ಭಾನುವಾರ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ್ದ ಅಮಿತ್ ಶಾ ಅವರು, ಚುನಾವಣೆಯಲ್ಲಿ ಬಿಜೆಪಿ ವಿಜಯದ ಬಳಿಕ ಭಗವಂತ ಮಾನ್ ಸರ್ಕಾರ ಹೆಚ್ಚು ಕಾಲ ಉಳಿಯುವುದಿಲ್ಲ ಎಂದು ಹೇಳಿದ್ದರು.

‘ಇದಕ್ಕೆ ಅಮೃತಸರದ ವ್ಯಾಪಾರಿಗಳ ಸಭೆಯಲ್ಲಿ ಸೋಮವಾರ ಪ್ರತಿಕ್ರಿಯಿಸಿದ ಕೇಜ್ರಿವಾಲ್, ‘ಅಮಿತ್ ಶಾ ಅವರ ಹೇಳಿಕೆಯನ್ನು ನೀವು ಕೇಳಿದ್ದೀರಾ? ಹಿಂದೆ ಪಂಜಾಬಿಗಳನ್ನು ಸಾಕಷ್ಟು ನಿಂದಿಸಿದ್ದ ಅವರು, ಈಗ ಪಂಜಾಬ್ ಸರ್ಕಾರಕ್ಕೆ ಬೆದರಿಕೆ ಹಾಕಿದ್ದಾರೆ. ಜೂನ್ 4ರ ಬಳಿಕ ಭಗವಂತ ಮಾನ್ ಮುಖ್ಯಮಂತ್ರಿಯಾಗಿ ಉಳಿಯುವುದಿಲ್ಲ ಎಂದಿದ್ದಾರೆ’ ಎಂದರು.

‘ನಮ್ಮಲ್ಲಿ 92 ಶಾಸಕರಿದ್ದಾರೆ. ಅದು ಹೇಗೆ ಸರ್ಕಾರವನ್ನು ಉರುಳಿಸುತ್ತೀರಿ’ ಎಂದು ಪ್ರಶ್ನಿಸಿದ ಅವರು ‘ದೇಶ ಸರ್ವಾಧಿಕಾರಿಯ ಹಿಡಿತದಲ್ಲಿದೆ. ಸಿಬಿಐ ಮತ್ತು ಇ.ಡಿ ಮೂಲಕ ಶಾಸಕರಿಗೆ ಬೆದರಿಕೆ ಹಾಕಿ ಅವರನ್ನು ಖರೀದಿಸುವ ಯೋಜನೆ ಇದ್ದಂತಿದೆ’ ಎಂದು ಆರೋಪಿಸಿದರು.

ಅಮಿತ್ ಶಾ ವಿರುದ್ಧ ವಾಗ್ದಾಳಿ ನಡೆಸಿದ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು, ‘ನೀವು ಮತ ಕೇಳಲು ಇಲ್ಲಿಗೆ ಬರುತ್ತಿದ್ದೀರಾ ಅಥವಾ ಸರ್ಕಾರವನ್ನು ಬೀಳಿಸುವ ಬೆದರಿಕೆ ಹಾಕಲು ಬರುತ್ತಿದ್ದೀರಾ? ನಮ್ಮಲ್ಲಿ 92 ಶಾಸಕರಿದ್ದಾರೆ, ನಮ್ಮ ಸರ್ಕಾರವನ್ನು ಬೀಳಿಸುವ ಧೈರ್ಯ ನಿಮಗಿದೆಯಾ’ ಎಂದು ಪ್ರಶ್ನಿಸಿದರು.

‘ಸರ್ಕಾರ ಉರುಳಿಸಲು ಸಾಧ್ಯವಿಲ್ಲ’

ಸೋನಾಪುರ/ಕೋಲ್ಕತ್ತ (ಪಶ್ಚಿಮ ಬಂಗಾಳ) (ಪಿಟಿಐ): ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಲೋಕಸಭಾ ಚುನಾವಣೆಯ ನಂತರ ಪ್ರಜಾತಾಂತ್ರಿಕ ರೀತಿಯಲ್ಲಿ ಆಯ್ಕೆಯಾಗಿರುವ ಟಿಎಂಸಿ ಸರ್ಕಾರವನ್ನು ಉರುಳಿಸುವ ಅದರ ಕನಸು ಈಡೇರುವುದಿಲ್ಲ ಎಂದು ಪ್ರತಿಪಾದಿಸಿದರು.



ಜಾದವ್‌ಪುರ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, ‘ಟಿಎಂಸಿ ಸರ್ಕಾರವು ಕೊನೆಯ ದಿನಗಳನ್ನು ಎಣಿಸುತ್ತಿದೆ ಎನ್ನುವ ಅವರ ಹೇಳಿಕೆ ಬೆದರಿಕೆ ಒಡ್ಡುವಂಥದ್ದಾಗಿದೆ’ ಎಂದು ಹೇಳಿದರು.

‘ಜನರಿಂದ ಆಯ್ಕೆಯಾದ ಸರ್ಕಾರ ಉರುಳಿಸುವ ಧೈರ್ಯವನ್ನು ಬಿಜೆಪಿ ತೋರಬಾರದು. ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಅವರ ಆಶಯ ಈಡೇರುವುದಿಲ್ಲ. ಏಕೆಂದರೆ, ಜನರ ತೀರ್ಪು ಟಿಎಂಸಿ ಪರವಾಗಿದೆ’ ಎಂದು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಬಿಜೆಪಿಯನ್ನು ಟಿಎಂಸಿ ಏಕಾಂಗಿಯಾಗಿ ಎದುರಿಸುತ್ತಿದ್ದು, ಕಾಂಗ್ರೆಸ್ ಮತ್ತು ಸಿಪಿಎಂ ಕೇಸರಿ ಪಾಳಯದೊಂದಿಗೆ ಶಾಮೀಲಾಗಿವೆ ಎಂದು ಆರೋಪಿಸಿದರು.

‘ಮೋದಿ ಸರ್ಕಾರವು ಅದಾನಿ, ಅಂಬಾನಿ ಅಂತಹವರ ಪರವಾಗಿದ್ದು, ಅವರಿಗೆ ರಕ್ಷಣಾ ವಲಯದಲ್ಲಿ ಪಾಲುದಾರಿಕೆ ನೀಡಿ, ಪ್ರಮುಖ ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡಿತು. ಅಡುಗೆ ಅನಿಲ ಸಿಲಿಂಡರ್ ಅನ್ನು ಸಾವಿರದ ಗಡಿ ದಾಟಿಸಿತು’ ಎಂದು ವಾಗ್ದಾಳಿ ನಡೆಸಿದರು.



ಸುಭಾಷಿತ

ಎಷ್ಟು ಗಟ್ಟಿ ಮನುಷ್ಯನೇ ಇರಲಿ, ಹೊಗಳಿಕೆಗೆ ಕಿವಿಗೊಟ್ಟನೆಂದರೆ ಬಲೆಗೆ ಬೀಳುತ್ತಾನೆ.

–ಶಿವರಾಮ ಕಾರಂತ

ಐಪಿಎಲ್: ಕೋಲ್ಕತ್ತ ತಂಡದ ಸಾಂಘಿಕ ಪ್ರಯತ್ನಕ್ಕೆ ಸಂದ ಜಯ

'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು' ಎಂಬುದನ್ನು ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಸಾಬೀತು ಮಾಡಿದೆ. ಅನುಭವಿ ಹಾಗೂ ಯುವ ಆಟಗಾರರ ಸಾಂಘಿಕ ಪ್ರಯತ್ನವು ತಂಡದ ಬಲ ಹೆಚ್ಚಿಸಿತು. ಜೊತೆಗೆ ಶಿಸ್ತಿನ ಮಾರ್ಗದರ್ಶನವೂ ದೊರೆತ ಕಾರಣ ತಂಡವು 'ಇಂಡಿಯನ್ ಪ್ರೀಮಿಯರ್ ಲೀಗ್' ಕ್ರಿಕೆಟ್ ಟೂರ್ನಿಯ 17ನೇ ಆವೃತ್ತಿಯಲ್ಲಿ ಪ್ರಶಸ್ತಿ ಜಯಿಸಿತು. ಈ ತಂಡವು ಐಪಿಎಲ್ ಇತಿಹಾಸದಲ್ಲಿ ಜಯಿಸಿದ ಮೂರನೇ ಟ್ರೋಫಿ ಇದಾಗಿದೆ. ಅದೂ ಹತ್ತು ವರ್ಷಗಳ ನಂತರ ಈ ಸಾಧನೆ ಮಾಡಿದೆ. 2012 ಹಾಗೂ 2014ರಲ್ಲಿ ತಂಡವು ಪ್ರಶಸ್ತಿ ಜಯಿಸಿದಾಗ ನಾಯಕರಾಗಿದ್ದ ಗೌತಮ್ ಗಂಭೀರ್ ಈ ಬಾರಿ ಮೆಂಟರ್ ಆಗಿದ್ದರು. ಅವರೊಂದಿಗೆ ದೇಶಿ ಕ್ರಿಕೆಟ್‌ನ ಯಶಸ್ವಿ ತರಬೇತುದಾರರಾದ ಚಂದ್ರಕಾಂತ್ ಪಂಡಿತ್, ಅಭಿಷೇಕ್ ನಾಯರ್, ಭರತ್ ಅರುಣ್ ಹಾಗೂ ನೆರವು ಸಿಬ್ಬಂದಿಯ ಶ್ರಮಕ್ಕೆ ಸಿಹಿಫಲ ಲಭಿಸಿದೆ. ರಣಜಿ ಟ್ರೋಫಿ ಟೂರ್ನಿಯ ಪಂದ್ಯಗಳಲ್ಲಿ ಆಡದ ಕಾರಣಕ್ಕೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕೆಂಗಣ್ಣಿಗೆ ಗುರಿಯಾಗಿದ್ದ ಶ್ರೇಯಸ್ ಅಯ್ಯರ್ ಅವರಿಗೆ ನಾಯಕತ್ವದ ಜವಾಬ್ದಾರಿ ನೀಡಿದ ಕೆಕೆಆರ್ ಆಡಳಿತ ಮಂಡಳಿ ಬಗ್ಗೆ ಟೀಕೆಗಳು ಕೇಳಿಬಂದಿದ್ದವು. ಹರಾಜು ಪ್ರಕ್ರಿಯೆಯಲ್ಲಿ ₹24.75 ಕೋಟಿ (ಐಪಿಎಲ್ ಇತಿಹಾಸದ ಗರಿಷ್ಠ ಮೌಲ್ಯ) ಪಡೆದು ಕೆಕೆಆರ್‌ಗೆ ಸೇರ್ಪಡೆಯಾಗಿದ್ದ ವೇಗಿ ಮಿಚೆಲ್ ಸ್ಟಾರ್ಕ್ ಅವರು ಆರಂಭಿಕ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದರು. ಆದರೆ ಫೈನಲ್ ಹಾಗೂ ಕ್ವಾಲಿಫೈಯರ್ ಪಂದ್ಯಗಳಲ್ಲಿ ಸ್ಟಾರ್ಕ್ ಅವರೇ ತಂಡದ ಗೆಲುವಿನ ರೂವಾರಿಯಾದರು. ಅನುಭವಿ ಆಲ್‌ರೌಂಡರ್ ಸುನಿಲ್ ನಾರಾಯಣ್ ಮತ್ತು ಆಂಡ್ರೆ ರಸೆಲ್ ಅವರ ಮೇಲೆ ತಂಡವು ಇಟ್ಟ ವಿಶ್ವಾಸ ಹುಸಿಯಾಗಲಿಲ್ಲ. ಯುವ ಆಟಗಾರರಾದ ವರುಣ್ ಚಕ್ರವರ್ತಿ, ಅಂಗ್‌ಕ್ರಿಷ್ ರಘುವಂಶಿ, ರಮಣದೀಪ್ ಸಿಂಗ್ ಹಾಗೂ ವೆಂಕಟೇಶ್ ಅಯ್ಯರ್ ಅವರೂ ತಮ್ಮ ಮೇಲಿಟ್ಟ ನಂಬಿಕೆ ಉಳಿಸಿಕೊಂಡರು. ಎಲ್ಲಕ್ಕಿಂತ ಮುಖ್ಯವಾಗಿ ಈ ತಂಡದಲ್ಲಿ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಅಥವಾ ಮಹೇಂದ್ರಸಿಂಗ್ ಧೋನಿ ಅವರಂತಹ ದೊಡ್ಡ ತಾರೆಗಳು ಇರಲಿಲ್ಲ. [illegible] ಜೂನ್ 2ರಿಂದ ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಆತಿಥ್ಯದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ತಂಡಗಳಿಗೂ ಕೆಕೆಆರ್ ಅನುಸರಿಸಿದ ಮಾದರಿಯು ನೆರವಾಗಬಹುದು.



ಹಣ ಹೂಡಿದವರಿಗೆ ಭರ್ಜರಿ ಆದಾಯ ಮತ್ತು ನೋಡುಗರಿಗೆ ಹೇರಳ ಮನರಂಜನೆ ನೀಡಿದ ಮತ್ತೊಂದು ಐಪಿಎಲ್ ಟೂರ್ನಿ ಇತಿಹಾಸದ ಪುಟ ಸೇರಿದೆ

ಫೈನಲ್‌ನಲ್ಲಿ ಪ್ರತಿಸ್ಪರ್ಧಿಯಾಗಿದ್ದ ಪ್ಯಾಟ್ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟರ್‌ಗಳು ಟೂರ್ನಿಯ ಆರಂಭದಿಂದಲೂ ಅಬ್ಬರಿಸಿದ್ದರು. ರನ್‌ಗಳ ಹೊಳೆ ಹರಿಸಿದ್ದರು. [illegible] ವಿಡಿಯೊ ದೊಡ್ಡ ಚರ್ಚೆಗೆ ಕಾರಣವಾಯಿತು. ಇಂಪ್ಯಾಕ್ಟ್ ಪ್ಲೇಯರ್ ನಿಯಮಕ್ಕೆ ಪ್ರಮುಖ ಆಟಗಾರರಿಂದ ವಿರೋಧ ವ್ಯಕ್ತವಾಯಿತು. ಇವೆಲ್ಲದರಾಚೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಸಲವೂ ಕಪ್ ಜಯಿಸಲಿಲ್ಲ. ಟೂರ್ನಿಯ ಮೊದಲಾರ್ಧದಲ್ಲಿ ಸತತ ಸೋಲುಗಳನ್ನು ಅನುಭವಿಸಿದ ಆರ್‌ಸಿಬಿ, ಲೀಗ್ ಹಂತದಲ್ಲಿ ತನ್ನ ಕೊನೆಯ ಆರು ಪಂದ್ಯಗಳಲ್ಲಿ ಸತತ ಜಯ ಸಾಧಿಸಿ ಪ್ಲೇಆಫ್ ಪ್ರವೇಶಿಸಿದ್ದು ರೋಚಕ ಕತೆಯಾಗಿ ದಾಖಲಾಯಿತು. ಹಣ ಹೂಡಿದವರಿಗೆ ಭರ್ಜರಿ ಆದಾಯ ಮತ್ತು ನೋಡುಗರಿಗೆ ಹೇರಳ ಮನರಂಜನೆ ನೀಡಿದ ಮತ್ತೊಂದು ಐಪಿಎಲ್ ಟೂರ್ನಿಯು ಇತಿಹಾಸದ ಪುಟ ಸೇರಿತು.

ದಿನದ ಟ್ವೀಟ್


ಹತಾಶ ಸ್ಥಿತಿಗೆ ಕೊನೆ ಎಂದು?



ಬಿಬಿಎಂಪಿಯಲ್ಲಿ ಚುನಾಯಿತ ಸದಸ್ಯರು ಇರಲಿ ಅಥವಾ ಇಲ್ಲದಿರಲಿ ಅದು ಒಂದು ಭ್ರಷ್ಟ ಸಂಸ್ಥೆಯಾಗಿಯೇ ಇರುತ್ತದೆ, ಸಮಸ್ಯೆಗಳು ಪರಿಹಾರ ಕಾಣುವುದಿಲ್ಲ ಮತ್ತು ಯಾವ ವ್ಯತ್ಯಾಸವೂ ಇರುವುದಿಲ್ಲ.

ಶ್ರೀನಾಥ್ ಕಡಬ

ಕಿಡಿನುಡಿ



90ರ ದಶಕದ ಹಿಂದಿ ಚಲನಚಿತ್ರಗಳಲ್ಲಿ ಪೊಲೀಸರು, ಶಾಸಕರು, ವೈದ್ಯರು, ನ್ಯಾಯಾಧೀಶರು, ಮಾಫಿಯಾ ಸೇರಿದಂತೆ ಎಲ್ಲ ಕ್ಷೇತ್ರಗಳಿಗೆ ಸೇರಿದವರೂ ಭ್ರಷ್ಟರಾಗಿರುತ್ತಿದ್ದರು ಮತ್ತು ಸಿರಿವಂತನಾಗಿದ್ದ ವಿಲನ್‌ನ ನಿಯಂತ್ರಣಕ್ಕೆ ಒಳಪಟ್ಟಿರುತ್ತಿದ್ದರು. ದಾರಿತಪ್ಪಿದ ಅವನ ಮಕ್ಕಳು ಯಾವುದೇ ಭಯವಿಲ್ಲದೆ ಬಹಿರಂಗವಾಗಿಯೇ ಅಪರಾಧಗಳನ್ನು ಎಸಗುತ್ತಿದ್ದರು! ಆದರೆ ಅವೆಲ್ಲವೂ ಕ್ಲೈಮ್ಯಾಕ್ಸ್‌ವರೆಗೆ ಮಾತ್ರ. ನಂತರ ಅವನ ಸಾಮ್ರಾಜ್ಯ ಕುಸಿಯುತ್ತಿತ್ತು, ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತಿತ್ತು ಮತ್ತು ನ್ಯಾಯ ಸಲ್ಲುತ್ತಿತ್ತು! ನ್ಯಾಯಸಮ್ಮತ ಮತ್ತು ಸಮಂಜಸವಾದ 'ಅಂತ್ಯ'ಕ್ಕಾಗಿ ಭರವಸೆಯಿಂದ ಕಾಯುತ್ತಿದ್ದೇನೆ. #PuneAccident

ಊರ್ಮಿ, ವಕೀಲೆ

25 ವರ್ಷಗಳ ಹಿಂದೆ

ಶುಕ್ರವಾರ, 28-5-1999

• ವಾಯುಪಡೆಯ 2 ವಿಮಾನ ನಾಶ

ನವದೆಹಲಿ, ಮೇ 27 (ಪಿಟಿಐ, ಯುಎನ್‌ಐ)– ಜಮ್ಮು–ಕಾಶ್ಮೀರದ ಕಾರ್ಗಿಲ್ ವಲಯದಿಂದ ಪಾಕಿಸ್ತಾನ ಬೆಂಬಲಿತ ಉಗ್ರರನ್ನು ಹೊರ ಹಾಕಲು ನಡೆಸುತ್ತಿರುವ ಕಾರ್ಯಾಚರಣೆಯಲ್ಲಿ ಭಾರತೀಯ ವಾಯುಪಡೆಯ ಎರಡು ಮಿಗ್ ಯುದ್ಧ ವಿಮಾನಗಳು ನಾಶವಾಗಿವೆ. ಪಾಕಿಸ್ತಾನದ ಕ್ಷಿಪಣಿ ಒಂದು ವಿಮಾನವನ್ನು ಹೊಡೆದುರುಳಿಸಿದ್ದು, ಇನ್ನೊಂದು ತಾಂತ್ರಿಕ ದೋಷದಿಂದ ದುರಂತಕ್ಕೀಡಾಯಿತೆಂದು ರಕ್ಷಣಾ ಪಡೆ ಮೂಲ ತಿಳಿಸಿದೆ.

ಆದರೆ ಗಡಿ ಸೀಮೆ ಉಲ್ಲಂಘಿಸಿ ತಮ್ಮ ವ್ಯಾಪ್ತಿಯೊಳಕ್ಕೆ ನುಸುಳಿದ ಎರಡು ಯುದ್ಧ ವಿಮಾನಗಳನ್ನು ತಾನು ಹೊಡೆದುರುಳಿಸಿದ್ದಾಗಿ ಪಾಕಿಸ್ತಾನ ಹೇಳಿಕೊಂಡಿದೆ. ಇದರಿಂದಾಗಿ ಎರಡೂ ದೇಶಗಳ ನಡುವೆ ಆತಂಕದ ವಾತಾವರಣ ಸೃಷ್ಟಿಯಾಗಿದೆ.

• ಭಾರತದ ಬಂಧಿತ ಪೈಲಟ್ ಯುದ್ಧ ಕೈದಿ–ಪಾಕ್

ಇಸ್ಲಾಮಾಬಾದ್, ಮೇ 27 (ಪಿಟಿಐ, ಯುಎನ್‌ಐ)– ತಮ್ಮ ಪಡೆಗಳು ಬಂಧಿಸಿರುವ ಭಾರತದ ಮಿಗ್ ಯುದ್ಧ ವಿಮಾನವೊಂದರ ಚಾಲಕನನ್ನು 'ಯುದ್ಧ ಕೈದಿ' ಎಂದು ಪರಿಗಣಿಸುವುದಾಗಿ ಪಾಕಿಸ್ತಾನ ಪ್ರಕಟಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 28-5-1974

• ರೈಲ್ವೆ ಮುಷ್ಕರ ಮುಕ್ತಾಯ ಇಂದು ಕೆಲಸಕ್ಕೆ ವಾಪಸು

ನವದೆಹಲಿ, ಮೇ 27– ಇಪ್ಪತ್ತು ದಿನಗಳಿಂದ ರೈಲ್ವೆ ನೌಕರರು ಹೂಡಿದ್ದ ಮುಷ್ಕರ ನಾಳೆ (ಮಂಗಳವಾರ) ಬೆಳಿಗ್ಗೆ ಆರು ಗಂಟೆಗೆ ಮುಕ್ತಾಯಗೊಳ್ಳುತ್ತದೆ.

ಮುಷ್ಕರವನ್ನು ಏಕಪಕ್ಷೀಯವಾಗಿ ವಾಪಸು ತೆಗೆದುಕೊಳ್ಳುವಂತೆ ರೈಲ್ವೆ ನೌಕರರ ಹೋರಾಟ ಕುರಿತ ರಾಷ್ಟ್ರೀಯ ಸಮನ್ವಯ ಸಮಿತಿಯ ಕ್ರಿಯಾ ಸಮಿತಿ ಇಂದು ಸುದೀರ್ಘ ಕಾಲ ನಡೆದ ತನ್ನ ಸಭೆಯಲ್ಲಿ ತೀರ್ಮಾನಿಸಿತು.

ಎಷ್ಟೆಷ್ಟು ನಷ್ಟ?: ಪ್ರಯಾಣಿಕರು ಹಾಗೂ ಸಾಮಗ್ರಿ ಸಾಗಣೆಯಿಂದ ರೈಲ್ವೆ ಖಾತೆಗೆ ಬರುತ್ತಿದ್ದ ಸಂಪಾದನೆಯಲ್ಲಿ 50 ಕೋಟಿ ರೂ. ನಷ್ಟ.

ಮುಷ್ಕರಕಾರರಿಗೆ ವೇತನದಿಂದ ಆದ ನಷ್ಟ 25 ಕೋಟಿ ರೂ. ಅರ್ಥ ವ್ಯವಸ್ಥೆಗೆ ಉಂಟಾದ ನಷ್ಟ 500 ಕೋಟಿ ರೂ.

ರೈಲ್ವೆ ಮುಷ್ಕರದಿಂದ ಬ್ಯಾಂಕಿಂಗ್, ವಿಮೆ ಹಾಗೂ ಇನ್ನಿತರ ವಾಣಿಜ್ಯ ವಹಿವಾಟುಗಳಿಗೂ ಹಾನಿಯುಂಟಾಯಿತು.

ಗ್ರಾಹಕ ಸಂರಕ್ಷಣಾ ಕಾಯ್ದೆಯಿಂದ ವಕೀಲ ವೃತ್ತಿಗೆ ವಿನಾಯಿತಿ ನೀಡಿದ ಸುಪ್ರೀಂ ಕೋರ್ಟ್

ಗ್ರಾಹಕ ಸಂರಕ್ಷಣೆ ಮತ್ತು ವಕೀಲ ವೃತ್ತಿ



ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದಾಗಿನಿಂದ, ಈ ಕಾಯ್ದೆಯನ್ನು ಬಲಹೀನ ಮಾಡುವ ಪ್ರಯತ್ನಗಳು ನಡೆಯುತ್ತಲೇ ಇವೆ. ವಿಶೇಷವಾಗಿ ವೈದ್ಯರು, ವಕೀಲರಂತಹ ವೃತ್ತಿನಿರತರು ಗ್ರಾಹಕ ಸಂರಕ್ಷಣಾ ಕಾಯ್ದೆ ತಮಗೆ ಅನ್ವಯವಾಗುವುದಿಲ್ಲ ಎಂದು ವಾದಿಸುತ್ತಲೇ ಬಂದಿದ್ದಾರೆ.

ಭಾರತೀಯ ವೈದ್ಯಕೀಯ ಮಂಡಳಿ ಮತ್ತು ವಿ.ಪಿ. ಶಾಂತಾ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 1995ರಲ್ಲಿ ಮಹತ್ವದ ತೀರ್ಪು ನೀಡಿತು. ಈ ಮೂಲಕ, ವೈದ್ಯಕೀಯ ಸೇವೆಯನ್ನು ಗ್ರಾಹಕ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಿತು. ವೈದ್ಯರು ಅದನ್ನು ಒಪ್ಪಿಕೊಳ್ಳಬೇಕಾಯಿತು. ವಕೀಲರು ಸಹ ತಮ್ಮ ಸೇವೆಯನ್ನು ಗ್ರಾಹಕ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ಒಳಪಡಿಸುವುದನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಇತ್ತೀಚೆಗೆ ಡಿ.ಕೆ. ಗಾಂಧಿ ಮತ್ತು ಭಾರತೀಯ ವಕೀಲರ ಪರಿಷತ್ತು ಹಾಗೂ ಇತರರ ನಡುವಿನ ಪ್ರಕರಣದಲ್ಲಿ, ವಕೀಲರ ಸೇವೆಯು ಗ್ರಾಹಕ ಸಂರಕ್ಷಣಾ ಕಾಯ್ದೆಯಲ್ಲಿ ಬಳಸಿರುವಂತೆ 'ಸೇವೆ' ಆಗುವುದಿಲ್ಲ ಎಂಬ ತೀರ್ಪು ನೀಡಿದೆ. ಈ ಮೂಲಕ ವಕೀಲ ವೃತ್ತಿಯನ್ನು ಕಾಯ್ದೆಯಿಂದ ಹೊರಗಿಡಲಾಗಿದೆ. ಇದರಿಂದಾಗಿ ಗ್ರಾಹಕ ಸಂರಕ್ಷಣಾ ಕಾಯ್ದೆಗೆ ಪೆಟ್ಟು ಬಿದ್ದಂತಾಗಿದೆಯಲ್ಲವೇ ಎಂಬುದರ ಬಗ್ಗೆ ಚರ್ಚೆ ನಡೆದಿದೆ.

ಈ ಪ್ರಕರಣದಲ್ಲಿ, ಡಿ.ಕೆ.ಗಾಂಧಿ ಎಂಬುವರು ಒಂದು ವ್ಯಾಜ್ಯಕ್ಕೆ ಸಂಬಂಧಿಸಿದಂತೆ ವಕೀಲರೊಬ್ಬರನ್ನು ನೇಮಕ ಮಾಡಿಕೊಂಡಿದ್ದರು. ವಕೀಲರ ಸೇವೆಯಲ್ಲಿ ದೋಷವಿದೆ ಎಂಬ ಕಾರಣಕ್ಕೆ ಅವರು ವಕೀಲರ ವಿರುದ್ಧ ಜಿಲ್ಲಾ ಗ್ರಾಹಕ ವೇದಿಕೆಗೆ (ಈಗ ಆಯೋಗ) ದೂರು ಸಲ್ಲಿಸಿದ್ದರು. ವಕೀಲ ವೃತ್ತಿಯು ಗ್ರಾಹಕ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ ದೂರನ್ನು ತಿರಸ್ಕರಿಸಬೇಕೆಂದು ವಕೀಲರು ವಾದ ಮಾಡಿದರು. ಜಿಲ್ಲಾ ವೇದಿಕೆಯು ಅವರ ವಾದವನ್ನು ತಿರಸ್ಕರಿಸಿ, ಗ್ರಾಹಕರ ಪರ ತೀರ್ಪು ನೀಡಿತಾದರೂ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗವು ಆ ತೀರ್ಪನ್ನು ತಿರಸ್ಕರಿಸಿತು. ಆದರೆ ರಾಷ್ಟ್ರೀಯ ಆಯೋಗವು ಜಿಲ್ಲಾ ವೇದಿಕೆಯ ತೀರ್ಪನ್ನು ಪುರಸ್ಕರಿಸಿದ ಕಾರಣ, ವಕೀಲರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು.

ವಕೀಲ ವೃತ್ತಿಯು ಗ್ರಾಹಕ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದಿಲ್ಲ ಎಂಬುದನ್ನು ಸಮರ್ಥಿಸಿಕೊಳ್ಳಲು ವಕೀಲರು ಹದಿನೇಳು ಕಾರಣಗಳನ್ನು ನ್ಯಾಯಾಲಯದ ಮುಂದಿಟ್ಟರು. ವಕೀಲ ವೃತ್ತಿ ಒಂದು ಶ್ರೇಷ್ಠ ವೃತ್ತಿ, ಅದು ಸರಕು ವ್ಯಾಪಾರದಂತೆ ಅಲ್ಲ, ವಕೀಲ ವೃತ್ತಿಯನ್ನು ನಿಯಂತ್ರಿಸಲು ಪ್ರತ್ಯೇಕ ಕಾನೂನು ಇದ್ದು, ವಕೀಲರ ದುರ್ವರ್ತನೆಯ ವಿರುದ್ಧ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಕೀಲರ ಪರಿಷತ್ತುಗಳು ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿವೆ ಎಂಬಂತಹ ವಾದಗಳನ್ನು ಮಂಡಿಸಿದರು. ಅಲ್ಲದೆ, ವಕೀಲರ ಕಾಯ್ದೆ ಎಂಬ ವಿಶೇಷ ಕಾಯ್ದೆಗೆ ವಕೀಲರು ಒಳಪಟ್ಟಿದ್ದಾರೆ, ವಕೀಲರ ಸೇವೆಯನ್ನು ಗ್ರಾಹಕ ಸಂರಕ್ಷಣಾ ಕಾಯ್ದೆಗೆ ಒಳಪಡಿಸಿದರೆ ದೇಶದಾದ್ಯಂತ ವಕೀಲರ ವಿರುದ್ಧ ಅನಗತ್ಯವಾಗಿ ದೂರುಗಳು ದಾಖಲಾಗುವ ಸಂಭವವಿದೆ. ಹೀಗಾಗಿ, ವಕೀಲ ವೃತ್ತಿಯನ್ನು ಗ್ರಾಹಕ ಸಂರಕ್ಷಣಾ ಕಾಯ್ದೆಯಿಂದ ವಿಮುಕ್ತಗೊಳಿಸಬೇಕೆಂದು ವಕೀಲರು ಕೋರಿದರು.

ತನ್ನ ಐವತ್ತೈದು ಪುಟಗಳ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ವಕೀಲರ ಈ ವಾದಸರಣಿಯನ್ನು ಒಪ್ಪಿಕೊಂಡಿದೆ. ಈ ತೀರ್ಪಿನ ಪರಿಣಾಮವಾಗಿ, ವಕೀಲರ ಅಲಕ್ಷ್ಯ, ದುರ್ನಡತೆ, ಅನಗತ್ಯ ವಿಳಂಬದಂತಹ ದೋಷಗಳ ವಿರುದ್ಧ ಬಳಕೆದಾರರು ಗ್ರಾಹಕ ಆಯೋಗದಲ್ಲಿ ಪ್ರಶ್ನಿಸಲು ಆಗುವುದಿಲ್ಲ. ವಿವಿಧ ಸೇವೆ ಮತ್ತು ವೃತ್ತಿಗಳಿಗೆ ಪ್ರತ್ಯೇಕ ಕಾನೂನು ಇರುವುದು ನಿಜವಾದರೂ ಇತರ ಕಾಯ್ದೆಗಳ ಜೊತೆಗೆ ಅಥವಾ ಅದರ ಬದಲಾಗಿ ಗ್ರಾಹಕ ಸಂರಕ್ಷಣಾ ಕಾಯ್ದೆಯನ್ನು ಗ್ರಾಹಕರು ಬಳಸಿಕೊಳ್ಳಬಹುದು ಎಂದು ಈ ಕಾಯ್ದೆ ಹೇಳುತ್ತದೆ. ಈ ಅಂಶವನ್ನು ಸುಪ್ರೀಂ ಕೋರ್ಟ್ ಅನೇಕ ಪ್ರಕರಣಗಳಲ್ಲಿ ಉಲ್ಲೇಖಿಸಿ ಗ್ರಾಹಕರ ಪರವಾಗಿ ತೀರ್ಪು ನೀಡಿದ್ದೂ ಇದೆ. ವಕೀಲರ ವರ್ತನೆಯನ್ನು ನಿಯಂತ್ರಿಸುವಲ್ಲಿ ವಕೀಲರ ಕಾಯ್ದೆಯಾಗಲೀ ವಕೀಲರ ಪರಿಷತ್ತಾಗಲೀ ಎಷ್ಟು ಪರಿಣಾಮಕಾರಿಯಾಗಿವೆ ಎಂಬ ಪ್ರಶ್ನೆ ಇದೆ.

ಸರಕು ಮತ್ತು ಸೇವೆಗಳನ್ನು ಖರೀದಿಸುವ ಪ್ರಕ್ರಿಯೆಯಲ್ಲಿ ಗ್ರಾಹಕರಿಗೆ ಎದುರಾಗುವ ವಂಚನೆ, ಮೋಸ, ಅನುಚಿತ ವ್ಯಾಪಾರ ಪದ್ಧತಿಯಂತಹವನ್ನು ತಡೆಗಟ್ಟಿ, ನೊಂದ ಗ್ರಾಹಕರಿಗೆ ಸೂಕ್ತ ಪರಿಹಾರ ಒದಗಿಸಿಕೊಡುವುದು ಗ್ರಾಹಕ ಸಂರಕ್ಷಣಾ ಕಾಯ್ದೆಯ ಉದ್ದೇಶವಾಗಿದೆ. ಆ ಕಾಯ್ದೆಯಲ್ಲಿ ವೃತ್ತಿಪರರು ನೀಡುವ ಸೇವೆಯಲ್ಲಿ ಉಂಟಾಗುವ ದೋಷಕ್ಕೆ ಪರಿಹಾರ ನೀಡುವುದಕ್ಕೆ ಸಂಬಂಧಿಸಿದ ಪ್ರಸ್ತಾಪವಿಲ್ಲದ ಕಾರಣ, ಗ್ರಾಹಕ ಸಂರಕ್ಷಣಾ ಕಾಯ್ದೆಯನ್ನು ರಚಿಸಿದವರ ಮನಸ್ಸಿನಲ್ಲಿ ವೃತ್ತಿಪರರು ನೀಡುವ ಸೇವೆಯನ್ನು ಈ ಕಾಯ್ದೆಯಲ್ಲಿ ಸೇರಿಸುವ ಉದ್ದೇಶ ಇರಲಿಲ್ಲವೆಂದು ಕಂಡುಬರುತ್ತದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳಲು ನ್ಯಾಯಾಲಯವು ಗ್ರಾಹಕ ಸಂರಕ್ಷಣಾ ಕಾಯ್ದೆಯ ಚರಿತ್ರೆ ಮತ್ತು ಈ ಹಿಂದೆ ಈ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ನೀಡಿರುವ ಇತರ ತೀರ್ಪುಗಳನ್ನು ಉಲ್ಲೇಖಿಸಿದೆ. ಆದರೆ ವೈದ್ಯರು ಮತ್ತು ವಕೀಲರ ದುರ್ನಡತೆ, ಅಲಕ್ಷ್ಯದಂತಹ ಕಾರಣಗಳಿಗೆ ವೈದ್ಯಕೀಯ ಮಂಡಳಿ ಮತ್ತು ವಕೀಲರ ಪರಿಷತ್ತಿನಲ್ಲಿ ದೂರು ಸಲ್ಲಿಸಲು ಅವಕಾಶವಿದೆ ಎಂದು ನ್ಯಾಯಾಲಯ ಹೇಳಿದೆ.

ವಿ.ಪಿ.ಶಾಂತಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ವೈದ್ಯಕೀಯ ಸೇವೆಯನ್ನು ಗ್ರಾಹಕ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಿದ್ದನ್ನು ನ್ಯಾಯಾಲಯ ಒಪ್ಪಿಕೊಂಡಿದ್ದರೂ ವೈದ್ಯಕೀಯ ವೃತ್ತಿ ಮತ್ತು ವಕೀಲ ವೃತ್ತಿ ವಿಭಿನ್ನ ಎಂದು ಅಭಿಪ್ರಾಯಪಟ್ಟಿದೆ. ವಕೀಲ ವೃತ್ತಿ ವಾಣಿಜ್ಯ ಅಥವಾ ವ್ಯಾಪಾರವಲ್ಲವೆಂದೂ ಅದೊಂದು 'ನೋಬಲ್' (ಉದಾತ್ತ) ಸೇವೆ ಎಂದೂ ನ್ಯಾಯಾಲಯ ಹೇಳಿದೆ. ಜನರಿಗೆ ನ್ಯಾಯದಾನ ಮಾಡುವಲ್ಲಿ ವಕೀಲರ ಪಾತ್ರ, ಅವರ ಕರ್ತವ್ಯದಂತಹ ಕಾರಣಗಳಿಂದ ವಕೀಲ ವೃತ್ತಿಯನ್ನು ಇತರ ವೃತ್ತಿಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯ.

ಗ್ರಾಹಕ ಸಂರಕ್ಷಣಾ ಕಾಯ್ದೆಯಲ್ಲಿ 'ಸೇವೆ' ಎಂಬ ಪದವನ್ನು ವಿವರಿಸುವಾಗ ವೈಯಕ್ತಿಕ ಸೇವೆಗೆ (ಕಾಂಟ್ರ್ಯಾಕ್ಟ್ ಆಫ್ ಪರ್ಸನಲ್ ಸರ್ವಿಸ್) ವಿನಾಯಿತಿ ನೀಡಲಾಗಿದೆ. ವಕೀಲರು ಬಳಕೆದಾರರಿಗೆ (ಕಕ್ಷಿದಾರರಿಗೆ) ನೀಡುವ ಸೇವೆಯ ಸ್ವರೂಪವನ್ನು ನ್ಯಾಯಾಲಯ ಪಟ್ಟಿ ಮಾಡಿದೆ. ಉದಾಹರಣೆಗೆ, ಬಳಕೆದಾರರ ವಿಷಯದಲ್ಲಿ ವಕೀಲರು ತಮಗಿಷ್ಟ ಬಂದಂತೆ ನಡೆದುಕೊಳ್ಳಲು ಸಾಧ್ಯವಿಲ್ಲ. ವಕೀಲರು ತಮ್ಮ ಬಳಕೆದಾರರ ಅಭಿಪ್ರಾಯಗಳಿಗೆ ಮನ್ನಣೆ ನೀಡಬೇಕಾಗುತ್ತದೆ, ಬಳಕೆದಾರರ ಅನುಮತಿ ಇಲ್ಲದೆ ವಕೀಲರು ನ್ಯಾಯಾಲಯಕ್ಕೆ ಯಾವುದೇ ವಾಗ್ದಾನ ನೀಡಲು ಸಾಧ್ಯವಿಲ್ಲ...

ಈ ಕಾರಣಗಳಿಂದ, ವಕೀಲರನ್ನು ನೇಮಕ ಮಾಡಿಕೊಳ್ಳುವ ಬಳಕೆದಾರನು ವಕೀಲರ ಮೇಲೆ ಬಹಳಷ್ಟು ನಿಯಂತ್ರಣ ಹೊಂದಿರುವುದರಿಂದ, ವಕೀಲರ ಸೇವೆಯು ವೈಯಕ್ತಿಕ ಸೇವೆ ಆಗುತ್ತದೆ. ಆದ್ದರಿಂದ ವಕೀಲರ ಸೇವೆಯು ಗ್ರಾಹಕ ಸಂರಕ್ಷಣಾ ಕಾಯ್ದೆಗೆ ಒಳಪಡುವುದಿಲ್ಲ ಎಂದು ತೀರ್ಮಾನಿಸಿದೆ. ಆದಕಾರಣ ವಕೀಲರು ನೀಡುವ ಸೇವೆಯಲ್ಲಿ ದೋಷವಿದೆ ಎಂಬ ಕಾರಣಕ್ಕೆ, ವಕೀಲರನ್ನು ನೇಮಕ ಮಾಡಿಕೊಂಡವರು ಗ್ರಾಹಕ ಆಯೋಗದಲ್ಲಿ ದೂರು ಸಲ್ಲಿಸಲು ಅವಕಾಶ ಇಲ್ಲ ಎಂದು ನ್ಯಾಯಾಲಯ ಹೇಳಿದೆ.

ಈ ತೀರ್ಪಿನ ಆಘಾತಕಾರಿ ಅಂಶವೆಂದರೆ, ವಿ.ಪಿ. ಶಾಂತಾ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಮತ್ತೊಮ್ಮೆ ಪರಿಶೀಲಿಸುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಸೂಚಿಸಿರುವುದು. ಇದಕ್ಕಾಗಿ ಮುಖ್ಯ ನ್ಯಾಯಮೂರ್ತಿಯವರು ಪ್ರತ್ಯೇಕ ಪೀಠವನ್ನು ರಚಿಸಬೇಕೆಂದು ಅದು ಹೇಳಿದೆ. ಹೀಗೆ ಎಲ್ಲ ವೃತ್ತಿಯವರಿಗೆ ಗ್ರಾಹಕ ಸಂರಕ್ಷಣಾ ಕಾಯ್ದೆಯಿಂದ ವಿನಾಯಿತಿ ನೀಡುತ್ತಾ ಹೋದರೆ, ಮುಂದಿನ ದಿನಗಳಲ್ಲಿ ವ್ಯಾಪಾರಸ್ಥರು, ಉತ್ಪಾದಕರು ಮತ್ತು ವಿತರಕರೆಲ್ಲರೂ ತಮಗೂ ಇಂತಹ ವಿನಾಯಿತಿ ನೀಡುವಂತೆ ಒತ್ತಡ ತರಬಹುದು.



ಚುರುಮುರಿ



ಮೀನುಹುಳಿ

• ಲಿಂಗರಾಜು ಡಿ.ಎಸ್.

'ಇವೆಲ್ಲ ನೋಡಿರೆ ಬಲು ಸಂಕಟಾಯ್ತದೆ ಕನವ್ವ' ಅಂದಳು ಅಕ್ಕಯ್ಯ.

'ಅದ್ಯಾಕೆ ನನ ತಾಯಿ, ನೀನ್ಯಾಕವ್ವ ಅಲ್ಲಿಗೋಗಿದ್ದೆ? ಬುಟ್ರಾ ನಿನ್ನ?' ಕೇಳಿದಳು ಚಿಗವ್ವ.

'ಚಿಗವ್ವ ನೀನು ತಪ್ಪು ತಿಳಕಬ್ಯಾಡ. ನಾನೇನಾದ್ರೂ ಅತ್ತಗೋಗಿದ್ರೆ ನನ್ನ ತಿಂದು ಮುಗಿಸಿಬಿಡೋರು' ಅಕ್ಕಯ್ಯ ವಿವರಣೆ ಕೊಟ್ಟಳು.

'ನಾನೂ ಅದ್ನೇ ಕನೆ ಅಂದುದ್ದು. ಈಗ ಅದೇ ಸುದ್ದಿಯಾಗ್ಯದೆ. ಸನ್ನುಗಳು ಹೆಣ್ಮಕ್ಕಳ ಕೊಲ್ಲತಾವ್ರಂತೆ. ಉಸಾರು' ಚಿಗವ್ವ ಬುದ್ಧಿಮಾತು ಹೇಳಿದಳು.

'ಚಿಗವ್ವ ನಾನು ಹೇಳ್ತಿರದು ಬಿಸಿಲಿನ ಸನ್ ಸ್ಟ್ರೋಕ್ ಬಗ್ಗೆ ಕನೆ. ನಮ್ಮ ಕತೆ ನೋಡು, ಕೊಳಕು ನೀರು ಕುಡಿದು ಕಣ್ಣು ಮೆಡ್ಡರಿಸ್ಕ್ಯಂದು ವಯಕ್ ಅಂತಿದ್ದೀವಿ. ಈಗ ವೈನಾಗಿ ಮಳೆ ಹೂದು ತಂಪಾಗ್ಯದೆ ಅನ್ಕಂದರೆ ಕೊಳೆ-ಪಳೆ ಕೊಚ್ಚಿಕ್ಯಂದು ಕೆರೆ ನೀರಿಗೆ ಸೇರಿ ಉಸಿರು ಹಿಡಿತಾದೆ ಕನ ನನ ತಾಯಿ' ಅಕ್ಕಯ್ಯ ಬೇಸರಿಸಿಕೊಂಡಳು.

'ನಮಗೆ ವಿಷದ ನೀರು, ಅಲ್ಲಿ ನಶೆ, ಬೀರು. ರಾಜಕೀಯದವು ಮೇಲ್ಮನೆ ಟಿಕೆಟ್ ತಕ್ಕೋಕೆ ಬಕ್ಕಬಾರಲು ಬೀಳ್ತಾವಂತೆ' ಚಿಕ್ಕಮೀನಮ್ಮ ಬೆರಗಾದಳು.

'ಇದೇ ಕನೆ ರಾಜಕೀಯ ಅಂದ್ರೆ. ರೋಡು ರಿಪೇರಿಯಾಗದೇ ಗುಂಡಿ ಬಿದ್ದವಂತೆ, ನಲ್ಲೀಲಿ ನೀರು ಬತ್ತಿಲ್ಲವಂತೆ. ಜನ ಯವಸಾಯನೇ ಮರೆತುಬುಟ್ಟವ್ರೆ' ಚಿಗವ್ವನಿಗೂ ಬೇಸರಾಯ್ತು.

'ಹೂ ಕಾ ಚಿಗವ್ವ, ಇಸದ ನೀರು ಕುಡಿದು ಸಾವಿರಗಟ್ಲೆ ಮೀನಮ್ಮದೀರು ನಮ್ಮ ಕೆರೇಲೇ ಸಾಯ್ತಾವ್ರೆ. ನಾವು ಸತ್ರೂ ಮಾರನೇಗೆ ಪೇಪರಲ್ಲಿ ಸುದ್ದಿಯಾತದೆ 'ಕೊಳಕು ನೀರಿನಿಂದ ಸಾವಿರಾರು ಮೀನುಗಳ ಮಾರಣಹೋಮ' ಅಂತ, ಅಟೇಯ. ನಮ್ಮದೂ ಒಂದು ಬಾಳೇವು ನೋಡವ್ವ. ಕೆರೆ ಉಳಿಸಿಗ್ಯಲೋ ಬುದ್ಧಿ ಈ ನರಮನುಸರಿಗೆ ಬರ್ನೇ ಇಲ್ಲವಲ್ಲ ತಾಯಿ' ಅಂದಳು ಮೀನಕ್ಕಯ್ಯ.

'ಅಕ್ಕಯ್ಯ ಮೀನು ದೊಡವ್ವ, ಮೀನು ಚಿಗಪ್ಪ, ಮೀನು ಅಪಪ್ಪ ಉಸಿರು ಮ್ಯಾಕ್ಕೆ ಕೆಳಿಕ್ಕೆ ಮಾಡ್ತಾವ್ರೆ! ಬಲ್ರಿ!' ಅಂದು ಓಡಿದಳು ಮೀನು ತಂಗ್ಯವ್ವ.

ಸಂಗತ

ಮುಟ್ಟಿನ ನಿರ್ವಹಣೆ: ದಾಟೋಣ ಮಿಥ್ಯೆ

ಆರ್ಥಿಕ ನಷ್ಟವಿಲ್ಲದಂತೆ, ಆರೋಗ್ಯಕ್ಕೆ ಹಾನಿಯಾಗದಂತೆ ಮುಟ್ಟಿನ ಅವಧಿಯನ್ನು ನಿರ್ವಹಿಸಬೇಕಾಗಿದೆ

• ಡಾ. ವೀಣಾ ಎಸ್. ಭಟ್

ಜೀವಸೃಷ್ಟಿಯ ಮೂಲಕ್ರಿಯೆಯಾದ ಮುಟ್ಟು, ಸೃಷ್ಟಿಯ ಅತಿಶ್ರೇಷ್ಠವಾದ ಹಾಗೂ ಜೀವಜಗತ್ತನ್ನು ಮುಂದುವರಿಸಲು ಅತ್ಯಗತ್ಯವಾದ ಕ್ರಿಯೆ. ಆದರೆ ಇಂದಿನ ಆಧುನಿಕ ಯುಗದಲ್ಲೂ ಮುಟ್ಟಿನ ವೈಜ್ಞಾನಿಕ ಪ್ರಕ್ರಿಯೆಯ ಬಗ್ಗೆ ಅರಿಯದೆ, ಅದನ್ನು ಒಂದು ಅಶುದ್ಧ ಕ್ರಿಯೆ, ಅನಿಷ್ಟ ಎಂದೆಲ್ಲ ಪರಿಗಣಿಸುವವರೇ ಹೆಚ್ಚು.

ಈ ದಿಸೆಯಲ್ಲಿ ವ್ಯಾಪಕ ಅರಿವು ಮೂಡಿಸಲು 2014ರಿಂದ ಪ್ರತಿವರ್ಷ ಮೇ 28ರಂದು ಮುಟ್ಟಿನ ನೈರ್ಮಲ್ಯ ದಿನ ಆಚರಿಸುತ್ತಾ ಬರಲಾಗಿದೆ. 'ಎಲ್ಲರೂ ಒಟ್ಟಾಗಿ ವಿಶ್ವದಲ್ಲಿ ಮುಟ್ಟಿನ ಬಗ್ಗೆ ಸ್ನೇಹಪರ ವಾತಾವರಣವನ್ನು ದೊರಕಿಸೋಣ' ಎಂಬ ಈ ಬಾರಿಯ ಘೋಷವಾಕ್ಯವು ಮಹಿಳೆಯರ ಸಮಗ್ರ ಆರೋಗ್ಯ ಕಾಪಾಡುವ ಆಶಯಕ್ಕೆ ಪೂರಕವಾಗಿದೆ.

ಮುಟ್ಟಿನ ಸಮಯದಲ್ಲಿ ಬಳಸುವ ಉತ್ಪನ್ನಗಳು, ಅವುಗಳಿಂದ ಮಹಿಳೆಯರ ಆರೋಗ್ಯ ಹಾಗೂ ಪರಿಸರಕ್ಕೆ ಆಗುತ್ತಿರುವ ಹಾನಿ, ಮುಟ್ಟಿನ ಕಾರಣದಿಂದ ಶೈಕ್ಷಣಿಕ, ಔದ್ಯೋಗಿಕ ಕ್ಷೇತ್ರದಲ್ಲಿ ಆರ್ಥಿಕತೆಗೆ ಆಗುತ್ತಿರುವ ನಷ್ಟದಂತಹ ಸಂಗತಿಗಳ ಬಗ್ಗೆ ಅರಿವು ಮೂಡಿಸಲು ಇದೊಂದು ಸುಸಂದರ್ಭ.

ಮುಟ್ಟಿನ ಬಗ್ಗೆ ಜನಸಾಮಾನ್ಯರಲ್ಲಿ ಹಲವಾರು ಮಿಥ್ಯೆಗಳಿವೆ. ಮಡಿ-ಮೈಲಿಗೆಯ ಕಾರಣಕ್ಕೆ, ನಿಯಮಿತ ಅವಧಿಗಿಂತ ಮೊದಲು ಅಥವಾ ನಂತರ ಮುಟ್ಟಾಗಲು ಅನುವಾಗುವಂತಹ ಮಾತ್ರೆಗಳನ್ನು ಸೇವಿಸುವ ಪರಿಪಾಟವೂ ನಿಂತಿಲ್ಲ. ಸುಸ್ಥಿರ ಮುಟ್ಟಿನ ನಿರ್ವಹಣೆಗೆ ನಾವೆಷ್ಟು ಸಿದ್ಧರಾಗಿದ್ದೇವೆ? ಎಲ್ಲಕ್ಕಿಂತ ಹೆಚ್ಚಾಗಿ, ಮುಟ್ಟಿನ ಸಮಯದಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳುವುದಕ್ಕೆ ಎಷ್ಟು ಆದ್ಯತೆ ನೀಡುತ್ತಿದ್ದೇವೆ? ಆ ಪ್ರಯತ್ನ ಆಶಾದಾಯಕವಾಗಿ ಇದೆಯೇ? ಉತ್ತರ 'ಇಲ್ಲ' ಎಂದೇ ಹೇಳಬಹುದು. 'ಹೌದು' ಎಂದಾಗಿದ್ದರೆ, ಏಕಬಳಕೆಯ ಪ್ಲಾಸ್ಟಿಕ್‌ಮಿಶ್ರಿತ ಸ್ಯಾನಿಟರಿ ನ್ಯಾಪ್ಕಿನ್ ತಯಾರಿಕೆಯು ವಾರ್ಷಿಕವಾಗಿ ₹ 17,000 ಕೋಟಿಯಷ್ಟು ಬೃಹತ್ ಉದ್ದಿಮೆಯಾಗಿ ಬೆಳೆಯುತ್ತಿರಲಿಲ್ಲ.

ಈ ಮೊದಲು ಮುಟ್ಟಿನ ಸ್ರಾವ ನಿರ್ವಹಣೆಗೆ ಹಳೆ ಬಟ್ಟೆಯನ್ನು ಬಳಸುತ್ತಾ ಬೇಸತ್ತಿದ್ದ ಮಹಿಳೆಯರಿಗೆ, ಸ್ಯಾನಿಟರಿ ನ್ಯಾಪ್ಕಿನ್ ಬಳಕೆ ಆರಂಭವಾದದ್ದು ಸ್ವರ್ಗವೇ ಧರೆಗಿಳಿದು ಬಂದ ಹಾಗಾಗಿತ್ತು. ಇದರಿಂದ ಅವರು ತಮ್ಮ ಕೆಲಸದಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಅನುಕೂಲವಾಗಿ, ಅವರಲ್ಲಿ ಆತ್ಮವಿಶ್ವಾಸ ಮೂಡತೊಡಗಿತು. ಆದರೆ ದಿನಗಳೆದಂತೆ ನ್ಯಾಪ್ಕಿನ್ ಬಳಕೆಯ ದುಷ್ಪರಿಣಾಮಗಳ ಅರಿವಾಗತೊಡಗಿತು. ನ್ಯಾಪ್ಕಿನ್‌ನಲ್ಲಿ ಬಳಸುವ ಕಚ್ಚಾವಸ್ತುಗಳಾದ ಪೆಟ್ರೋಲಿಯಂ, ಸ್ರಾವ ಹೀರುವಿಕೆಗೆ ಬಳಸುವ ಪಾಲಿಕ್ರಿಲೇಟ್ ಜೆಲ್, ಕಲೆ ಕಾಣದಂತೆ ಮಾಡುವ ಪಾಲಿಥೀನ್, ಪರಿಮಳಕಾರಕವಾಗಿ ಬಳಸುವ ರಾಸಾಯನಿಕಗಳಿಂದ ಅಲರ್ಜಿ, ಸೋಂಕು, ಹಾರ್ಮೋನು ಏರುಪೇರು, ಗರ್ಭಗೊರಳಿನ ಕ್ಯಾನ್ಸರ್ ಸಾಧ್ಯತೆಯಂತಹ ಅಪಾಯಗಳ ಅರಿವಾಗತೊಡಗಿತು. ಅಷ್ಟಾದರೂ ಒಂದೆಡೆ ಬಟ್ಟೆಯ ಬಗ್ಗೆ ಅಪಪ್ರಚಾರ, ಇನ್ನೊಂದೆಡೆ ಪ್ಯಾಡ್ ಬಳಕೆಯ ಬಗ್ಗೆ ವ್ಯಾಪಕ ಪ್ರಚಾರ ಹೆಚ್ಚುತ್ತಾ ಹೋಯಿತು.

ಏಕಬಳಕೆಯ ಒಂದು ಪ್ಯಾಡ್ ನಾಲ್ಕು ಪ್ಲಾಸ್ಟಿಕ್ ಬ್ಯಾಗ್‌ಗಳು ಉಂಟುಮಾಡುವ ತ್ಯಾಜ್ಯಕ್ಕೆ ಸಮ. ಈ ಮೊದಲೇ ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿಯ ದೊಡ್ಡ ಸಂಕಷ್ಟ ಭೂತಾಕಾರವಾಗಿ ನಿಂತಿರುವಾಗ, ನೂರಾರು ವರ್ಷವಾದರೂ ಮಣ್ಣಲ್ಲಿ ಮಣ್ಣಾಗದ, ಜೈವಿಕವಾಗಿ ವಿಭಜಿಸಲ್ಪಡದ ಈ ಏಕಬಳಕೆಯ ಪ್ಯಾಡ್ ವಿಲೇವಾರಿ ಅತಿದೊಡ್ಡ ಸಮಸ್ಯೆಯಾಗಿದೆ. ಮನೆ, ಶಾಲೆಗಳ ಶೌಚಾಲಯದ ಮೂಲಕ ಒಳಚರಂಡಿಯನ್ನು ಸೇರಿ ಅದು ಕಟ್ಟಿಕೊಳ್ಳಲು ಕಾರಣವಾಗುತ್ತಿದೆ. ಬಳಸಿ ಬಿಸಾಡಿದ್ದು ನಾಯಿ, ಹಂದಿ, ಹಸುಗಳ ಎಳೆದಾಟಕ್ಕೂ ಪೌರಕಾರ್ಮಿಕರ ಸೆಣಸಾಟಕ್ಕೂ ಕಾರಣವಾಗಿ ಕೋಟ್ಯಂತರ ಟನ್‌ಗಟ್ಟಲೆ ತ್ಯಾಜ್ಯವು ಭೂಮಿಗಷ್ಟೇ ಅಲ್ಲ ಪ್ರಾಣಿ-ಪಕ್ಷಿ, ಜಲಚರಗಳ ದೇಹವನ್ನೂ ಸೇರಿ, ಅವುಗಳನ್ನು ಸಂಕಷ್ಟಕ್ಕೆ ಈಡುಮಾಡುತ್ತಿದೆ.

ಪ್ಯಾಡ್ ಸುಟ್ಟರೆ ಬರುವ ಡಯಾಕ್ಸಿನ್ ಎಂಬ ವಿಷ ಅನಿಲವು ಕ್ಯಾನ್ಸರ್‌ಕಾರಕ. ಪ್ಯಾಡ್‌ಗೆ ತಿಂಗಳಿಗೆ ನೂರಾರು ರೂಪಾಯಿ ಖರ್ಚು. ಆರೋಗ್ಯಕ್ಕೂ ಆರ್ಥಿಕತೆಗೂ ಪರಿಸರಕ್ಕೂ ಸಂಕಷ್ಟ ಒಡ್ಡಿ, ಸಾರ್ವಜನಿಕ ಆರೋಗ್ಯಕ್ಕೆ ಧಕ್ಕೆ ಉಂಟು ಮಾಡುವುದು ಪ್ರಜ್ಞಾವಂತರಲ್ಲಿ ಜಾಗ್ರತೆಯ ಕಿಡಿ ಹೊತ್ತಿಸಿತು. ಇದರ ಪರಿಣಾಮವಾಗಿ ಜಾರಿಗೆ ಬಂದದ್ದು ಮರುಬಳಕೆಯ ಕಾಟನ್‌ಪ್ಯಾಡ್ ಹಾಗೂ ಮೆನ್‌ಸ್ಟ್ರುಯಲ್ ಕಪ್ ಬಳಕೆಯ ಬೆಳಕಿನ ದಾರಿ. ಆದರೆ ಇವುಗಳ ಬಳಕೆ ಮತ್ತು ಪ್ರಚಾರ ಇನ್ನಷ್ಟೇ ವ್ಯಾಪಕಗೊಳ್ಳಬೇಕಿದೆ.



ಈ ಮಧ್ಯೆ ಬಯೊಡೀಗ್ರೇಡಬಲ್ ಪ್ಯಾಡ್‌ಗಳ ಬಗ್ಗೆ ಅಲ್ಲಲ್ಲಿ ಪ್ರಚಾರ, ಉತ್ತೇಜನ ದೊರೆಯುತ್ತಿದೆಯಾದರೂ ಅವುಗಳ ನೈಜತೆಯ ಬಗ್ಗೆ ಸಂಶೋಧನೆ ಆಗಬೇಕಿದೆ. ಒಳಉಡುಪಿಗೆ ಅಂಟಿಸಬಲ್ಲ ಮರುಬಳಕೆಯ ಕಾಟನ್‌ಪ್ಯಾಡ್‌ಗೆ ದರವೂ ಕಡಿಮೆ, ಜೊತೆಗೆ ಸ್ಥಳೀಯವಾಗಿ ತಯಾರಿಸಲು ಸಾಧ್ಯ. ತ್ಯಾಜ್ಯವೂ ಇಲ್ಲ, ಶೌಚಾಲಯ, ಚರಂಡಿ ಕಟ್ಟುವಿಕೆಯೂ ಇಲ್ಲ. ತಣ್ಣೀರಿನಲ್ಲಿ ಸ್ವಚ್ಛವಾಗಿ ತೊಳೆದು, ಬಿಸಿಲಿನಲ್ಲಿ ಒಣಗಿಸಿ ಸೂಕ್ತವಾಗಿ ಮರುಬಳಕೆ ಮಾಡಬಹುದು.

ಇವೆಲ್ಲಕ್ಕಿಂತ ಹೆಚ್ಚಾಗಿ, ಮುಟ್ಟಿನ ಸುಸ್ಥಿರ ನಿರ್ವಹಣೆಗೆ ಮೆನ್‌ಸ್ಟ್ರುಯಲ್ ಕಪ್ (ಮುಟ್ಟಿನ ಬಟ್ಟಲು) ಅತ್ಯುತ್ತಮ ಸಾಧನವಾಗಿ ಒದಗಿಬಂದಿದೆ. ವೈದ್ಯಕೀಯ ದರ್ಜೆಯ ಸಿಲಿಕಾನ್‌ನಿಂದ ತಯಾರಿಸಿರುವ ಇದು ಮೆತ್ತಗಿದ್ದು ಮಣ್ಣಿನಲ್ಲಿ ಕರಗುವಂತಹದ್ದು. ಇದಕ್ಕಾಗಿ ತಿಂಗಳಿಗೆ ಖರ್ಚಾಗುವುದು ಬರೀ ₹ 5. ಆರಂಭದ ಹಿಂಜರಿಕೆಯನ್ನು ಮೆಟ್ಟಿದರೆ ಆತ್ಮವಿಶ್ವಾಸದಿಂದ ಮುಟ್ಟಿನ ನಿರ್ವಹಣೆಯನ್ನು ಮಾಡಬಹುದು. ವೈದ್ಯರು, ಆರೋಗ್ಯ ಕಾರ್ಯಕರ್ತೆಯರು ಎಲ್ಲರೂ ಸ್ವತಃ ಬಳಸಿ, ಉಳಿದವರಿಗೂ ಈ ಬಗ್ಗೆ ಅರಿವು ಮೂಡಿಸುತ್ತಾ ಹೋದರೆ ಆರ್ಥಿಕ ನಷ್ಟವಿಲ್ಲದೆ, ಆರೋಗ್ಯಕ್ಕೆ ಹಾನಿಯಿಲ್ಲದೆ ಪರಿಸರವನ್ನೂ ಕಾಪಾಡುತ್ತ ಮುಟ್ಟಿನ ಸುಸ್ಥಿರ ನಿರ್ವಹಣೆಗೆ ನಾಂದಿ ಹಾಡಲು ನೆರವಾಗಬಲ್ಲದು.

ಲೇಖಕಿ: ಸ್ತ್ರೀರೋಗ ತಜ್ಞೆ, ಭದ್ರಾವತಿ

ವಾಚಕರ ವಾಣಿ

ಸಂತ್ರಸ್ತೆಯರ ಮನವ ಅರಿತವರಿಲ್ಲ...

ಹಾಸನ ಪ್ರಕರಣದ ಸಂತ್ರಸ್ತೆಯರ ವಿಚಾರಕ್ಕೆ, ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಬರುವ ಈ ಪ್ರಸಂಗ ಸೂಕ್ತವಾಗಿ ಒಪ್ಪುತ್ತದೆ. ಅದೆಷ್ಟೋ ಹೆಣ್ಣುಗಳನ್ನು ಒಲಿಸಿಕೊಂಡಿದ್ದ ರಾವಣನಿಗೆ, 'ಹೆಣ್ಣುಗಳು ನನಗಾಗಿ ಒಲಿದಿದ್ದಾರೆ, ಅದರಲ್ಲೂ ಧಾನ್ಯಮಾಲಿನಿಯಂಥ ಮಹಿಳೆಯನ್ನು ಒಲಿಸಿಕೊಂಡಿದ್ದೇನೆ' ಎನ್ನುವ ಅಹಂಕಾರ ಇರುತ್ತದೆ. ಧಾನ್ಯಮಾಲಿನಿ ತನ್ನ ಪತಿಯನ್ನು ತೊರೆದು ಈಗ ರಾವಣನೊಂದಿಗೆ ಜೀವಿಸುತ್ತಿದ್ದಾಳೆ. ಅವಳೊಂದಿಗೆ ಅವನ ಮಗ ಅತಿಕಾಯನೂ ಇದ್ದಾನೆ. ಮುಂದೆ, ಸೀತಾಪಹರಣದ ಕಾರಣವಾಗಿ ಯುದ್ಧ ನಡೆಯುತ್ತದೆ. ಸಹಜವೆಂಬಂತೆ ಅತಿಕಾಯನೂ ರಾವಣನ ಪರವಾಗಿ ಯುದ್ಧಕ್ಕೆ ಹೊರಡುತ್ತಾನೆ. ಯುದ್ಧದಲ್ಲಿ ಮರಣವನ್ನಪ್ಪುತ್ತಾನೆ. ಮಗನನ್ನು ಕಳೆದುಕೊಂಡ ಧಾನ್ಯಮಾಲಿನಿಯ ದುಃಖ ಹೇಳತೀರದು. ಅವಳನ್ನು ಸಮಾಧಾನ ಮಾಡುವುದಕ್ಕಾಗಿ ರಾವಣ ಬರುತ್ತಾನೆ. ಧಾನ್ಯಮಾಲಿನಿ ಅರೆ ಪ್ರಜ್ಞಾವಸ್ಥೆಯಲ್ಲಿ ಏನೇನೋ ಕನವರಿಸುತ್ತಿದ್ದಾಳೆ. ತನ್ನ ಮಗನಿಗಾಗಿ ಬದುಕಿದ್ದ ಅವಳ ಬಾಯಲ್ಲಿ ಇಂದು ಸತ್ಯ ಹೊರಹೊಮ್ಮುತ್ತಿದೆ. ಬಿಟ್ಟು ಬಂದ ತನ್ನ ಗಂಡನನ್ನು ನೆನೆದು ಕನವರಿಸುತ್ತಿದ್ದಾಳೆ: 'ಮೈಯ್ಯನಲ್ಲದೆ ಮನವನಿತ್ತೆನೇ ನಾನು ರಕ್ಕಸಗೆ!'

ಅದೆಷ್ಟೋ ವರ್ಷಗಳಿಂದ ಸಮಾಜವು ಧಾನ್ಯಮಾಲಿನಿಯನ್ನು ನೋಡಿದ ರೀತಿಯೇ ಬೇರೆ. ಆದರೆ ನಿಜವಾದ ಕಹಿಸತ್ಯ ಅವಳಿಗಷ್ಟೇ ಗೊತ್ತಿತ್ತು. ರಾವಣನ ಭಯಕ್ಕೆ ಅವಳು ತನ್ನ ಮೈಯ್ಯನ್ನು ಅವನಿಗೆ ತೆತ್ತುಕೊಂಡಿದ್ದಳೇ ವಿನಾ ಅವಳ ಮನಸ್ಸನ್ನಲ್ಲ. ಅವಳ ಮನಸ್ಸು ಅವಳ ಪತಿಯನ್ನೇ ಪ್ರತಿಕ್ಷಣವೂ ನೆನೆಯುತ್ತಿತ್ತು ಎಂಬುದು ಈ ಸಂದರ್ಭದಲ್ಲಿ ಖಚಿತವಾಗುತ್ತದೆ. ಹಾಗೇ ನಾವು ಕಾಣುವುದೆಲ್ಲ ಸತ್ಯವಾಗಿರುವುದಿಲ್ಲ. ಹಾಸನದ ಸಂತ್ರಸ್ತೆಯರ ಕುಟುಂಬಗಳು ಸಂತ್ರಸ್ತೆಯರ ಕಹಿ ಅನುಭವವನ್ನು, ನೋವನ್ನು ಅರ್ಥ ಮಾಡಿಕೊಳ್ಳಲಿ. ಆ ಎಲ್ಲ ಕುಟುಂಬಗಳು ಮತ್ತೆ ಎಂದಿನಂತೆ ನೆಮ್ಮದಿಯಾಗಿರಲಿ ಎಂಬುದು ನಮ್ಮೆಲ್ಲರ ಕಳಕಳಿ.

ಶ್ಯಾಮಲಾ ಪ್ರಕಾಶ್, ಮುಂಬೈ

'ಏಕಲವ್ಯ'ರಿಗೆ ಸಿಗಲಿ ತರಬೇತಿ

'ಕುರಿಗಾಹಿಗಳ ಜಗತ್ತಿನಲ್ಲಿ' ಲೇಖನ (ಪ್ರ.ವಾ., ಮೇ 26) ಕುರಿಗಾಹಿಗಳಿಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿ ನೀಡಿತು. ತಮ್ಮ ಅನಾರೋಗ್ಯಕ್ಕೆ ಅಗತ್ಯವಾದ ಔಷಧಿ ಮಾತ್ರವಲ್ಲದೆ ತಾವು ಸಾಕುವ ಕುರಿಗಳಿಗೆ ಬೇಕಾದ ಔಷಧಿಗಳನ್ನೂ ಅವರು ಜೊತೆಯಲ್ಲಿ ಇಟ್ಟುಕೊಳ್ಳುವುದು ಗಮನಾರ್ಹ. ಅವರೇನು 'ಪ್ರ್ಯಾಕ್ಟೀಸು' ಮಾಡುವ 'ಗಾವಂಟಿ' ಪಶುವೈದ್ಯರಲ್ಲ. ಅಲೆಮಾರಿಯಾಗಿ ಊರಿನಿಂದ ದೂರ ವಾಸ್ತವ್ಯ ಹೂಡಿದಾಗ ತಮ್ಮ ಕುರಿ, ಆಡುಗಳಿಗೆ ಬರುವ ಸಣ್ಣಪುಟ್ಟ ರೋಗ ರುಜಿನಾದಿಗಳಿಗೆ ತಾವೇ ಚಿಕಿತ್ಸೆ ಕೊಟ್ಟುಕೊಳ್ಳುತ್ತಾರೆ. ಇದು ಅವರಿಗೆ ಅನಿವಾರ್ಯವಾಗಿದೆ. ಸಕಾಲಕ್ಕೆ ಪಶುವೈದ್ಯಕೀಯ ಸೇವೆಯ ಲಭ್ಯತೆ ಇಲ್ಲದಿರುವುದು, ಆಸ್ಪತ್ರೆಗಳಿಗೆ ಹೋಗಲಾಗದ ಅಸಹಾಯಕತೆಯಂತಹ ಕಾರಣಗಳು ಅವರನ್ನು 'ಏಕಲವ್ಯ'ರನ್ನಾಗಿಸಿ, ತಮ್ಮ ಕುರಿಗಳಿಗೆ ತಾವೇ ವೈದ್ಯರಾಗುವಂತೆ ಮಾಡಿವೆ.

ಸೂಕ್ತ ಚಿಕಿತ್ಸಾ ಕ್ರಮ ಮತ್ತು ಔಷಧಿ ಬಳಕೆ ಸರಿಯಾಗಿ ಗೊತ್ತಿಲ್ಲದಿರುವಾಗ ವೃಥಾ ತೊಂದರೆಗೀಡಾಗುವ ಸಾಧ್ಯತೆ ಇರುತ್ತದೆ. ಪಶುಸಂಗೋಪನಾ ಇಲಾಖೆಯಿಂದ ಅನೇಕ ಸೌಲಭ್ಯಗಳಿವೆ ನಿಜ. ಆದರೆ ಅನಾರೋಗ್ಯಕ್ಕೆ ಈಡಾಗುವ ಕುರಿಗಳಿಗೆ ಅಸಮಂಜಸ ರೀತಿಯಲ್ಲಿ 'ಅನಪೇಕ್ಷಿತ' ಔಷಧಿ ಕೊಡುವ ಪ್ರವೃತ್ತಿ ಕುರಿಗಾರರಲ್ಲಿ ಬೆಳೆದಿದೆ. ತುರ್ತುಸ್ಥಿತಿಯಲ್ಲಿ ಪ್ರಾಣಿಗಳ ಜೀವ ರಕ್ಷಿಸಬಹುದಾದ ಔಷಧಿ ಪ್ರಯೋಗ ಕುರಿತು ಯಾವುದೇ ವೈಜ್ಞಾನಿಕ ಅರಿವು ಅವರಿಗೆ ಇರುವುದಿಲ್ಲ. ಕುರಿಗಳ ಪ್ರಾಣರಕ್ಷಣೆಗಾಗಿ ಕುರಿಗಾಹಿಗಳು ಬಳಸಬಹುದಾದ 'ಔಷಧಿ ಜ್ಞಾನ'ದ ಕುರಿತು ಇಲಾಖೆಯವರು ಕೊಂಚ ಪ್ರಶಿಕ್ಷಣ ನೀಡುವುದು ಉತ್ತಮ.

ಅನಿಲಕುಮಾರ ಮುಗಳಿ, ಧಾರವಾಡ

ಖಾಲಿ ಹುದ್ದೆ: ನೇಮಕಾತಿಗೆ ತೊಡಕೇನು?

ಸರ್ಕಾರದ ವಿವಿಧ ಇಲಾಖೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಪರಿಪಾಟವಾಗಿದೆ. 'ಲಕ್ಷಾಂತರ ಜನರಿಗೆ ಕೆಲಸ ಕೊಡುತ್ತೇವೆ' ಎಂದು ಚುನಾವಣಾ ಸಂದರ್ಭದಲ್ಲಿ ಹೇಳುವ ಯಾವುದೇ ಪಕ್ಷಕ್ಕೆ, ಗೆದ್ದ ನಂತರ ಜಾಣಮರೆವಿನ ಕಾಯಿಲೆ ಬರುತ್ತದೆ. ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಕೊಡುವಾಗ ಮತ್ತು ವೇತನ ಪರಿಷ್ಕರಣೆ ಮಾಡುವಾಗ, ಇಷ್ಟು ಕೋಟಿ ರೂಪಾಯಿಯನ್ನು ಹೆಚ್ಚುವರಿಯಾಗಿ ನೀಡಬೇಕಾಗುತ್ತದೆ ಎಂಬ ಅಂಕಿಅಂಶ ನೀಡುತ್ತಾರೆ. ಆಯವ್ಯಯ ಮಂಡನೆ ಮಾಡುವಾಗ ಉದ್ಯೋಗಿಗಳ ವೇತನದ ಅನ್ವಯ (ಖಾಲಿ ಇರುವ ಹುದ್ದೆಗಳನ್ನೂ ಸೇರಿಸಿ) ಲೆಕ್ಕ ತೋರಿಸುತ್ತಾರೆ. ಆಯವ್ಯಯಕ್ಕೆ ಅನುಮತಿಯನ್ನೂ ಪಡೆಯುತ್ತಾರೆ. ಇಷ್ಟೆಲ್ಲಾ ಆದರೂ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ತೊಡಕೇನು?

ವಿ.ಪಾಂಡುರಂಗಪ್ಪ, ಬೆಂಗಳೂರು

ಚಿಕ್ಕವರ... ದೊಡ್ಡ ಸಮಸ್ಯೆ!

ಕಾನೂನು ಪದವಿಯಲ್ಲಿ ಒಂದು ವಿಷಯದಲ್ಲಿನ ಪಠ್ಯದ ತಲೆಬರಹ ಹೀಗಿದೆ: 'ಮೈನರ್ ಕ್ರಿಯೇಟ್ಸ್ ಮೇಜರ್ ಪ್ರಾಬ್ಲಮ್ಸ್'... ಆಲ್ವೇಸ್! ಪುಣೆಯಲ್ಲಿ ಇತ್ತೀಚೆಗೆ ಇಬ್ಬರು ವ್ಯಕ್ತಿಗಳನ್ನು ಬಲಿ ತೆಗೆದುಕೊಂಡ ಪೋರ್ಶೆ ಕಾರು ಅಪಘಾತಕ್ಕೆ ಕಾರಣನಾದ 17 ವರ್ಷದ ಬಾಲಕನ ನಡವಳಿಕೆಗೆ ಇದು ಸರಿಹೊಂದುತ್ತದೆ!

ಪೂರ್ಣಿಮಾ ಎಚ್.ಎನ್., ಹೊಸನಗರ

ಮೌಢ್ಯ ಬಿತ್ತುವವರೇ ರಾಹು– ಕೇತು!

ದಾವಣಗೆರೆ ಜಿಲ್ಲೆಯ ನ್ಯಾಮತಿಯಲ್ಲಿ ರಾಹು– ಕೇತುವಿನ ಗುಡಿ ಕಟ್ಟಲು ದಾನಕ್ಕೆ ವಿನಂತಿ ಮಾಡಲಾಗಿದೆ. ರಾಜ್ಯದಲ್ಲಿ ಈವರೆಗೆ ಇಂತಹ ದೇವರ ಗುಡಿಗಳು ಹೆಚ್ಚಾಗಿ ಇಲ್ಲದಿರುವುದಕ್ಕೆ ಕಾರಣ, ನಮ್ಮಲ್ಲಿ ಇನ್ನೂ ಮೌಢ್ಯದಿಂದ ದೂರವಿರುವ, ದೇಹವೇ ದೇವಾಲಯ ಎಂದು ನಂಬಿರುವ ಶರಣ ಕನ್ನಡಿಗರ ಪ್ರಭಾವ ಇರಬೇಕು.

ರಾಹು– ಕೇತುಗಳು ಬೆದರಿಕೆಯ ಭ್ರಮಾತ್ಮಕ ಅವೈಜ್ಞಾನಿಕ ಕಲ್ಪನೆ ಅಷ್ಟೆ. ಧರ್ಮ ಹಾಗೂ ದೇವರ ಮೂಲವು ದಯೆಯಾಗದೆ ಭಯವು ಮೂಲವಾಗಿರುವುದು ಇದಕ್ಕೆ ಕಾರಣ. ನಮ್ಮನ್ನು ದುಷ್ಟ, ದುರ್ಗುಣ, ದುಷ್ಕೃತ್ಯಗಳಿಗೆ ಪ್ರೇರೇಪಿಸುವ ನಮ್ಮ ಮನವೇ ರಾಹು– ಕೇತು. ಕನ್ನಡಿಗರಲ್ಲಿ ವಿಚಾರಶಕ್ತಿ ಇದೆ. ಅದನ್ನು ಬಳಸಿ, ಮಳೆನೀರನ್ನು ಇಂಗಿಸುವ, ಶಿಕ್ಷಣ, ಆರೋಗ್ಯಕ್ಕೆ ಒತ್ತು ನೀಡುವ, ಗಿಡ ಮರ ಬೆಳೆಸುವಂತಹ ಸತ್ಕಾರ್ಯಗಳಿಗೆ ಮಾತ್ರ ದಾನಿಗಳು ದಾನ ನೀಡುವಂತಾಗಲಿ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಾಹನ ಚಾಲನಾ ಪರವಾನಗಿ ನಿಯಮ ಬದಲು ಏನು, ಎತ್ತ?



'ಜೂನ್ 1ರಿಂದ ವಾಹನ ಚಾಲನಾ ಪರವಾನಗಿ (ಡಿಎಲ್) ನೀಡಿಕೆ ನಿಯಮಗಳು ಬದಲಾಗುತ್ತವೆ. ಡಿಎಲ್ ಪಡೆಯಲು ಇನ್ನು ಮುಂದೆ ಆರ್‌ಟಿಒಗೆ ಹೋಗಲೇಬೇಕಿಲ್ಲ. ಡಿಎಲ್ ಪಡೆಯಲು ಚಾಲನಾ ಪರೀಕ್ಷೆಯನ್ನೂ ಎದುರಿಸಬೇಕಿಲ್ಲ' ಎಂಬ ವಿವರ ಇರುವ ಸುದ್ದಿಗಳು ಹರಿದಾಡುತ್ತಿವೆ. ಡಿಎಲ್ ಪಡೆಯುವ ಪ್ರಕ್ರಿಯೆಯಲ್ಲಿ ಬದಲಾವಣೆ ತರಲು ಕೇಂದ್ರ ಸರ್ಕಾರ ಮುಂದಾಗಿದೆಯಾದರೂ, ಅದು ಈಗಲೇ ಜಾರಿಗೆ ಬರುವ ಸಾಧ್ಯತೆ ತೀರಾ ಕಡಿಮೆ. ಡಿಎಲ್ ಪಡೆಯುವ ಸಂಬಂಧ ಕೇಂದ್ರ ಸರ್ಕಾರವು ತರಲು ಹೊರಟಿರುವ ಬದಲಾವಣೆಗಳ ವಿವರ ಈ ಮುಂದಿನಂತಿವೆ...

ಪ್ರಜಾವಾಣಿ ವಾರ್ತೆ



ವಾಹನ ಚಾಲನಾ ಪರವಾನಗಿ (ಡಿಎಲ್) ನಿಯಮಾವಳಿಗಳಿಗೆ ಕೇಂದ್ರ ಸರ್ಕಾರವು ಬದಲಾವಣೆ ತಂದಿದೆ. ಡಿಎಲ್ ಪಡೆಯುವುದು, ಡಿಎಲ್ ಪಡೆಯಲು ಚಾಲನಾ ಪರೀಕ್ಷೆ ಮತ್ತು ಚಾಲನಾ ತರಬೇತಿ ನೀಡುವ ಕೇಂದ್ರಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳಲ್ಲಿ ಗಣನೀಯ ಬದಲಾವಣೆಯನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಜಾರಿಗೆ ತಂದಿದೆ. ಒಟ್ಟಾರೆ, ಈ ಪ್ರಕ್ರಿಯೆಗಳನ್ನು ಸರಳಗೊಳಿಸಲು ಮತ್ತು ವಾಹನ ಚಾಲನಾ ತರಬೇತಿಯಲ್ಲಿ ಮತ್ತಷ್ಟು ಶಿಸ್ತು ತರುವ ಉದ್ದೇಶದಿಂದ ಈ ಬದಲಾವಣೆಗಳನ್ನು ತರಲಾಗಿದೆ ಎಂದು ಸಚಿವಾಲಯ ಹೇಳಿದೆ. ಆದರೆ ಚಾಲನಾ ತರಬೇತಿ ನೀಡುವ ಕೇಂದ್ರಗಳಿಗೆ ಸಂಬಂಧಿಸಿದ ನೂತನ ನಿಯಮಗಳಿಗೆ ಆಕ್ಷೇಪ ವ್ಯಕ್ತವಾಗಿದೆ.

ಅತ್ಯಾಧುನಿಕ ಸವಲತ್ತುಗಳ ಮೂಲಕ, ಅತ್ಯಾಧುನಿಕ ವಾಹನಗಳ ಮೂಲಕ ಪರಿಣಾಮಕಾರಿಯಾಗಿ ತರಬೇತಿ ನೀಡುವುದು ಇದರ ಉದ್ದೇಶ. ಚಾಲನಾ ತರಬೇತಿಯಲ್ಲಿನ ನ್ಯೂನತೆಗಳ ಕಾರಣದಿಂದಲೇ ರಸ್ತೆ ಅಪಘಾತಗಳು ಸಂಭವಿಸುತ್ತಿವೆ. ದೇಶದಲ್ಲಿ ಪ್ರತಿ ವರ್ಷ ಸಂಭವಿಸುವ ರಸ್ತೆ ಅಪಘಾತಗಳಲ್ಲಿ, ಚಾಲಕನ ತಪ್ಪಿನಿಂದ ಸಂಭವಿಸುವ ಅಪಘಾತಗಳ ಪ್ರಮಾಣ ಶೇ 98ರಷ್ಟು. ಚಾಲನಾ ತರಬೇತಿಯ ಹಂತದಲ್ಲೇ ಬದಲಾವಣೆ ತರುವುದರಿಂದ ಇಂತಹ ಅಪಘಾತಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು ಎಂದು ಈ ಸಂಬಂಧ ಹೊರಡಿಸಿದ್ದ ಅಧಿಸೂಚನೆಯಲ್ಲಿ ಸಚಿವಾಲಯ ವಿವರಿಸಿತ್ತು.

ಹೀಗೆ ತರಬೇತಿಯನ್ನು ಕಠಿಣಗೊಳಿಸುವ ಉದ್ದೇಶದಿಂದ 'ಚಾಲನಾ ತರಬೇತಿ ಕೇಂದ್ರ'ಗಳ ಮಾನ್ಯತಾ ನಿಯಮಗಳನ್ನು ಕಠಿಣಗೊಳಿಸಲಾಗಿದೆ. ಇಂತಹ ಕೇಂದ್ರಗಳು ಹೊಂದಬೇಕಾದ ಮೂಲಸೌಕರ್ಯಗಳು, ತರಬೇತಿ ಸಿಬ್ಬಂದಿಯ ಅರ್ಹತೆಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸಣ್ಣ ಮಟ್ಟದ ಚಾಲನಾ ತರಬೇತಿ ಕೇಂದ್ರಗಳಿಗೆ ಈ ನಿಯಮಗಳು ಹೊರೆಯಾಗಲಿವೆ. ನಿಯಮಗಳಲ್ಲಿ ಉಲ್ಲೇಖಿಸಿರುವಷ್ಟು ಮೂಲಸೌಕರ್ಯವನ್ನು ಒದಗಿಸಿಕೊಳ್ಳುವುದು ಆರ್ಥಿಕವಾಗಿ ತೀರಾ ಹೊರೆಯಾಗಲಿದೆ. ಪರಿಣಾಮವಾಗಿ ಸಣ್ಣ ಮಟ್ಟದ ತರಬೇತಿ ಕೇಂದ್ರಗಳು ಬಾಗಿಲು ಹಾಕಬೇಕಾದ ಅನಿವಾರ್ಯ ಎದುರಾಗಬಹುದು ಎಂಬ ಕಳವಳ ವ್ಯಕ್ತವಾಗಿದೆ. ಈ ಸಂಬಂಧ ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಪ್ರತಿಭಟನೆ ಹಾಗೂ ಮುಷ್ಕರಗಳು ನಡೆದಿವೆ.

ಮಾರ್ಗಸೂಚಿಗಳ ಪ್ರಕಾರ ನಾಲ್ಕು ಚಕ್ರದ ವಾಹನಗಳ ತರಬೇತಿ ಕೇಂದ್ರ ನಡೆಸಲು ಕನಿಷ್ಠ 2 ಎಕರೆ ಜಮೀನು ಹೊಂದಿರಬೇಕು. ಇದಲ್ಲದೇ ಕಂಪ್ಯೂಟರ್ ಆಧಾರಿತ ತರಗತಿ, ಎಲ್ಲಾ ವರ್ಗದ ವಾಹನಗಳ ಸಿಮ್ಯುಲೇಟರ್‌ಗಳು, ಎಲ್ಲಾ ವರ್ಗದ ವಾಹನಗಳು, ಪ್ರತ್ಯೇಕ ತರಬೇತಿ ಮತ್ತು ಪರೀಕ್ಷಾ ಟ್ರ್ಯಾಕ್ ಹೊಂದಿರಬೇಕು ಎನ್ನುತ್ತದೆ ನೂತನ ನಿಯಮಾವಳಿ.

ಇಷ್ಟು ಬಂಡವಾಳ ಹೂಡಿ ತರಬೇತಿ ಕೇಂದ್ರ ಆರಂಭಿಸಲು ದೊಡ್ಡ-ದೊಡ್ಡ ಕಾರ್ಪೊರೇಟ್ ಕಂಪನಿಗಳಿಂದ ಮಾತ್ರ ಸಾಧ್ಯ. ಇದು ಈ ಕ್ಷೇತ್ರದಲ್ಲಿ ದೊಡ್ಡ ಕಾರ್ಪೊರೇಟ್ ಕಂಪನಿಗಳ ಏಕಸ್ವಾಮ್ಯಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದು ಮುಂಬೈನ 'ವಾಹನ ಚಾಲನಾ ತರಬೇತಿ ಕೇಂದ್ರಗಳ ಸಂಘಟನೆ' ಕಳವಳ ವ್ಯಕ್ತಪಡಿಸಿದೆ. ಈ ಮಾರ್ಗಸೂಚಿಗಳನ್ನೇ ಆಧರಿಸಿ ಕೇರಳ ಸರ್ಕಾರವು ಮೇ 1ರಿಂದಲೇ ನೂತನ ನಿಯಮಗಳ ಜಾರಿಗೆ ಮುಂದಾಗಿತ್ತು. ಆದರೆ ತೀವ್ರ ಆಕ್ಷೇಪ ವ್ಯಕ್ತವಾದ ಕಾರಣ ಕೇರಳ ಸರ್ಕಾರವು ಈ ನಿಯಮಗಳನ್ನು ಸಡಿಲಗೊಳಿಸಿದೆ.

ರಾಜ್ಯಕ್ಕೆ ಇನ್ನೂ ಬಂದಿಲ್ಲ ಸುತ್ತೋಲೆ

ವಾಹನ ಚಾಲನಾ ಪರವಾನಗಿ ನೀಡುವ ಸಂಬಂಧ ಕೇಂದ್ರ ಸರ್ಕಾರ ರೂಪಿಸಿರುವ ನೂತನ ನಿಯಮಾವಳಿಗಳ ಸಂಬಂಧ ರಾಜ್ಯ ಸರ್ಕಾರಕ್ಕೆ ಇನ್ನೂ ಸುತ್ತೋಲೆ ಬಂದಿಲ್ಲ. ಹೀಗಾಗಿ ಜೂನ್ 1ರಿಂದ ನೂತನ ನಿಯಮಗಳು ಜಾರಿಗೆ ಬರುವ ಸಾಧ್ಯತೆ ಇಲ್ಲವೇ ಇಲ್ಲ ಎಂದು ರಾಜ್ಯ ಸಾರಿಗೆ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಾರಿಗೆಯು ಸಮವರ್ತಿ ಪಟ್ಟಿಯಲ್ಲಿ ಬರುತ್ತದೆ. ಅಂದರೆ ಸಾರಿಗೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಸಮಾನವಾದ ಅಧಿಕಾರಗಳಿರುತ್ತವೆ. ಕೇಂದ್ರ ಸರ್ಕಾರವು ಸಾರಿಗೆಗೆ ಸಂಬಂಧಿಸಿದಂತೆ ಯಾವುದೇ ನಿಯಮವನ್ನು ರೂಪಿಸಿದರೂ, ಅವು ದೇಶದ ಎಲ್ಲೆಡೆ ಏಕಾಏಕಿ ಜಾರಿಗೆ ಬರುವುದಿಲ್ಲ. ಪ್ರತಿ ರಾಜ್ಯ ಸರ್ಕಾರವೂ ಪ್ರತ್ಯೇಕವಾಗಿ ಅಧಿಸೂಚನೆ ಹೊರಡಿಸಿದರಷ್ಟೇ ಆ ನಿಯಮಗಳು ಜಾರಿಗೆ ಬರುತ್ತವೆ. ಅಗತ್ಯಬಿದ್ದರೆ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ನಿಯಮಗಳಿಗೆ ಬದಲಾವಣೆಯನ್ನೂ ಮಾಡಿಕೊಳ್ಳಬಹುದಾಗಿದೆ. ಕೇಂದ್ರ ಸರ್ಕಾರವು ಹೊರಡಿಸಿರುವ ಅಧಿಸೂಚನೆಗೆ ಸಂಬಂಧಿಸಿದ ಸುತ್ತೋಲೆಯು ರಾಜ್ಯ ಸರ್ಕಾರಕ್ಕೆ ಬರಬೇಕು. ಅದರ ಆಧಾರದಲ್ಲಿ ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಬೇಕು. ಅನಂತರವಷ್ಟೇ ಈ ನಿಯಮಗಳು ರಾಜ್ಯದಲ್ಲಿ ಜಾರಿಗೆ ಬರುತ್ತವೆ.

ಚಾಲನಾ ಪರೀಕ್ಷೆಗಾಗಿ ಬಹು ಆಯ್ಕೆ...



ವಾಹನ ಚಾಲನಾ ಪರೀಕ್ಷೆಗಾಗಿ ಪ್ರಾದೇಶಿಕ ಸಾರಿಗೆ ಕಚೇರಿಗೇ (ಆರ್‌ಟಿಒ) ಹೋಗಬೇಕಿಲ್ಲ ಎನ್ನುತ್ತವೆ ನೂತನ ನಿಯಮಗಳು. ಚಾಲನಾ ಪರೀಕ್ಷೆ ಎದುರಿಸಲು ಮತ್ತು ಡಿಎಲ್ ಪಡೆಯಲು ಆರ್‌ಟಿಒ ಕಚೇರಿಗಳಲ್ಲಿ ಸರದಿಯಲ್ಲಿ ನಿಲ್ಲಬೇಕಾದ ಸ್ಥಿತಿ ಈಗ ಇದೆ. ಮೂಲಸೌಕರ್ಯ ಕೊರತೆ ಇರುವ ಕಾರಣ ಪರೀಕ್ಷೆ ಮತ್ತು ಡಿಎಲ್ ನೀಡಿಕೆ ಪ್ರಕ್ರಿಯೆ ವಿಳಂಬವಾಗುತ್ತಿದೆ. ಈ ವಿಳಂಬವನ್ನು ತಪ್ಪಿಸುವ ಉದ್ದೇಶದಿಂದ ಖಾಸಗಿ ಚಾಲನಾ ತರಬೇತಿ ಶಾಲೆಗಳೇ ಚಾಲನಾ ಪರೀಕ್ಷೆಯನ್ನೂ ನಡೆಸಲು ಅವಕಾಶ ಮಾಡಿಕೊಡಲಾಗುತ್ತಿದೆ.

ಮಾನ್ಯತೆ ಪಡೆದ ಚಾಲನಾ ತರಬೇತಿ ಕೇಂದ್ರಗಳು ಚಾಲನಾ ಪರೀಕ್ಷೆ ನಡೆಸುವ ಅವಕಾಶ ಪಡೆಯಲಿವೆ. ತರಬೇತಿ ಕೇಂದ್ರಗಳಲ್ಲಿ ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಆಯಾ ಕೇಂದ್ರಗಳು ಪ್ರಮಾಣಪತ್ರ ನೀಡಲಿವೆ. ಡಿಎಲ್ ಪಡೆಯಲು ಅರ್ಜಿ ಸಲ್ಲಿಸುವಾಗ ಆರ್‌ಟಿಒನಲ್ಲಿ ಆ ಪ್ರಮಾಣಪತ್ರವನ್ನು ಸಲ್ಲಿಸಿದರೆ, ಮತ್ತೆ ಚಾಲನಾ ಪರೀಕ್ಷೆ ಎದುರಿಸುವ ಅವಶ್ಯಕತೆ ಇರುವುದಿಲ್ಲ. ಇದರ ಜತೆಯಲ್ಲಿ ನೇರವಾಗಿ ಆರ್‌ಟಿಒನಲ್ಲೇ ಚಾಲನಾ ಪರೀಕ್ಷೆ ಎದುರಿಸುವ ವ್ಯವಸ್ಥೆಯೂ ಮುಂದುವರಿಯಲಿದೆ. ಹೀಗೆ ಚಾಲನಾ ಪರೀಕ್ಷೆ ಎದುರಿಸಲು ಸಾರ್ವಜನಿಕರಿಗೆ ಬಹುಆಯ್ಕೆಯನ್ನು ಈ ನಿಯಮಾವಳಿಗಳು ಮಾಡಿಕೊಡುತ್ತವೆ.

ವ್ಯಕ್ತಿಗಳು ಮಾತ್ರವಲ್ಲದೇ ಸ್ವಯಂಸೇವಾ ಸಂಘಟನೆಗಳು, ಕಾರ್ಪೊರೇಟ್ ಕಂಪನಿಗಳು, ವಾಹನ ತಯಾರಿಕಾ ಕಂಪನಿಗಳು ಮತ್ತು ಯಾವುದೇ ರೀತಿಯ ಕಂಪನಿಯೂ ಇಂತಹ ಕೇಂದ್ರಗಳನ್ನು ಆರಂಭಿಸಬಹುದು. ಈ ಕ್ಷೇತ್ರದಲ್ಲಿ ಯಾವುದೋ ಒಂದು ಕಂಪನಿಯು ಏಕಸ್ವಾಮ್ಯ ಸಾಧಿಸುವುದನ್ನು ತಪ್ಪಿಸಲೂ ನೂತನ ನಿಯಮಾವಳಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಒಂದು ಕಂಪನಿಯು ರಾಜ್ಯವೊಂದರಲ್ಲಿ ಗರಿಷ್ಠ ಐದು ತರಬೇತಿ ಕೇಂದ್ರಗಳನ್ನಷ್ಟೇ ಸ್ಥಾಪಿಸಲು ಅವಕಾಶವಿದೆ.

ಈ ರೀತಿಯ ತರಬೇತಿ ಮತ್ತು ಪರೀಕ್ಷೆ ನಡೆಸಲು ಚಾಲನಾ ತರಬೇತಿ ಕೇಂದ್ರಗಳು ಹೊಂದಿರಬೇಕಾದ ಮೂಲಸೌಕರ್ಯಗಳು ಇಂತಿವೆ:

- ಕನಿಷ್ಠ 2 ಎಕರೆ ಜಮೀನು. ಜಮೀನು ಸ್ವಂತದ್ದಾಗಿರಬಹುದು ಅಥವಾ ಕನಿಷ್ಠ ಹತ್ತು ವರ್ಷಗಳವರೆಗೆ ಭೋಗ್ಯಕ್ಕೆ ಪಡೆದ ಜಮೀನಾಗಿರಬಹುದು
- ಚಾಲನಾ ತರಬೇತಿ ನೀಡುವವರು ಡಿಪ್ಲೊಮಾ ಪಡೆದಿರಬೇಕು ಮತ್ತು ಕನಿಷ್ಠ ಐದು ವರ್ಷಗಳ ಚಾಲನಾ ಅನುಭವವಿರಬೇಕು
- ತರಬೇತಿ ಕೇಂದ್ರಗಳು ತಮ್ಮದೇ ಪ್ರತ್ಯೇಕ ಜಾಲತಾಣಗಳನ್ನು ಹೊಂದಿರಬೇಕು. ಕೇಂದ್ರದಲ್ಲಿ ಇರುವ ಸೌಲಭ್ಯಗಳು, ವಿದ್ಯಾರ್ಥಿಗಳು, ಉತ್ತೀರ್ಣರಾದವರ ಸಂಖ್ಯೆ, ಡಿಎಲ್ ಪಡೆದವರ ಸಂಖ್ಯೆ ಮತ್ತಿತರ ವಿವರಗಳನ್ನು ಜಾಲತಾಣಗಳಲ್ಲಿ ಪ್ರಕಟಿಸಬೇಕು
- ತರಗತಿ ಕೊಠಡಿಗಳನ್ನು ಹೊಂದಿರಬೇಕು. ಡಿಜಿಟಲ್ ಬೋರ್ಡ್‌ಗಳು, ಆನ್‌ಲೈನ್ ಪರೀಕ್ಷೆ ನಡೆಸಲು ಕಂಪ್ಯೂಟರ್‌ಗಳು, ಇಂಟರ್‌ನೆಟ್ ಸೌಲಭ್ಯ ಹೊಂದಿರಬೇಕು
- ಅರ್ಜಿ ಸಲ್ಲಿಕೆ, ವೆಬ್‌ಸೈಟ್ ಅಪ್‌ಡೇಟ್, ಆನ್‌ಲೈನ್ ಪರೀಕ್ಷೆ ಮತ್ತಿತರ ಕೆಲಸಗಳನ್ನು ನಿರ್ವಹಿಸಲು ತಂತ್ರಜ್ಞರನ್ನು ನೇಮಿಸಿಕೊಳ್ಳಬೇಕು

ಡಿಎಲ್ ನೀಡುವುದು ಆರ್‌ಟಿಒ ಮಾತ್ರ

ವಾಹನ ಚಾಲನಾ ತರಬೇತಿ ಕೇಂದ್ರಗಳೇ ಡಿಎಲ್ ನೀಡಬಹುದು. ಅದಕ್ಕಾಗಿ ಆರ್‌ಟಿಒಗೆ ಅಲೆಯಬೇಕಿಲ್ಲ ಎಂಬ ವಿವರ ಇರುವ ಸಂದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಜತೆಗೆ ಕೆಲವು ಸುದ್ದಿ ಮಾಧ್ಯಮಗಳೂ ಇದೇ ರೀತಿಯ ಸುದ್ದಿಯನ್ನು ಪ್ರಕಟಿಸಿವೆ. ಆದರೆ ಇದು ತಪ್ಪು ಮಾಹಿತಿ. ಚಾಲನಾ ತರಬೇತಿ ಕೇಂದ್ರಗಳು ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಗ್ಗೆ ಪ್ರಮಾಣಪತ್ರವನ್ನು ಮಾತ್ರ ನೀಡುತ್ತವೆ. ಅದರ ಆಧಾರದಲ್ಲಿ ಆರ್‌ಟಿಒ ಡಿಎಲ್ ನೀಡುತ್ತದೆ. ಡಿಎಲ್ ನೀಡುವ ಸಂಬಂಧ ಆರ್‌ಟಿಒಗೆ ಇರುವ ಅಧಿಕಾರದಲ್ಲಿ ಯಾವುದೇ ಬದಲಾವಣೆ ಇಲ್ಲ.

ಆಧಾರ: ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಪ್ರಕಟಣೆಗಳು, ಸಾರಿಗೆ ಸಚಿವಾಲಯದ 'ಚಾಲನಾ ತರಬೇತಿ ಕೇಂದ್ರಗಳಿಗೆ ಮಾನ್ಯತೆ: ಕೆಲವು ಮಾರ್ಗಸೂಚಿಗಳು' ಅಧಿಸೂಚನೆ, ಪಿಟಿಐ

ಸಿನಿ ಬಿಟ್ಸ್

ಮೆಗಾಸ್ಟಾರ್ ಚಿರಂಜೀವಿ ಜೊತೆ ಆಶಿಕಾ


ಆಶಿಕಾ ರಂಗನಾಥ್


'ಅಮಿಗೋಸ್' ಸಿನಿಮಾ ಮೂಲಕ ಟಾಲಿವುಡ್‌ಗೆ ಹೆಜ್ಜೆ ಇಟ್ಟಿದ್ದ ನಟಿ ಆಶಿಕಾ ರಂಗನಾಥ್, ಬಳಿಕ 'ನಾ ಸಾಮಿ ರಂಗ' ಚಿತ್ರದಲ್ಲಿ ಮಿಂಚಿದ್ದರು. ಇದೀಗ ಮತ್ತೊಂದು ತೆಲುಗು ಪ್ರಾಜೆಕ್ಟ್ ಒಪ್ಪಿಕೊಂಡಿದ್ದಾರೆ.

ಸ್ಯಾಂಡಲ್‌ವುಡ್‌ನ 'ಪಟಾಕಿ ಪೋರಿ' ಆಶಿಕಾ ಕನ್ನಡ ಸಿನಿಮಾಗಳ ಜೊತೆಗೆ ತೆಲುಗು, ತಮಿಳು ಸಿನಿಮಾಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಜೂನಿಯರ್ ಎನ್‌ಟಿಆರ್ ಸಹೋದರ ಕಲ್ಯಾಣ್ ರಾಮ್ ಅಭಿನಯದ 'ಅಮಿಗೋಸ್' ಆಶಿಕಾ ಮೊದಲ ತೆಲುಗು ಸಿನಿಮಾ. ಬಳಿಕ ಅಕ್ಕಿನೇನಿ ನಾಗಾರ್ಜುನ್ ಜೋಡಿಯಾಗಿಯೂ ಆಶಿಕಾ ನಟಿಸಿದ್ದರು. ಈಗ ಮೆಗಾಸ್ಟಾರ್ ಚಿರಂಜೀವಿ ಜೊತೆ ನಟಿಸಲು ಅವರು ಸಜ್ಜಾಗಿದ್ದಾರೆ. ಚಿರಂಜೀವಿ ಅಭಿನಯಿಸುತ್ತಿರುವ 'ವಿಶ್ವಂಭರ' ಚಿತ್ರದಲ್ಲಿ ಪ್ರಮುಖ ಪಾತ್ರಕ್ಕೆ ಆಶಿಕಾ ಬಣ್ಣ ಹಚ್ಚಲಿದ್ದಾರೆ ಎಂದಿದೆ ಚಿತ್ರತಂಡ. ಚಿರಂಜೀವಿಗೆ ನಾಯಕಿಯಾಗಿ ತ್ರಿಷಾ ಕೃಷ್ಣನ್ ನಟಿಸಲಿದ್ದಾರೆ. ಯು.ವಿ. ಕ್ರಿಯೇಷನ್ ಬ್ಯಾನರ್‌ನಡಿ ವಿಕ್ರಮ್, ವಂಶಿ ಹಾಗೂ ಪ್ರಮೋದ್ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ವಸಿಷ್ಠ 'ವಿಶ್ವಂಭರ' ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಆಸ್ಕರ್ ಪ್ರಶಸ್ತಿ ವಿಜೇತ ಎಂ.ಎಂ. ಕೀರವಾಣಿ ಈ ಚಿತ್ರದ ಸಂಗೀತ ನಿರ್ದೇಶಕ. 2025ರ ಸಂಕ್ರಾಂತಿಗೆ ಸಿನಿಮಾ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ.

'O2' ಸಿನಿಮಾ ಬಳಿಕ ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾ ಮೂಲಕ ಆಶಿಕಾ ಕನ್ನಡದ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ.



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿಯ ನಾಮನಿರ್ದೇಶಿತರ ಇನ್ನಷ್ಟು ವಿವರ ಮೇ 29ರಿಂದ ಪ್ರಕಟಗೊಳ್ಳಲಿದೆ


ಗಣೇಶ್

'ಕೃಷ್ಣ'ನ ಮದುವೆ ಫಿಕ್ಸ್!

ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 41ನೇ ಸಿನಿಮಾ 'ಕೃಷ್ಣಂ ಪ್ರಣಯ ಸಖಿ'ಯ ಮೊದಲ ಹಾಡು ಬಿಡುಗಡೆಯಾಗಿದೆ.

'ಮೈ ಮ್ಯಾರೇಜ್ ಈಸ್ ಫಿಕ್ಸ್‌ಡ್' ಎನ್ನುತ್ತಾ ರ‍್ಯಾಪ್ ಶೈಲಿಯ ಹಾಡಿನೊಂದಿಗೆ ಬಂದಿದ್ದಾರೆ ಗಣೇಶ್. ನಿರ್ದೇಶಕ ಶ್ರೀನಿವಾಸರಾಜು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಅರ್ಜುನ್ ಜನ್ಯ ಸಂಗೀತ ನೀಡಿರುವ ಆರು ಹಾಡುಗಳು ಚಿತ್ರದಲ್ಲಿವೆ. ಈ ಪೈಕಿ ನಿಶಾನ್ ರಾಯ್ ಸಾಹಿತ್ಯ ಬರೆದು ಚಂದನ್ ಶೆಟ್ಟಿ ಹಾಡಿರುವ ಈ ಚಿತ್ರದ ಮೊದಲ ಹಾಡು ಇದೀಗ ಬಿಡುಗಡೆಯಾಗಿದೆ. ಈ ಮೂಲಕ ಚಿತ್ರದ ಪ್ರಚಾರ ಕಾರ್ಯಕ್ಕೆ ಚಿತ್ರತಂಡ ಚಾಲನೆ ನೀಡಿದೆ. ಕಳೆದ ಮಾರ್ಚ್‌ನಲ್ಲಿ ಚಿತ್ರತಂಡ ಸಿನಿಮಾದ ಶೂಟಿಂಗ್ ಪೂರ್ಣಗೊಳಿಸಿತ್ತು. ಬೆಂಗಳೂರು, ವಿಯೆಟ್ನಾಂ ಮುಂತಾದ ಕಡೆ ಚಿತ್ರೀಕರಣ ನಡೆದಿದೆ. ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರವನ್ನು ತ್ರಿಶೂಲ್ ಎಂಟರ್‌ಟೈನ್ಮೆಂಟ್‌ನಡಿ ಪ್ರಶಾಂತ್ ಜಿ. ರುದ್ರಪ್ಪ ನಿರ್ಮಿಸಿದ್ದಾರೆ. ಗಣೇಶ್‌ಗೆ ನಾಯಕಿಯಾಗಿ ಮಾಳವಿಕ ನಾಯರ್ ನಟಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **'ಪಾಕ್'** ಆಕ್ರಮಿತ ಕಾಶ್ಮೀರದಲ್ಲಿ ಕುರಿಗಾಹಿ ಸಮುದಾಯದವರು ಹಿಂದೂಸ್ತಾನಕ್ಕೆ ಮತ್ತು ನಮ್ಮ ಸೇನೆಗೆ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. 70 ವರ್ಷಗಳಲ್ಲಿ ಈ ರೀತಿ ಆಗಲು ಸಾಧ್ಯವಿರಲಿಲ್ಲ. ಆದರೆ, ಈಗ ಆರಾಮವಾಗಿ ಸಂಭವಿಸುತ್ತಿದೆ. ಜೈ ಹಿಂದ್' ಎನ್ನುವ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಹಂಚಿಕೆಯಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



✓ **ಇದೇ** ವಿಡಿಯೊವು ಕಳೆದ ವರ್ಷವೂ ಹಂಚಿಕೆಯಾಗಿತ್ತು. ಬಿಜೆಪಿಯ ಹಲವು ನಾಯಕರು ಇದೇ ಅಭಿಪ್ರಾಯದೊಂದಿಗೆ ವಿಡಿಯೊವನ್ನು ಹಂಚಿಕೊಂಡಿದ್ದರು. ಆದರೆ, ಇದು ಕಾಶ್ಮೀರದ ಬಾರಾಮುಲ್ಲಾದಲ್ಲಿ ನಡೆದ ಘಟನೆ. ಪ್ರಬಲ ಎರಡು ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಮೀಸಲಾತಿ ನೀಡಲಾಗಿತ್ತು. ಇದರ ವಿರುದ್ಧ ಗುಜ್ಜರ್ ಹಾಗೂ ಕುರಿಗಾಹಿ ಬುಡಕಟ್ಟು ಸಮುದಾಯಗಳು ತೀವ್ರವಾಗಿ ಎರಡು ವರ್ಷಗಳ ಅವಧಿಯ ಪ್ರತಿಭಟನೆ ನಡೆಸಿದ್ದರು. ಈ ವೇಳೆ ಭಾರತದ ಸ್ವಾತಂತ್ರ್ಯ ದಿನದ ಮರು ದಿನ ಪ್ರತಿಭಟನನಿರತರು, ಭಾರತ ಸಂವಿಧಾನ ಮತ್ತು ಸೇನೆಯನ್ನು ಗೌರವಿಸುತ್ತೇವೆ. ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತೇವೆ ಎಂದು ಪ್ರತಿಜ್ಞೆ ಮಾಡಿದ್ದರು. ಪ್ರತಿಜ್ಞೆ ಬೋಧಿಸಿದ್ದ ರಫೀಕ್ ಭಲೋಟೆ ಅವರು ಇದನ್ನು ದೃಢಪಡಿಸಿದ್ದಾರೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಅಧಿಕಾರ ಅಹಂ ಅಲ್ಲ

ನುಡಿ ಬೆಳಗು


ಪಿ. ಚಂದ್ರಿಕಾ

ರಾಜನೊಬ್ಬ ತನ್ನ ಸೈನ್ಯ ಸಮೇತ ಕಾಡಿಗೆ ಬಂದ. ಬೇಸಿಗೆಯ ಮಧ್ಯಾಹ್ನವಾದ್ದರಿಂದ ಇಡೀ ಕಾಡು ಒಣಗಿಹೋಗಿತ್ತು. ಅಲ್ಲೊಬ್ಬ ಸಂನ್ಯಾಸಿ ಮರಗಿಡಗಳ ಬೇರನ್ನು ಬಿಡಿಸುತ್ತಾ ದಣಿಯುತ್ತಿದ್ದ. ಅವನ ಮೈಯ್ಯಿಂದ ಬೆವರು ಬಸಿದು ಹೋಗುತ್ತಿತ್ತು. ಆದರೂ ಬಿಡದೆ ಕೆಲಸ ಮಾಡುತ್ತಿದ್ದ. ರಾಜ ಇದನ್ನು ಗಮನಿಸಿ, 'ಎಲೈ ಸಂನ್ಯಾಸಿಯೇ ಏನು ಮಾಡುತ್ತಿರುವೆ' ಎಂದು ಕೇಳಿದ. 'ಇದು ಬೇಸಿಗೆ ಆದ್ದರಿಂದ ಗಿಡದ ಬೇರುಗಳನ್ನು ಬಿಡಿಸುತ್ತಿರುವೆ. ನಾಳೆ ಮಳೆಗಾಲಕ್ಕೆ ಗಿಡಗಳಿಗೆ ನೀರು ಇಂಗುವುದು ಸುಲಭವಾಗುತ್ತದೆ' ಎಂದ. ರಾಜ ತಕ್ಷಣ ಕೇಳಿದ, 'ಗಿಡ ನಿನಗೆ ಇದನ್ನು ಕೇಳಿತೇ?'. ಸಂನ್ಯಾಸಿ ನಕ್ಕು, 'ಕೇಳಲಿಕ್ಕೆ ಅವುಗಳಿಗೆ ಬಾಯಿಯೆಲ್ಲಿದೆ?' ರಾಜನಿಗೆ ಚೋದ್ಯ ಅನ್ನಿಸಿ, 'ಅಲ್ಲಾ ತಪಸ್ಸು, ಧ್ಯಾನ ಅಂತ ಮಾಡಿಕೊಂಡು ಇರದೆ ಕೇಳದ ಕೆಲಸವನ್ನು ಯಾಕೆ ಮಾಡುತ್ತಿರುವೆ' ಎಂದ. ತಕ್ಷಣವೇ ಅವನನ್ನು ನಿಟ್ಟಿಸಿದ ಸಂನ್ಯಾಸಿ, 'ನಿಜ ಹೇಳು ನೀನು ರಾಜನೇನಾ?' ಎಂದ. ಈ ಮಾತನ್ನು ಕೇಳಿ ಕೋಪಗೊಂಡ ರಾಜ, 'ನನ್ನನ್ನೇ ಅಣಕಿಸುವ ನಿನಗೆಷ್ಟು ಧೈರ್ಯ?' ಎಂದು ಸೈನಿಕರಿಗೆ ಅವನನ್ನು ಬಂಧಿಸುವಂತೆ ಆಜ್ಞಾಪಿಸಿದ.

ಆದರೂ ಸಂನ್ಯಾಸಿ ಧೃತಿಗೆಡದೆ, 'ಮತ್ತೆ ನೀನು ರಾಜನಲ್ಲ ಎಂದು ನಿರೂಪಿಸಿಕೊಂಡುಬಿಟ್ಟೆ' ಎಂದು ನಕ್ಕ ಮತ್ತಷ್ಟು ಗಟ್ಟಿಯಾಗಿ. ಈಗ ರಾಜನ ಸಹನೆಯ ಕಟ್ಟೆಯೊಡೆಯಿತು, 'ಈ ಸೈನ್ಯ, ಕುದುರೆ, ಪರಿವಾರ, ವೈಭವ ಎಲ್ಲ ನೋಡಿಯೂ ನನ್ನನ್ನು ರಾಜನಲ್ಲ ಎಂದೆಯಲ್ಲಾ, ನನಗೆ ಬರುತ್ತಿರುವ ಕೋಪಕ್ಕೆ ನಿನ್ನ ಗಲ್ಲಿಗೇರಿಸುವೆ' ಎಂದ. ಸಂನ್ಯಾಸಿ ಮತ್ತಷ್ಟು ಶಾಂತವಾಗಿ, 'ಏರಿಸು ನಿನ್ನ ಕೈಲಿ ಆಗುವುದು ಇಷ್ಟೇ ತಾನೆ?' ಎಂದ.

ರಾಜ ಯೋಚನೆಗೆ ಬಿದ್ದ ಈ ಸಂನ್ಯಾಸಿ ಯಾವುದಕ್ಕೂ ಬಗ್ಗುತ್ತಿಲ್ಲ ಮತ್ತು ಇಷ್ಟು ಪ್ರಶಾಂತ ಮುಖಮುದ್ರೆಯಲ್ಲಿಯೇ ನಾನು ಕೇಳಿದ್ದಕ್ಕೆಲ್ಲಾ ಉತ್ತರಿಸುತ್ತಿದ್ದಾನೆ ಎಂದರೆ ಇದರಲ್ಲಿ ಏನೋ ಮರ್ಮ ಇರಬೇಕು ಎಂದು ಖಾತ್ರಿ ಪಡಿಸಿಕೊಂಡ. ಕುದುರೆಯಿಂದ ಇಳಿದು ಸಂನ್ಯಾಸಿಯ ಹತ್ತಿರ ಬಂದು, 'ನಿಜವಾಗಲೂ ನೀನು ಸಾಯಲು ಸಿದ್ಧವಿದ್ದೀಯಾ' ಎಂದು ಮತ್ತೆ ಪ್ರಶ್ನಿಸಿದ. 'ಅದೇ ಆಗಬೇಕು ಎಂದಿದ್ದರೆ ಯಾರೂ ತಪ್ಪಿಸಲು ಸಾಧ್ಯವಿಲ್ಲ' ಎಂದ ಸಂನ್ಯಾಸಿ.

ಅಸಹಾಯಕನಾದ ರಾಜ ಕೇಳಿದ, 'ಸರಿ ಈಗ ಹೇಳು ರಾಜನಾಗಲು ನಾನೇನು ಮಾಡಬೇಕು?' ಸಂನ್ಯಾಸಿ ಹೀಗಂದ: 'ನೀನು ನನ್ನ ಏನು ಕೇಳಿದೆ? ಕೇಳದಿದ್ದರೂ ಮರದ ಬುಡವನ್ನು ಯಾಕೆ ಬಿಡಿಸುತ್ತಿರುವೆ ಎಂದಲ್ಲವೇ? ನಾನು ಈ ಕಾಡಲ್ಲಿ ಅಲೆಯುವವನು. ದಿನಾ ನೋಡುವ ನನಗೆ ಯಾವ ಗಿಡಕ್ಕೆ ಏನು ಬೇಕು ಎಂದು ಅರ್ಥವಾಗುತ್ತದೆ. ರಾಜನಾದ ನಿನ್ನ ಬಳಿ ನೀರು, ಆಹಾರ ಇತ್ತು. ನನ್ನನ್ನು ನೋಡಿ ಕೆಲಸ ಮಾಡಿ ದಣಿದಿದ್ದಾನೆ ನೀರು ಆಹಾರ ಕೊಡಬೇಕು ಎಂದು ಅನ್ನಿಸಬೇಕಿತ್ತು. ಅದೂ ಅರ್ಥವಾಗಲಿಲ್ಲ ಎಂದರೆ, ನೀನು ಪ್ರಜೆಗಳ ಬೇಕು ಬೇಡಗಳನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತೀಯ? ಸ್ಥಾನ ಎನ್ನುವುದು ದಕ್ಕುವುದು ಸರಿಯೇ. ಆದರೆ ಅದನ್ನು ನಿಭಾಯಿಸಲಿಕ್ಕೆ ಅಂತಃಕರಣ ಬೇಕು. ಅಧಿಕಾರಕ್ಕೆ ಅಹಂಕಾರವಲ್ಲ, ನನ್ನ ಮಗುವಿಗೆ ಏನು ಬೇಕು ಎಂದು ಅರ್ಥ ಮಾಡಿಕೊಳ್ಳುವ ತಾಯಿಯ ವಾತ್ಸಲ್ಯ ಬೇಕು. ಆಗ ಮಾತ್ರ ನೀನು ರಾಜನಾಗಿ ಉಳಿಯಬಲ್ಲೆ' ಎನ್ನುತ್ತಾನೆ.

ನಿಜ, ಅಧಿಕಾರ ಅಹಂಕಾರವಲ್ಲ ಅದೊಂದು ಜವಾಬ್ದಾರಿ ಲಾಲಸೆಯಿಲ್ಲದ ಸ್ಥಿತಿ ಎಂದರ್ಥ ಮಾಡಿಕೊಂಡರೆ ಪ್ರಜಾಸೇವೆ ಸಾಧ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 28, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಪಂಚಮಿ ಗಂ. 15-24 ನಕ್ಷತ್ರ ಉತ್ತರಾಷಾಢ ಗಂ. 9-34 ಯೋಗ: ಬ್ರಹ್ಮ ಗಂ. 26-06 ಕರಣ: ತೈತಿಲ ಗಂ. 15-24, ವೃಷಭ ಮಾಸದ ನೇ 14 ದಿನ, ಮಳೆನಕ್ಷತ್ರ: ರೋಹಿಣಿ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-06 ಸೂರ್ಯಾಸ್ತ : 06-49
ಮುಸ್ಲಿಂ ದಿನಾಂಕ : 19 ಜುಲ್ಕಾಯದ್
ಅದೃಷ್ಟ ಸಂಖ್ಯೆ : 4, 9

ಮೇಷ: ಉತ್ತಮ ಸೌಕರ್ಯವನ್ನು ಮನೆಯಿಂದ ಹೊರಗೆ ಹುಡುಕುವಂತಹ ಪ್ರಯತ್ನವನ್ನು ಮಾಡುವಿರಿ. ಕಠಿಣ ಕೆಲಸವೊಂದಕ್ಕೆ ಕೈ ಹಾಕುವ ಮನಸ್ಸಾಗಲಿದೆ, ನಿಧಾನವಾಗಿ ಯೋಚಿಸಿ ನಿರ್ಧರಿಸಿ.

ವೃಷಭ: ಸ್ವಂತ ಉದ್ಯೋಗಸ್ಥರಿಗೆ ಬಿಡುವಿಲ್ಲದೆ ಕೆಲಸಗಳು ಪೂರ್ತಿಗೊಳಿಸಬೇಕಾದ ಸಂದರ್ಭ ಎದುರಾಗುವುದು. ಒಂದೇ ಬಾರಿ ಹೆಚ್ಚು ಹಣವನ್ನು ಒಂದು ಕೆಲಸಕ್ಕೆ ವಿನಿಯೋಗಿಸುವುದರ ಬದಲು ಕಂತಿನಲ್ಲಿ ತೀರಿಸುವ ಬಗ್ಗೆ ಯೋಚಿಸಿ.

ಮಿಥುನ: ಹಳೆಯ ಸ್ನೇಹಿತರೊಂದಿಗಿನ ಭೇಟಿ, ಅವರೊಂದಿಗಿನ ಮಾತುಕತೆ, ವ್ಯವಹಾರಗಳ ಬಗ್ಗೆ ಚರ್ಚೆ ಹಾಗೂ ಹಳೆಯ ದಿನದ ನೆನಪುಗಳ ಮೆಲುಕು ಹೊಸ ಉತ್ಸಾಹವನ್ನು ಕೊಡಲಿದೆ. ಮಕ್ಕಳ ಮೇಲೆ ನಿಗಾ ಇರಲಿ.

ಕರ್ಕಾಟಕ: ಹಲವು ದಿನಗಳಿಂದ ಪರಊರಿನ ಪ್ರಯಾಣ ಹೆಚ್ಚಿನ ಆಯಾಸ ಉಂಟುಮಾಡುವುದು. ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಹೆಚ್ಚಿನ ಸಂಪಾದನೆ ಇರುವುದು. ರಾಜಕೀಯ ವಿದ್ಯಮಾನಗಳಿಂದ ಓಡಾಟವಾಗುವುದು.

ಸಿಂಹ: ಜೀವನ ಶೈಲಿಯಲ್ಲಿ ಕೆಲವೊಂದು ಬದಲಾವಣೆಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆಯು ಈ ದಿನದಿಂದಲೇ ಉಂಟಾಗಲಿದೆ. ಗೃಹೋಪಕರಣದ ತಯಾರಕರಿಗೆ ಉತ್ತಮವಾದ ಅವಕಾಶಗಳು ಲಭಿಸಲಿವೆ.

ಕನ್ಯಾ: ಸದ್ಯದ ಸಮಸ್ಯೆಗಳ ಪರಿಹಾರಕ್ಕೆ ಹೆಚ್ಚಿನ ಆಸಕ್ತಿ ವಹಿಸುವುದು ಉತ್ತಮವಾಗಿ ಕಾಣುತ್ತದೆ. ಮಗಳು ಮತ್ತು ಸೊಸೆ ಎನ್ನುವ ಭಾವನೆಯಿಲ್ಲದೆ ಸಮಾನವಾಗಿ ಕಾಣುವ ಗುಣದ ಉತ್ತಮ ಫಲಗಳು ಕಾಣಸಿಗುತ್ತವೆ.

ತುಲಾ: ಇತರರಿಗೆ ಅಸೂಯೆಯಾಗದಂತೆ ಕಾರ್ಯಗಳನ್ನು ಸಾಧಿಸಿಕೊಳ್ಳುವ ಉತ್ತಮ ಗುಣ ನಿಮ್ಮಲ್ಲಿರುವುದರಿಂದ ಯಶಸ್ಸನ್ನು ಕಾಣುವಿರಿ. ದೂರಪ್ರಯಾಣವು ಆತಂಕಕ್ಕೆ ಎಡೆ ಮಾಡಿಕೊಡಬಹುದು.

ವೃಶ್ಚಿಕ: ಕೆಲಸ ಕಾರ್ಯಗಳನ್ನು ಮಾಡುವ ರೀತಿಯನ್ನು ಒಬ್ಬರಿಗೆ ವಿಸ್ತಾರವಾಗಿ ವಿವರಿಸುವ ಮೂಲಕ ಅದರ ಚೌಕಟ್ಟು ನಿಮಗೆ ದೊರಕುತ್ತದೆ. ವಾರ್ಷಿಕವಾಗಿ ನೀವು ಆಚರಣೆ ಮಾಡುವ ದೇವತಾ ಕಾರ್ಯಗಳತ್ತ ಗಮನವನ್ನು ನೀಡಿ.

ಧನು: ಮನೆಯವರೆಲ್ಲರೂ ನಿಮ್ಮೆಲ್ಲ ಕೆಲಸ ಕಾರ್ಯಗಳಲ್ಲಿ ನಿಮ್ಮಿಚ್ಛೆಯಂತೆ ನಡೆದುಕೊಳ್ಳುವರು. ಹಿಂಸೆಯುಂಟಾಗುತ್ತದೆ ಎನ್ನಿಸುವ ವಿಚಾರದಿಂದ ಆದಷ್ಟು ದೂರ ಇರುವಂತಹ ಪ್ರಯತ್ನವನ್ನು ಮಾಡಿ.

ಮಕರ: ಮುಖ್ಯ ವಿಚಾರಗಳನ್ನು ಮರೆಯುವುದರಿಂದಾಗಿ ನಿಧಾನಗತಿ ಉಂಟಾಗಬಹುದು. ಕೆಲವೊಂದು ವಿಷಯಗಳನ್ನು ಪರಾಮರ್ಶಿಸಲೇ ಬೇಕಾದ ಸಮಯ ಬರುವುದು. ಮನಸ್ಸಿನ ದುಗುಡ ನಿವಾರಣೆಗೆ ತಾಳ್ಮೆ ಅತ್ಯವಶ್ಯ.

ಕುಂಭ: ಯೋಗಾಭ್ಯಾಸ ಹಾಗೂ ವೈದ್ಯರ ಸಲಹೆಯಿಂದ ಆರೋಗ್ಯವು ಉತ್ತಮ ರೀತಿಯಲ್ಲಿ ಸುಧಾರಿಸುವುದು. ರಕ್ತ ಸಂಬಂಧಿ ಕಾಯಿಲೆಯನ್ನು ಹೊಂದಿದವರು ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು.

ಮೀನ: ಮನದಲ್ಲಿರುವ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಬೇಕಾದ ಸಕಲ ಸಿದ್ಧತೆ ಮಾಡಿಕೊಳ್ಳಿರಿ. ಸಾಮಾಜಿಕ ಸ್ಥಾನಮಾನಗಳನ್ನು ಕಾಯ್ದುಕೊಳ್ಳುವ ಹೆಸರಿನಲ್ಲಿ ಕಟ್ಟುಪಾಡುಗಳು ಹೆಚ್ಚೆಂದು ಎನ್ನಿಸುವುದು.

ಪದಬಂಧ 5694


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ತಂದೆಯ ತಂದೆ (4)
3.ಮನಸ್ಸಿನ ಕೆಚ್ಚು (4)
5.ವಿರಾಟರಾಜನ ಸೇನಾಪತಿ (3)
6.ಕತ್ತು ತಿರಿಗಿಸುತ್ತಾ ಮಾಡಿದ ವ್ಯಾಯಾಮ (4)
7. ಸೇನಾನಾಯಕನಿವನು (4)
9.ಈ ತರ ಬಂದಿರುವ ಏರ್ಪಾಟು (4)
11.ಸಂಭ್ರಮಕ್ಕಿಲ್ಲಿ ಗರ ಬಡಿದಿದೆ! (4)
13.ಕೊನೆಗೆ ಕೈ ಕೊಟ್ಟಿರುವ ಆಳು (3)
14.ಕಾಲುನಡಿಗೆಯಿಂದ ಸಂಚರಿಸುವವನು (4)
15.ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ

2.ಹತ್ತು ಹೇಳುತ್ತಲೇ ಹೂಡಿರುವ ಸಂಚು (4)
3.ಹೂವಿನಲ್ಲಿಯ ಸಿಹಿರಸ (4)
4.ಹಣದ ಅಧಿದೇವತೆ (2)
6.ಖೋತಾ ಎಂದಾಗ ಕಾಣಿಸಿಕೊಂಡಿರುವ ನವೆ (3)
8.ಇಲ್ಲಿ ಅಂಧಕಾರವಿದೆ (3)
10.ಈತ ಕೆಟ್ಟ ನಡತೆಯವನು (4)
11.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12.ಸಿಟ್ಟು ಕೊನೆಗೆ ದೀರ್ಘವಾಗಿದೆ (2)



5693ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ನಿಷ್ಪಕ್ಷಪಾತ 4.ಆಮೋದ 5.ಮರ 7.ವಿಧ 10.ಕರಿ 13.ಪುಣ್ಯ 15.ಸಿಕತ 16.ಗಗನಚುಂಬಿ

ಮೇಲಿಂದ ಕೆಳಕ್ಕೆ: 1.ಅಕ್ಷರಸ್ಥ 2.ನಿದರ್ಶನ 3.ತಮ 4.ಆರಾಧಕ 6.ರವಿ 8.ಧನವಂತ 9.ಕ್ತರಸಿಬಿ 11.ರಿಪು 12.ಬಡನಡು 14.ಣ್ಯಗ

ಸುಡೊಕು 6079

	5		7		2		8	
						3		4
	7	8	3		9		1	
1							2	3
	2							
8		7			1		5	9
2		3	9		6	5		8
	4	6		8			9	7
	8		5		4		3	2


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6078 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಷೇರುಪೇಟೆ ವಹಿವಾಟು 20



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	22,957
ಇಂದಿನ ಅಂತ್ಯ	22,932
▼	25
ದಿನದ ಕನಿಷ್ಠ	22,871

ವಿನಿಮಯ ದರ

$ ಡಾಲರ್	83.11
£ ಪೌಂಡ್	106.05
€ ಯುರೊ	90.35
¥ ಯೆನ್ (100ಕ್ಕೆ)	53

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹78
ಮೈಸೂರು	
100ಕ್ಕೆ	₹585

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹945 (945)
ಸೂರ್ಯಕಾಂತಿ (ರಿಫೈನ್ಡ್)	₹945 (945)
ಪಾಮೋಲಿನ್	₹892 (895)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8300-8750
ದಾವಣಗೆರೆ	₹6950-6950
ಕೆ.ಆರ್. ಪೇಟೆ	₹9403-9403

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹177
ಗುಡ್ ಲಾಟ್	₹167

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹311-490
ದ್ವಿತಳಿ (ಬಿ.ವಿ)	₹305-640

ಚಿನ್ನದ ದರ ₹220, ಬೆಳ್ಳಿ ₹1,050 ಏರಿಕೆ

ನವದೆಹಲಿ (ಪಿಟಿಐ): ಸತತ ಮೂರು ದಿನಗಳಿಂದ ಇಳಿಕೆಯಾಗಿದ್ದ ಚಿನ್ನ ಮತ್ತು ಬೆಳ್ಳಿ ಧಾರಣೆಯು ಸೋಮವಾರ ಏರಿಕೆ ಕಂಡಿದೆ.

ಇಲ್ಲಿನ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ದರವು ₹220 ಏರಿಕೆಯಾಗಿ ₹72,820ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1,050 ಹೆಚ್ಚಳವಾಗಿ ₹92,850ಕ್ಕೆ ಮುಟ್ಟಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,344 ಡಾಲರ್ (ಅಂದಾಜು ₹1.94 ಲಕ್ಷ) ಮತ್ತು 30.75 ಡಾಲರ್‌ನಂತೆ (ಅಂದಾಜು ₹2,556 ಮಾರಾಟ ಆಗಿದೆ.

ಡಾಲರ್ ಬೆಲೆ ಇಳಿಕೆ, ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಹೂಡಿಕೆದಾರರು ಹಳದಿ ಲೋಹದತ್ತ ಗಮನ ನೀಡಿದ್ದಾರೆ. ಇದರಿಂದ ಚಿನ್ನದ ದರವು ಏರಿಕೆ ಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

27-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	903 (910)
ಪಾಮ್ ವಾರದ ಡೆಲಿವರಿ	890 (893)
ಸೂರ್ಯಕಾಂತಿ ಎಣ್ಣೆ ಕಚ್ಚಾ	885 (885)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹72,000 (71,525)
ಬೆಳ್ಳಿ ಕೆ.ಜಿ ₹91,000 (89,200)

ಆವರಣದಲ್ಲಿ ಶನಿವಾರದ ಧಾರಣೆ

ಸೆನ್ಸೆಕ್ಸ್ 76,009, ನಿಫ್ಟಿ 23,110 ಅಂಶ ಸಾರ್ವಕಾಲಿಕ ಗರಿಷ್ಠಕ್ಕೆ ಏರಿಕೆ; ನಂತರ ಇಳಿಕೆ

ಷೇರುಪೇಟೆ: ಸೂಚ್ಯಂಕಗಳ ಏರಿಳಿತ

ಮುಂಬೈ/ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿದ್ದವು. ಆದರೆ, ದಿನದ ವಹಿವಾಟಿನ ಅಂತ್ಯದಲ್ಲಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೂಚ್ಯಂಕಗಳು ಇಳಿಕೆ ಕಂಡವು.

ಲಾಭದ ಗಳಿಕೆಯ ಉದ್ದೇಶಕ್ಕಾಗಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾದರು. ಇದು ಸಹ ಷೇರು ಸೂಚ್ಯಂಕ ಇಳಿಕೆಗೆ ಕಾರಣವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 20 ಅಂಶ ಇಳಿಕೆಯಾಗಿ, 75,390ಕ್ಕೆ ಅಂತ್ಯಗೊಂಡಿತು. ವಹಿವಾಟಿನ ವೇಳೆ 599 ಅಂಶ ಹೆಚ್ಚಳವಾಗಿ ಸಾರ್ವಕಾಲಿಕ ಗರಿಷ್ಠ 76,009ಕ್ಕೆ ತಲುಪಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 25 ಅಂಶ ಕಡಿಮೆಯಾಗಿ 22,932ಕ್ಕೆ ಅಂತ್ಯಗೊಂಡಿತು. ದಿನದ ವಹಿವಾಟಿನಲ್ಲಿ 153 ಅಂಶ ಹೆಚ್ಚಳವಾಗಿ 23,110ಕ್ಕೆ ಏರಿಕೆಯಾಗಿತ್ತು.


ಸೆನ್ಸೆಕ್ಸ್ ಇದೇ ಮಾರ್ಚ್ 6ರಂದು 74 ಸಾವಿರ, ಏಪ್ರಿಲ್ 9ರಂದು 75 ಸಾವಿರ ಮತ್ತು ಮೇ 27ರಂದು 76 ಸಾವಿರ ಅಂಶಕ್ಕೆ ಏರಿಕೆಯಾಗಿದೆ.

ವಿಪ್ರೊ, ಎನ್‌ಟಿಪಿಸಿ, ಸನ್‌ಫಾರ್ಮಾ, ಮಹೀಂದ್ರ ಆ್ಯಂಡ್ ಮಹೀಂದ್ರ, ಐಟಿಸಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯ ಇಳಿಕೆ ಕಂಡಿವೆ. ಇಂಡಸ್‌ಇಂಡ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಬಜಾಜ್ ಫೈನಾನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಲಾರ್ಸನ್ ಆ್ಯಂಡ್ ಟೂಬ್ರೊ, ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗಳಿಕೆ ಕಂಡಿವೆ.


ಏಷ್ಯಾದ ಮಾರುಕಟ್ಟೆಯಲ್ಲಿ ಸೋಲ್, ಟೊಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕವಾಗಿ ಅಂತ್ಯಗೊಂಡವು. ಜಾಗತಿಕ ಬ್ರೆಂಟ್ ಕಚ್ಚಾ ತೈಲ ಬೆಲೆಯು ಶೇ 0.38ರಷ್ಟು ಏರಿಕೆಯಾಗಿ ಪ್ರತಿ ಬ್ಯಾರೆಲ್‌ಗೆ 82.44 ಡಾಲರ್‌ಗೆ (ಅಂದಾಜು ₹6,853) ಮುಟ್ಟಿದೆ.

ಲೋಕಸಭಾ ಚುನಾವಣೆ ಫಲಿತಾಂಶ ಜೂನ್ 4ರಂದು ಹೊರ ಬೀಳಲಿದೆ. ಇದು ಕೂಡ ಮಾರುಕಟ್ಟೆ ಮೇಲೆ ಪರಿಣಾಮ ಬೀರಿದೆ. ವಹಿವಾಟಿನಲ್ಲಿ ದಾಖಲೆಯ ಏರಿಕೆ ಕಂಡಿದ್ದ ಸೆನ್ಸೆಕ್ಸ್ ಮತ್ತು ನಿಫ್ಟಿ, ನಂತರದ ವಹಿವಾಟಿನಲ್ಲಿ ಇಳಿಕೆ ಕಂಡವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಗಳಿಕೆ ಕಂಡ ಕಂಪನಿಗಳು



ಇಳಿಕೆ ಕಂಡ ಕಂಪನಿಗಳು



ಅದಾನಿ ಪೋರ್ಟ್ಸ್ ಷೇರು ಮೌಲ್ಯ ಏರಿಕೆ

ಅದಾನಿ ಸಮೂಹದ ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ (ಎಪಿಎಸ್‌ಇಜೆಡ್) ಷೇರಿನ ಮೌಲ್ಯ ಶೇ 1ಕ್ಕಿಂತ ಹೆಚ್ಚು ಏರಿಕೆ ಆಗಿದೆ. ಈ ಮೂಲಕ 52 ವಾರಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ದಿನದ ವಹಿವಾಟಿನ ವೇಳೆ ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 2.93ರಷ್ಟು ಹೆಚ್ಚಳವಾಗಿ, ಷೇರಿನ ಬೆಲೆ ₹1,457ಕ್ಕೆ ಮುಟ್ಟಿತ್ತು. ಆದರೆ, ವಹಿವಾಟಿನ ಅಂತ್ಯದ ವೇಳೆಗೆ ಶೇ 1.13ರಷ್ಟಕ್ಕೆ ಕಡಿಮೆಯಾಗಿ, ಷೇರಿನ ಬೆಲೆ ₹1,431ಕ್ಕೆ ಇಳಿಯಿತು. ಅದಾನಿ ಪೋರ್ಟ್ಸ್ ಕಂಪನಿಯು ಮಾರುಕಟ್ಟೆ ಮೌಲ್ಯದಲ್ಲಿ ವಿಪ್ರೊ ಕಂಪನಿಯನ್ನು ಹಿಂದಿಕ್ಕಿದೆ. ಜೂನ್ 24ರಿಂದ 30 ಕಂಪನಿಗಳ ಗುಚ್ಛವಾದ ಬಿಎಸ್‌ಇ ಸೆನ್ಸೆಕ್ಸ್ ಸೂಚ್ಯಂಕಕ್ಕೆ ಅಧಿಕೃತವಾಗಿ ಸೇರ್ಪಡೆಯಾಗಲಿದೆ. ಇದರಿಂದ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ವಿಪ್ರೊ ಷೇರಿನ ಮೌಲ್ಯ ಇಳಿಕೆ: ವಿಪ್ರೊ ಷೇರಿನ ಮೌಲ್ಯ ಸೋಮವಾರ ಶೇ 2.36ರಷ್ಟು ಕಡಿಮೆಯಾಗಿ, ಪ್ರತಿ ಷೇರಿನ ಬೆಲೆ ₹452ಕ್ಕೆ ಇಳಿದಿದೆ.

ಅಶೋಕ್ ಲೇಲ್ಯಾಂಡ್: ಮಾರುಕಟ್ಟೆ ಮೌಲ್ಯಕ್ಕೆ ₹4,756 ಕೋಟಿ ಸೇರ್ಪಡೆ

ಮಾರ್ಚ್ ತ್ರೈಮಾಸಿಕದಲ್ಲಿನ ಲಾಭದ ಏರಿಕೆಯಿಂದ ಅಶೋಕ್ ಲೇಲ್ಯಾಂಡ್‌ನ ಷೇರಿನ ಮೌಲ್ಯ ಸೋಮವಾರ ಶೇ 8ರಷ್ಟು ಏರಿಕೆಯಾಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಕ್ರಮವಾಗಿ ಶೇ 7.69 ಮತ್ತು ಶೇ 7.78ರಷ್ಟಾಗಿದೆ. ಷೇರಿನ ಬೆಲೆಯು ₹226 ಮತ್ತು ₹227ಕ್ಕೆ ಮುಟ್ಟಿದೆ. ಷೇರಿನ ಮೌಲ್ಯ ಏರಿಕೆಯಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ (ಎಂ-ಕ್ಯಾಪ್) ಒಂದೇ ದಿನ ₹4,756 ಕೋಟಿ ಸೇರ್ಪಡೆಯಾಗಿದೆ. ಕಂಪನಿಯ ಒಟ್ಟು ಎಂ-ಕ್ಯಾಪ್ ₹66,581 ಕೋಟಿಗೆ ಮುಟ್ಟಿದೆ.

2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿ ₹933 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿ ₹799 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 16ರಷ್ಟು ಹೆಚ್ಚಾಗಿದೆ. ಇದರಿಂದ ಷೇರಿನ ಮೌಲ್ಯ ಏರಿಕೆಯಾಗಿದೆ.

ಸುದ್ದಿ 2 ನಿಮಿಷ

ಎಲ್‌ಐಸಿ: ₹13,763 ಕೋಟಿ ಲಾಭ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) 2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹13,763 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಇದೇ ಅವಧಿಯಲ್ಲಿ ನಿಗಮವು ₹13,428 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 2ರಷ್ಟು ಏರಿಕೆಯಾಗಿದೆ. ವರಮಾನವು ₹2 ಲಕ್ಷ ಕೋಟಿಯಿಂದ ₹2.50 ಲಕ್ಷ ಕೋಟಿಗೆ ಹೆಚ್ಚಳವಾಗಿದೆ ಎಂದು ನಿಗಮವು ಷೇರುಪೇಟೆಗೆ ಸೋಮವಾರ ತಿಳಿಸಿದೆ.



ಮೊದಲ ವರ್ಷದ ಎಲ್‌ಐಸಿ ಕಂತು ತುಂಬುವಿಕೆ ವರಮಾನದಲ್ಲಿ ಸುಧಾರಣೆಯಾಗಿದ್ದು, ₹12,811 ಕೋಟಿಯಿಂದ ₹13,810 ಕೋಟಿಗೆ ಏರಿಕೆಯಾಗಿದೆ. ನವೀಕರಿಸಿದ ಪ್ರೀಮಿಯಂ ಮೂಲಕ ಗಳಿಸಿದ ವರಮಾನವು ₹76,009 ಕೋಟಿಯಿಂದ ₹77,368 ಕೋಟಿಗೆ ಹೆಚ್ಚಳವಾಗಿದೆ.2023–24ರ ಪೂರ್ಣ ಹಣಕಾಸು ವರ್ಷದಲ್ಲಿ ನಿಗಮದ ಲಾಭವು ₹40,676 ಕೋಟಿಗೆ ಏರಿಕೆಯಾಗಿದೆ. ಹಿಂದಿನ ಇದೇ ಅವಧಿಯಲ್ಲಿ ₹36,397 ಕೋಟಿ ಲಾಭ ಗಳಿಸಿತ್ತು ಎಂದು ತಿಳಿಸಿದೆ.

ತಾಯಿಹಾಲು ಮಾರಾಟಕ್ಕೆ ಅನುಮತಿ ಇಲ್ಲ: ಎಫ್‌ಎಸ್‌ಎಸ್‌ಎಐ

ನವದೆಹಲಿ (ಪಿಟಿಐ): ತಾಯಿಹಾಲನ್ನು ಮಾರಾಟ ಮಾಡುವುದರ ವಿರುದ್ಧ ಆಹಾರ ಪದಾರ್ಥ ಮಾರಾಟಗಾರರಿಗೆ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಎಚ್ಚರಿಕೆ ನೀಡಿದೆ. ತಾಯಿಹಾಲು ಮಾರಾಟ ಮಾಡುವುದಕ್ಕೆ ಅನುಮತಿ ನೀಡಬಾರದು ಎಂದು ರಾಜ್ಯಗಳು ಮತ್ತು ಕೇಂದ್ರ ಸರ್ಕಾರಗಳ ಪರವಾನಗಿ ನೀಡುವ ಸಂಸ್ಥೆಗಳಿಗೆ ಅದು ನಿರ್ದೇಶಿಸಿದೆ.

ಕೆಲ ಆಹಾರ ತಯಾರಿಕಾ ಸಂಸ್ಥೆಗಳು ತೆರೆದ ಮಾರುಕಟ್ಟೆಯಲ್ಲಿ ಎದೆಹಾಲನ್ನು ಮಾರಾಟ ಮಾಡುತ್ತಿವೆ ಎಂಬ ದೂರು ಆಧರಿಸಿ ಎಫ್‌ಎಸ್‌ಎಸ್‌ಎಐ, 'ಮಾನವ ಹಾಲು ಮತ್ತು ಅದರ ಉತ್ಪನ್ನಗಳ ಅನಧಿಕೃತ ವಾಣಿಜ್ಯೀಕರಣ'ಕ್ಕೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನು ನೀಡಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಲಹೆ ನೀಡಿರುವ ಎಫ್‌ಎಸ್‌ಎಸ್‌ಎಐ, ಮಾನವನ ಹಾಲಿನ ವಾಣಿಜ್ಯೀಕರಣ ಚಟುವಟಿಕೆಗಳು ಕಂಡುಬಂದರೆ ಕೂಡಲೇ ಅದಕ್ಕೆ ತಡೆಯೊಡ್ಡಬೇಕು. ಈ ನಿಯಮ ಉಲ್ಲಂಘಿಸುವ ಆಹಾರ ಪದಾರ್ಥ ವಾಣಿಜ್ಯೋದ್ಯಮಿಗಳ ವಿರುದ್ಧ ಎಫ್‌ಎಸ್‌ಎಸ್ ಕಾಯ್ದೆ– 2006 ಅಡಿ ಕ್ರಮ ಕೈಗೊಳ್ಳಬೇಕು ಎಂದಿದೆ.

ಭೂಕುಸಿತ: ಮೃತರ ಸಂಖ್ಯೆ 2,000ಕ್ಕೆ ಏರಿಕೆ

ಮೆಲ್ಬರ್ನ್ (ಎಪಿ): ಪಪುವಾ ನ್ಯೂಗಿನಿಯಲ್ಲಿ ಶುಕ್ರವಾರ ಸಂಭವಿಸಿದ ಭಾರಿ ಭೂಕುಸಿತದಲ್ಲಿ 2,000ಕ್ಕೂ ಹೆಚ್ಚು ಜನರು ಸಮಾಧಿಯಾಗಿದ್ದಾರೆ ಎಂದು ಹೇಳಿರುವ ಅಲ್ಲಿನ ಸರ್ಕಾರ, ಅಂತರ ರಾಷ್ಟ್ರೀಯ ನೆರವನ್ನು ಕೋರಿದೆ.

ಈ ದುರಂತದಲ್ಲಿ ಸುಮಾರು 670 ಜನರು ಮೃತಪಟ್ಟಿರಬಹುದು ಎಂದು ವಿಶ್ವಸಂಸ್ಥೆ ಭಾನುವಾರವಷ್ಟೇ ಅಂದಾಜಿಸಿತ್ತು. ಆದರೆ ಪಪುವಾ ನ್ಯೂಗಿನ ಸರ್ಕಾರ ಪ್ರಕಟಿಸಿರುವ ಅಂಕಿಅಂಶವು, ವಿಶ್ವಸಂಸ್ಥೆಯ ಅಂದಾಜಿಗಿಂತ ಮೂರು ಪಟ್ಟು ಹೆಚ್ಚಾಗಿದೆ.

ದುರಂತದಲ್ಲಿ ದೊಡ್ಡ ಪ್ರಮಾಣದಲ್ಲಿ ಸಾವು–ನೋವು ಸಂಭವಿಸಿದ್ದು, ದಿನೇ ದಿನೇ ಮೃತರ ಅಂದಾಜು ಸಂಖ್ಯೆಯಲ್ಲಿ ವ್ಯಾಪಕ ಬದಲಾವಣೆಗಳಾಗುತ್ತಿವೆ. ಪಪುವಾ ನ್ಯೂಗಿನಿ ನೆರೆ ರಾಷ್ಟ್ರವಾದ ಆಸ್ಟ್ರೇಲಿಯಾ ಸೋಮವಾರ ವಿಮಾನ ಮತ್ತು ಇತರ ಉಪಕರಣಗಳೊಂದಿಗೆ ನೆರವಿಗೆ ಧಾವಿಸಿದೆ.

'ಪಪುವಾ ನ್ಯೂಗಿನಿ ಸರ್ಕಾರದ ಪ್ರತಿನಿಧಿಗಳೊಂದಿಗೆ ಶುಕ್ರವಾರದಿಂದ ಆಸ್ಟ್ರೇಲಿಯಾ ಸರ್ಕಾರ ಸಂಪರ್ಕದಲ್ಲಿದೆ. ನಾವು ಅಲ್ಲಿ ಸಂಕಷ್ಟದಲ್ಲಿರುವ ಜನರ ರಕ್ಷಣೆಗೆ ಅಗತ್ಯ ನೆರವನ್ನು ನೀಡಲಿದ್ದೇವೆ. ಏರ್‌ಲಿಫ್ಟ್ ಸೇರಿದಂತೆ ಇತರ ರೀತಿಯಲ್ಲಿ ಸಹಾಯ ಮಾಡಲಿದ್ದೇವೆ' ಎಂದು ಆಸ್ಟ್ರೇಲಿಯಾದ ರಕ್ಷಣಾ ಸಚಿವ ರಿಚರ್ಡ್ ಮಾರ್ಲೆಸ್ ಹೇಳಿದ್ದಾರೆ.

ಭೂಕುಸಿತ ಸಂಭವಿಸಿರುವ ಯಂಬಲಿ ಗ್ರಾಮವು ಪ್ರಾಂತೀಯ ರಾಜಧಾನಿ ವಾಬಾಗ್‌ನಿಂದ 60 ಕಿ.ಮೀ. ದೂರದಲ್ಲಿದೆ. ವಾಬಾಗ್‌ನಲ್ಲಿ ರಾತ್ರಿ ಎರಡು ಗಂಟೆ ಭಾರಿ ಮಳೆ ಸುರಿದಿದೆ. ಆದರೆ, ಸದ್ಯಕ್ಕೆ ಯಂಬಲಿ ಮತ್ತು ಸುತ್ತಮುತ್ತಲಿನ ಪ್ರದೇಶದ ಹವಾಮಾನದ ವರದಿ ಲಭ್ಯವಾಗಿಲ್ಲ.

ಭೂಕುಸಿತ ಸಂಭವಿಸಿದ ಪ್ರದೇಶದಲ್ಲಿ ಭೂಮಿಯ ನಡುವೆ ನೀರು ಹರಿಯುತ್ತಿದ್ದು, ಮತ್ತಷ್ಟು ಭೂಕುಸಿತ ಸಂಭವಿಸುವ ಅಪಾಯ ಇದೆ ಎಂದು ವಿಶ್ವಸಂಸ್ಥೆಯ ಅಂತರ ರಾಷ್ಟ್ರೀಯ ವಲಸೆ ಸಂಸ್ಥೆಯ ಅಧಿಕಾರಿ ಸರ್ಹಾನ್ ಅಕ್ಟೊಪ್ರಾಕ್ ಹೇಳಿದ್ದಾರೆ.

1,739 ಪದವಿ ಪ್ರದಾನ ಮಾಡಿದ ಉಪರಾಷ್ಟ್ರಪತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರದಲ್ಲಿ ಸೋಮವಾರ ನಡೆದ ಕೆಎಲ್‌ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ಕಾಹೇರ್) 14ನೇ ಘಟಿಕೋತ್ಸವದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಘಟಿಕೋತ್ಸವ ಭಾಷಣ ಮಾಡಿದರು. ಒಟ್ಟು 1,739 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

ಕಾಹೇರ್‌ನಿಂದ ಇದೇ ಮೊದಲ ಬಾರಿಗೆ ನೀಡಲಾದ 'ಗೌರವ ಡಾಕ್ಟರೇಟ್' ಅನ್ನು ಅಮೆರಿಕದ ಫಿಲಡೆಲ್ಫಿಯಾದ ಥಾಮಸ್ ಜೆಫರ್ಸನ್ ವಿಶ್ವವಿದ್ಯಾಲಯದ ವೈಸ್ ಪ್ರೊವೊಸ್ಟ್ ಡಾ.ರಿಚರ್ಡ್ ಜಾಕೋಬ್ ಡರ್ಮನ್ ಅವರಿಗೆ ಪ್ರದಾನ ಮಾಡಿದರು. ಆರೋಗ್ಯ ವಿಜ್ಞಾನ ಕ್ಷೇತ್ರದಲ್ಲಿನ ಸಂಶೋಧನೆ ಪರಿಗಣಿಸಿ ಈ ಪದವಿ ನೀಡಲಾಯಿತು. ಡರ್ಮನ್ ಅವರು ಪದವಿಯನ್ನು ತಮ್ಮ ಸಹ ಸಂಶೋಧಕರಾಗಿದ್ದ ಡಾ.ಬಿ.ಎಸ್.ಕೊಡಕಣಿ ಅವರಿಗೆ ಸಮರ್ಪಿಸಿದರು.



ಬೆಳಗಾವಿಯಲ್ಲಿ ಸೋಮವಾರ ನಡೆದ 'ಕಾಹೇರ್' 14ನೇ ಘಟಿಕೋತ್ಸವದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಅಮೆರಿಕದ ಥಾಮಸ್ ಜೆಫರ್ಸನ್ ವಿಶ್ವವಿದ್ಯಾಲಯದ ವೈಸ್ ಪ್ರೊವೊಸ್ಟ್ ಡಾ.ರಿಚರ್ಡ್ ಜಾಕೋಬ್ ಡರ್ಮನ್ ಅವರಿಗೆ 'ಗೌರವ ಡಾಕ್ಟರೇಟ್' ಪ್ರದಾನ ಮಾಡಿದರು. ಕುಲಾಧಿಪತಿ ಪ್ರಭಾಕರ ಕೋರೆ, ಜಗದೀಪ್ ಧನಕರ್ ಪತ್ನಿ ಸುದೇಶ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಕುಲಪತಿ ಡಾ.ನಿತಿನ್ ಗಂಗಾನೆ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

45 ಚಿನ್ನದ ಪದಕಗಳು, 30 ಪಿಎಚ್‌ಡಿಗಳು, 13 ಸ್ನಾತಕೋತ್ತರ (ಡಿ.ಎಂ/ ಎಂ.ಸಿಎಚ್), 644 ಸ್ನಾತಕೋತ್ತರ ಪದವಿ, 1,023 ಪದವಿ, 9 ಸ್ನಾತಕೋತ್ತರ ಡಿಪ್ಲೊಮಾ, 4 ಡಿಪ್ಲೊಮಾ, 5 ಫೆಲೋಶಿಪ್ ಮತ್ತು 11 ಪ್ರಮಾಣಪತ್ರ ಕೋರ್ಸ್‌ಗಳನ್ನೂ ಉಪರಾಷ್ಟ್ರಪತಿ ಪ್ರದಾನ ಮಾಡಿದರು.

ಕಾಹೇರ್‌ನ ಕುಲಾಧಿಪತಿ ಪ್ರಭಾಕರ ಕೋರೆ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಜಗದೀಪ್ ಧನಕರ ಪತ್ನಿ ಸುದೇಶ, ಕುಲಪತಿ ಡಾ.ನಿತಿನ್ ಗಂಗಾನೆ, ಪರೀಕ್ಷಾ ನಿಯಂತ್ರಕಿ ಡಾ.ಚಂದ್ರಾ ಮೆಟಗುಡ್ಡ ವೇದಿಕೆಯಲ್ಲಿದ್ದರು.

ಜಾಹೀರಾತು: ಕಲ್ಕತ್ತಾ ಹೈಕೋರ್ಟ್ ಆದೇಶ ಎತ್ತಿಹಿಡಿದ 'ಸುಪ್ರೀಂ'

ನವದೆಹಲಿ(ಪಿಟಿಐ): ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವವರೆಗೆ ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ಟಿಎಂಸಿ ಮುಖಂಡರು ಮತ್ತು ಕಾರ್ಯಕರ್ತರ ವಿರುದ್ಧದ ಯಾವುದೇ ಜಾಹೀರಾತುಗಳನ್ನು ಪ್ರಕಟಿಸಬಾರದು ಎಂದು ಕಲ್ಕತ್ತಾ ಹೈಕೋರ್ಟ್‌ನ ಏಕ ಸದಸ್ಯ ಪೀಠ ನೀಡಿರುವ ತೀರ್ಪಿನಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.



ಇದರಿಂದಾಗಿ ಕಲ್ಕತ್ತಾ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂ ಮೊರೆ ಹೋಗಿದ್ದ ಬಿಜೆಪಿಗೆ ತೀವ್ರ ಹಿನ್ನಡೆಯಾಗಿದೆ.

ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಮತ್ತು ಕೆ.ವಿ. ವಿಶ್ವನಾಥ ಅವರಿದ್ದ ಪೀಠವು, 'ಈ ಜಾಹೀರಾತುಗಳನ್ನು ನಾವು ನೋಡಿದ್ದೇವೆ. ಮೇಲ್ನೋಟಕ್ಕೆ ಬಿಜೆಪಿ ಪ್ರಕಟಿಸಲು ಮುಂದಾಗಿರುವ ಜಾಹೀರಾತುಗಳು ಕೆಲವು ವ್ಯಕ್ತಿಗಳಿಗೆ ಅಗೌರವ ತೋರುವಂತಿದೆ. ಇದು ಮತ್ತಷ್ಟು ತೀವ್ರತೆ ಪಡೆಯಲು ಅವಕಾಶ ನೀಡುವುದಿಲ್ಲ' ಎಂದು ಹೇಳಿದೆ.

ಹೀಗಾಗಿ, ಈ ಕುರಿತು ಕಲ್ಕತ್ತಾ ಹೈಕೋರ್ಟ್‌ನ ಏಕಸದಸ್ಯ ಪೀಠದ ಮುಂದೆಯೇ ಉತ್ತರಿಸುತ್ತೇನೆ ಎಂದ ಬಿಜೆಪಿಯು ತನ್ನ ಅರ್ಜಿಯನ್ನು ಹಿಂಪಡೆಯಿತು.

ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗುವ ಜೂನ್ 4ರವರೆಗೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಜಾಹೀರಾತುಗಳನ್ನು ಪ್ರಕಟಿಸದಂತೆ ಮೇ 20ರಂದು ಏಕ ಸದಸ್ಯ ನ್ಯಾಯಪೀಠ ಬಿಜೆಪಿಗೆ ಸೂಚನೆ ನೀಡಿತ್ತು. ಅಲ್ಲದೆ, ಪಶ್ಚಿಮ ಬಂಗಾಳದ ಆಡಳಿತಾರೂಢ ಟಿಎಂಸಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರ ವಿರುದ್ಧದ ಜಾಹೀರಾತುಗಳನ್ನೂ ಪ್ರಕಟಿಸಬಾರದು ಎಂದು ಸೂಚಿಸಿತ್ತು.

ತನ್ನ ಕಾರ್ಯಕರ್ತರು ಮತ್ತು ಮುಖಂಡರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಹೊರಿಸಿ, ಪ್ರಕಟಿಸುವ ಜಾಹೀರಾತುಗಳನ್ನು ನಿರ್ಬಂಧಿಸುವಂತೆ ಕೋರಿ ಟಿಎಂಸಿ ನ್ಯಾಯಾಲಯದ ಮೊರೆ ಹೋಗಿತ್ತು.

ಅಮೆರಿಕ: ಬಿರುಗಾಳಿಗೆ 19 ಜನ ಸಾವು

ಟೆಕ್ಸಾಸ್ (ಎಪಿ): ಅಮೆರಿಕದ ಮಧ್ಯ ಭಾಗದಲ್ಲಿರುವ ಟೆಕ್ಸಾಸ್, ಒಕ್ಲಹೋಮಾ ಮತ್ತು ಅರ್ಕಾನ್ಸಸ್‌ನಲ್ಲಿ ತೀವ್ರ ಹವಾಮಾನ ವೈಪರೀತ್ಯ ಉಂಟಾಗಿದ್ದು, ಶನಿವಾರ ರಾತ್ರಿ ಬೀಸಿದ ಪ್ರಬಲವಾದ ಸುಂಟರಗಾಳಿ ಮತ್ತು ಬಿರುಗಾಳಿಯಿಂದಾಗಿ ಕನಿಷ್ಠ 19 ಜನರು ಸಾವಿಗೀಡಾಗಿದ್ದಾರೆ.

ಗಾಳಿಯ ರಭಸಕ್ಕೆ ಅನೇಕ ಮನೆಗಳು ಹಾನಿಗೊಳಗಾಗಿದ್ದು, ಬಹುತೇಕ ಕಡೆ ವಿದ್ಯುತ್ ಕಡಿತಗೊಂಡಿದೆ. ಟೆಕ್ಸಾಸ್‌ನ ಕೂಕ್ ಕೌಂಟಿಯಲ್ಲಿ ಏಳು ಜನ ಮೃತಪಟ್ಟಿದ್ದಾರೆ.

ಮೃತರಲ್ಲಿ ಎರಡು ಮತ್ತು ಐದು ವರ್ಷ ವಯಸ್ಸಿನ ಇಬ್ಬರು ಮಕ್ಕಳು ಮತ್ತು ಒಂದೇ ಕುಟುಂಬದ ಮೂವರು ಸೇರಿದ್ದಾರೆ. ನಾಪತ್ತೆಯಾಗಿರುವ ಹಲವರಿಗಾಗಿ ಭಾನುವಾರದಿಂದ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಮೃತರ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಕೂಕ್ ಕೌಂಟಿ ಶೆರಿಫ್ ರಾಯ್ ಸಪ್ಪಿಂಗ್ಟನ್ ಕಳವಳ ವ್ಯಕ್ತಪಡಿಸಿದ್ದಾರೆ.

ದಾಳಿ: ಗಾಜಾದ 45 ಮಂದಿ ಸಾವು

ದೇರ್– ಅಲ್– ಬಾಲಾ (ಗಾಜಾ ಪಟ್ಟಿ): ರಫಾ ಮೇಲೆ ಇಸ್ರೇಲ್ ಭಾನುವಾರ ನಡೆಸಿದ ವಾಯುದಾಳಿಯಲ್ಲಿ ಕನಿಷ್ಠ 45 ಮಂದಿ ಮೃತಪಟ್ಟಿದ್ದಾರೆ ಮತ್ತು ನಿರಾಶ್ರಿತರು ನೆಲಸಿದ್ದ ಟೆಂಟ್‌ಗಳಿಗೆ ಹಾನಿಯಾಗಿದೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಕಾರ್ಯಕರ್ತರು ತಿಳಿಸಿದ್ದಾರೆ.

ಇನ್ನೂ ಹಲವರು ಬೆಂಕಿಗೀಡಾದ ಅವಶೇಷಗಳ ಅಡಿ ಸಿಲುಕಿದ್ದಾರೆ. ಮೃತರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು. ಅಲ್ಲದೇ, ಹತ್ತಾರು ಮಂದಿ ಗಾಯಗೊಂಡಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವರು ತಿಳಿಸಿದ್ದಾರೆ.

ದಾಳಿ ನಡೆದಿರುವ ಸ್ಥಳದಲ್ಲಿ ಭಾರಿ ಹಾನಿಯಾಗಿರುವುದು ಚಿತ್ರಗಳಿಂದ ತಿಳಿದುಬಂದಿದೆ.

ದಾಳಿ ನಡೆಸಿರುವುದನ್ನು ಖಚಿತಪಡಿಸಿರುವ ಇಸ್ರೇಲ್, 'ಹಮಾಸ್ ಬಂಡುಕೋರರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ಇಬ್ಬರು ಹಿರಿಯ ಬಂಡುಕೋರರ ಹತ್ಯೆ ಮಾಡಲಾಗಿದೆ. ನಾಗರಿಕರು ಗಾಯಗೊಂಡಿದ್ದಾರೆ ಎಂಬ ಕುರಿತ ವರದಿಗಳನ್ನು ಪರಿಶೀಲಿಸಲಾಗುತ್ತಿದೆ' ಎಂದಿದೆ.

ರಫಾ ಮೇಲೆ ದಾಳಿ ನಡೆಸದಂತೆ ಅಂತರರಾಷ್ಟ್ರೀಯ ನ್ಯಾಯಾಲಯ ಇಸ್ರೇಲ್‌ಗೆ ಆದೇಶ ನೀಡಿದ ಎರಡೇ ದಿನಗಳಲ್ಲಿ ಇಸ್ರೇಲ್ ಈ ದಾಳಿ ನಡೆಸಿದೆ. ಹೀಗಾಗಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಈ ನಡೆಗೆ ಖಂಡನೆ ವ್ಯಕ್ತವಾಗಿದೆ.

ಅಡಿಕೆ ಧಾರಣೆ

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಚಿತ್ರದುರ್ಗ	
ಅಪಿ	52629-53059
ಬೆಟ್ಟೆ	37019-37499
ಕೆಂಪುಗೋಟು	29509-29910
ರಾಶಿ	52139-52569
ಕುಮಟ	
ಚಿಪ್ಪು	25069-30099
ಕೋಕ	13569-27099
ಫ್ಯಾಕ್ಟರಿ	11509-20829
ಹಳೆಚಾಲಿ	37599-39399
ಹೊಸಚಾಲಿ	31099-35609
ಪುತ್ತೂರು	
ಹೊಸತು	26500-38000
ಸಾಗರ	
ಬಿಳಿಗೋಟು	19269-30211
ಚಾಲಿ	30899-36539
ಕೋಕ	18989-31673
ಕೆಂಪುಗೋಟು	25599-36119
ರಾಶಿ	31699-53299
ಸಿಪ್ಪೆಗೋಟು	14209-21249
ಶಿವಮೊಗ್ಗ	
ಬೆಟ್ಟೆ	35609-54611
ಗೊರಬಲು	20009-36089
ರಾಶಿ	28508-53599
ಸರಕು	62259-66396
ಸಿದ್ದಾಪುರ	
ಬಿಳಿಗೋಟು	26599-29500
ಚಾಲಿ	33019-36609
ಕೋಕ	25699-28699
ಹಳೆಚಾಲಿ	36009-37239
ಕೆಂಪುಗೋಟು	26600-28899
ರಾಶಿ	42899-49699
ತಟ್ಟಿಬೆಟ್ಟೆ	37489-47609
ಶಿರಸಿ	
ಬೆಟ್ಟೆ	38510-48499
ಬಿಳಿಗೋಟು	23499-31619
ಚಾಲಿ	34208-38611
ಕೆಂಪುಗೋಟು	25699-30500
ರಾಶಿ	46518-51399
ಯಲ್ಲಾಪುರ	
ಅಪಿ	56499-56899
ಬಿಳಿಗೋಟು	23612-31899
ಹೊಸಚಾಲಿ	32019-38277
ಕೆಂಪುಗೋಟು	26109-34350
ರಾಶಿ	43810-53429
ತಟ್ಟಿಬೆಟ್ಟೆ	34899-43379
ಕೋಕ	11899-29112

ಬಾನೆಟ್ ಮೇಲೆ ವ್ಯಕ್ತಿ ಮಲಗಿಸಿ ಕಾರು ಚಾಲನೆ; ಬಾಲಕನಿಂದ ಸ್ಟಂಟ್

ಠಾಣೆ (ಪಿಟಿಐ): ಪುಣೆಯಲ್ಲಿನ ಪೋಶೆ ಕಾರು ಅಪಘಾತ ತೀವ್ರ ಚರ್ಚೆಯಲ್ಲಿ ಇರುವಂತೆಯೇ, ವ್ಯಕ್ತಿಯೊಬ್ಬ ಬಾನೆಟ್‌ನ ಮೇಲೆ ಮಲಗಿರುವಂತೆಯೇ, 17 ವರ್ಷದ ಬಾಲಕ ಬಿಎಂಡಬ್ಲ್ಯು ಕಾರನ್ನು ವೇಗವಾಗಿ ಚಲಾಯಿಸಿ 'ಸ್ಟಂಟ್' ಪ್ರದರ್ಶಿಸಿರುವ ಘಟನೆ ಇಲ್ಲಿ ನಡೆದಿದೆ.

ಕಾರು ಚಾಲನೆಯ 'ಸ್ಟಂಟ್'ನ ವಿಡಿಯೊ ಜಾಲತಾಣದಲ್ಲಿ ಹರಿದಾಡಿದಂತೆಯೇ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಬಾನೆಟ್‌ನ ಮೇಲೆ ಮಲಗಿ ಬಾಲಕನ 'ಸ್ಟಂಟ್'ಗೆ ಸಹಕರಿಸಿದ್ದ ಶುಭಂ ಮಿಥಿಲಾ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಬಾಲಕ ಹಾಗೂ ಆತನ ತಂದೆ, ಕಾರಿನ ಮಾಲೀಕ ನಿವೃತ್ತ ಸರ್ಕಾರಿ ಅಧಿಕಾರಿ ವಿರುದ್ಧ ಮೊಕದ್ದಮೆ ದಾಖಲಿಸಿದ್ದಾರೆ.

ಸಂಸದೆ ಸ್ವಾತಿ ವಿರುದ್ಧ ಕೇಜ್ರಿವಾಲ್ ಮಾಜಿ ಸಹಾಯಕನಿಂದ ಹಲ್ಲೆ ಆರೋಪ

ಬಿಭವ್ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ಎಎಪಿಯ ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಮೇಲೆ ಹಲ್ಲೆ ಮಾಡಿದ ಆರೋಪ ಹೊತ್ತಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಎರಡೂ ಕಡೆಯ ವಾದವನ್ನು ಆಲಿಸಿದ ನ್ಯಾಯಾಧೀಶ ಗೌರವ್ ಗೋಯಲ್ ಅವರು ಸೋಮವಾರ ತನ್ನ ತೀರ್ಪನ್ನು ಪ್ರಕಟಿಸಿದ್ದು, ಬಿಭವ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು.

ವಿಚಾರಣೆ ವೇಳೆ ಸ್ವಾತಿ ಅವರು, ತಮ್ಮ ವಕೀಲರ ಮೂಲಕ 'ನನಗೆ ಅತ್ಯಾಚಾರ ಮತ್ತು ಕೊಲೆ ಬೆದರಿಕೆಗಳು ಬರುತ್ತಿವೆ. ಎಎಪಿ ನಾಯಕರು ನನ್ನನ್ನು ಬಿಜೆಪಿ ಏಜೆಂಟ್ ಎಂದು ಕರೆಯುತ್ತಿದ್ದಾರೆ. ಎಎಪಿಯು ಸಾಮಾಜಿಕ ಮಾಧ್ಯಮದಲ್ಲಿ ಟ್ರೋಲ್‌ಗಳ ಅತಿದೊಡ್ಡ ಯಂತ್ರವನ್ನು ಹೊಂದಿದೆ. ಬಿಭವ್ ಬಿಡುಗಡೆಯಾದರೆ ತಮಗೆ ಜೀವ ಬೆದರಿಕೆ ಇದೆ ಹಾಗೂ ತಮ್ಮ ಕುಟುಂಬಕ್ಕೆ ಗಂಭೀರ ಅಪಾಯವಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಘಟನೆ ಕುರಿತು ಯೂಟ್ಯೂಬರ್‌ವೊಬ್ಬರು, ಏಕಪಕ್ಷೀಯವಾದ ವಿಡಿಯೊವೊಂದನ್ನು ಮಾಡಿದ್ದಾರೆ. ಬಳಿಕ ನನಗೆ ಬೆದರಿಕೆಗಳು ಬರಲಾರಂಭಿಸಿವೆ ಎಂದರು.



ಬಿಭವ್ ಕುಮಾರ್



ಸ್ವಾತಿ ಮಾಲಿವಾಲ್

ಮೇ 13ರಂದು ನಾನು ಮುಖ್ಯಮಂತ್ರಿ ಕೇಜ್ರಿವಾಲ್ ಅವರ ನಿವಾಸಕ್ಕೆ ತೆರಳಿದಾಗ ನನ್ನ ಮೇಲೆ ಬಿಭವ್ ಹಲ್ಲೆ ಮಾಡಿದ್ದಾರೆ ಎಂದು ಸ್ವಾತಿ ಆರೋಪಿಸಿದ್ದಾರೆ. ಮೇ 13ನೇ ದಿನಾಂಕದಂದು ಸ್ವಾತಿ ಅವರು ಕೇಜ್ರಿವಾಲ್ ನಿವಾಸದಲ್ಲಿರುವ ಕೆಲ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ವಿಡಿಯೊವೊಂದರಲ್ಲಿ ಸ್ವಾತಿ ಅವರು ಭದ್ರತಾ ಸಿಬ್ಬಂದಿಯೊಂದಿಗೆ ವಾಗ್ವಾದದಲ್ಲಿ ತೊಡಗಿದ್ದರೆ, ಮತ್ತೊಂದರಲ್ಲಿ ಅವರು ನಿವಾಸದಿಂದ ಹೊರನಡೆಯುತ್ತಿರುವ ದೃಶ್ಯವಿದೆ.

ಕುಮಾರ್ ಅವರು ಬಂಧಿತರಾಗಿದ್ದರೂ ಸ್ವಾತಿ ಅವರಿಗೆ ಬೆದರಿಕೆಗಳು ಬರುತ್ತಿವೆ. ಅಲ್ಲದೇ ಅವರು ಘಟನೆಯ ದಿನದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಅಳಿಸಿದ್ದಾರೆ ಎಂದು ಸ್ವಾತಿ ಪರ ವಕೀಲರು ಆರೋಪಿಸಿದರು.

ಕುಮಾರ್ ಅವರು ಯಾವುದೇ ಸಾಕ್ಷ್ಯಗಳನ್ನು ನಾಶ ಮಾಡುವ ಸಾಧ್ಯತೆ ಇಲ್ಲ ಹಾಗೂ ಅವರು ಪೊಲೀಸರ ತನಿಖೆಗೆ ಸಹಕರಿಸಿದ್ದಾರೆ ಎಂದು ಕುಮಾರ್ ಪರ ವಕೀಲರು ವಾದ ಮಂಡಿಸಿದರು.

ಹೈಕೋರ್ಟ್ ಮೊರೆ: ನಗರ ನ್ಯಾಯಾಲಯವು ತಮ್ಮ ಜಾಮೀನು ಅರ್ಜಿಯನ್ನು ತಿರಸ್ಕೃತಗೊಳಿಸಿರುವುದನ್ನು ಪ್ರಶ್ನಿಸಿ ಬಿಭವ್ ಕುಮಾರ್ ಹೈಕೋರ್ಟ್ ಮೆಟ್ಟಿಲೇರಲಿದ್ದಾರೆ ಎಂದು ಎಎಪಿ ಸೋಮವಾರ ತಿಳಿಸಿದೆ.

'ಸಿಎಂ ನಿವಾಸಕ್ಕೆ ಸ್ವಾತಿ ಬಂದ ಬಳಿಕ ಬಿಭವ್‌ನ ಕರೆಯಲಾಗಿದೆ'

ಸ್ವಾತಿ ಮಲಿವಾಲ್ ಅವರು ಮುಖ್ಯಮಂತ್ರಿ ನಿವಾಸಕ್ಕೆ ಆಗಮಿಸಿದ ನಂತರ ಬಿಭವ್ ಕುಮಾರ್ ಅವರನ್ನು ಅಲ್ಲಿಗೆ ಕರೆದಿರುವುದು ನಮ್ಮ ಗಮನಕ್ಕೆ ಬಂದಿದೆ. ಯಾರ ನಿರ್ದೇಶನದ ಮೇರೆಗೆ ಬಿಭವ್ ಅಲ್ಲಿಗೆ ಬಂದರು ಎಂಬುದನ್ನು ಪತ್ತೆ ಮಾಡಲು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೇರಿದಂತೆ ಸಂಬಂಧಿತ ವ್ಯಕ್ತಿಗಳ ಕರೆ ವಿವರಗಳ ದಾಖಲೆಗಳನ್ನು ತೆಗೆದುಕೊಂಡು ತನಿಖೆ ನಡೆಸುವಂತೆ ಮಹಿಳಾ ಆಯೋಗವು ದೆಹಲಿ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದೆ.

'ಬಿಭವ್ ಸಾಮಾನ್ಯ ವ್ಯಕ್ತಿಯಲ್ಲ'

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಬಿಭವ್ ಕುಮಾರ್ ವಿರುದ್ಧ ಸ್ವಾತಿ ಅನೇಕ ಆರೋಪಗಳನ್ನು ಮಾಡಿದ್ದಾರೆ.

'ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ಅವರು ತಮ್ಮ ಸಹಾಯಕ ಬಿಭವ್ ಕುಮಾರ್ ಅವರನ್ನು ರಕ್ಷಿಸುತ್ತಿದ್ದಾರೆ. ಕೇಜ್ರಿವಾಲ್, ಆರೋಪಿಗಳೊಂದಿಗೆ (ಬಿಭವ್) ತಿರುಗಾಡುತ್ತಾರೆ ಮತ್ತು ಅವರನ್ನು ಲಖನೌ ಹಾಗೂ ಇತರ ಸ್ಥಳಗಳಿಗೆ ಕರೆದೊಯ್ಯುತ್ತಿದ್ದಾರೆ. ನನ್ನ ವಿರುದ್ಧ ನಿಲ್ಲುವಂತೆ ಎಲ್ಲಾ ಪಕ್ಷಗಳ ನಾಯಕರಿಗೆ ಸೂಚನೆ ನೀಡಲಾಗಿದೆ. ಬಿಭವ್ ಸಾಮಾನ್ಯ ವ್ಯಕ್ತಿಯಲ್ಲ. ಸಚಿವರಿಗೂ ಸಿಗದ ಸೌಲಭ್ಯಗಳನ್ನು ಅವರು ಪಡೆಯುತ್ತಾರೆ. ಅವರು ಹೊರಬಂದರೆ ನನ್ನ, ಕುಟುಂಬದ ಜೀವಕ್ಕೆ ಅಪಾಯವಿದೆ' ಎಂದಿದ್ದಾರೆ.

ರಾಜ್‌ಕೋಟ್ ದುರಂತದ ಬಗ್ಗೆ ಗುಜರಾತ್ ಹೈಕೋರ್ಟ್ ವಿಚಾರಣೆ – ಪಾಲಿಕೆಗೆ ತರಾಟೆ

‘ಆಡಳಿತ ಯಂತ್ರದ ಮೇಲೆ ವಿಶ್ವಾಸವಿಲ್ಲ’

ಅಹಮದಾಬಾದ್ (ಪಿಟಿಐ): 27 ಜನರ ಸಾವಿಗೆ ಕಾರಣವಾದ ಟಿಆರ್‌ಪಿ ಗೇಮ್ ಜೋನ್ ಅಗ್ನಿ ಅನಾಹುತದ ವಿಚಾರವಾಗಿ ರಾಜ್‌ಕೋಟ್ ನಗರ ಸ್ಥಳೀಯ ಸಂಸ್ಥೆಯ ವಿರುದ್ಧ ತೀವ್ರ ಅತೃಪ್ತಿ ವ್ಯಕ್ತಪಡಿಸಿರುವ ಗುಜರಾತ್ ಹೈಕೋರ್ಟ್, ರಾಜ್ಯದ ಆಡಳಿತ ಯಂತ್ರದಲ್ಲಿ ತನಗೆ ವಿಶ್ವಾಸ ಇಲ್ಲ ಎಂದು ಹೇಳಿದೆ.

ರಾಜ್ಯದ ಆಡಳಿತ ಯಂತ್ರವು ಮುಗ್ಧ ಜನರ ಜೀವ ಹಾನಿಯಾದ ನಂತರವಷ್ಟೇ ಕ್ರಿಯಾಶೀಲವಾಗುತ್ತದೆ ಎಂದು ಅದು ಕಿಡಿಕಾರಿದೆ.

ಟಿಆರ್‌ಪಿ ಗೇಮ್ ಜೋನ್ ಅಗತ್ಯವಿರುವ ಅನುಮತಿ ಪಡೆದಿರಲಿಲ್ಲ ಎಂದು ರಾಜ್‌ಕೋಟ್ ಮಹಾನಗರ ಪಾಲಿಕೆಯ ವಕೀಲರು ತಿಳಿಸಿದಾಗ, ಅಷ್ಟು ದೊಡ್ಡ ಕಟ್ಟಡವು ತನ್ನ ವ್ಯಾಪ್ತಿಯಲ್ಲಿ ತಲೆ ಎತ್ತುತ್ತಿದ್ದಾಗ ಪಾಲಿಕೆಯು ಕಣ್ಣು ಮುಚ್ಚಿ ಕುಳಿತಿತ್ತೇ ಎಂದು ಪ್ರಶ್ನಿಸಿತು.

‘ನೀವು ಕಣ್ಣು ಮುಚ್ಚಿ ಕುಳಿತಿದ್ದಿರಿ. ಈ ದೊಡ್ಡ ಕಟ್ಟಡ ಇದ್ದಿದ್ದು ನಿಮಗೆ ಗೊತ್ತಿರಲಿಲ್ಲವೇ? ಈ ಜೋನ್ ಕಳೆದ ಎರಡೂವರೆ ವರ್ಷಗಳಿಂದ ಇದ್ದಿದ್ದಕ್ಕೆ ಪಾಲಿಕೆಯ ವಿವರಣೆ ಏನು? ಯಾವ ಅಗ್ನಿ ಸುರಕ್ಷತೆಗೆ ಅವರು ಅರ್ಜಿ ಸಲ್ಲಿಸಿದ್ದರು? ಟಿಕೆಟ್ ನೀಡುತ್ತಿದ್ದಾಗ ಮನರಂಜನಾ ತೆರಿಗೆ ಬಗ್ಗೆ ನಿಮಗೆ ಅರಿವು ಇತ್ತೇ?’ ಎಂದು ಪೀಠವು ಹೇಳಿತು. ಅಗ್ನಿ ಅನಾಹುತದ ಬಗ್ಗೆ ಗುಜರಾತ್ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದೆ. ನ್ಯಾಯಮೂರ್ತಿಗಳಾದ ಬಿರೇನ್ ವೈಷ್ಣವ್ ಮತ್ತು ದೇವನ್ ದೇಸಾಯಿ ಅವರು ಇರುವ ವಿಶೇಷ ಪೀಠವು ಅದರ ವಿಚಾರಣೆ ನಡೆಸುತ್ತಿದೆ. ಈ ಮನರಂಜನಾ ಕೇಂದ್ರ ಇದ್ದಿದ್ದರ ಬಗ್ಗೆ ಪಾಲಿಕೆಗೆ ಮೊದಲು ಗೊತ್ತಾಗಿದ್ದು ಯಾವಾಗ ಎಂದು ಪೀಠವು ಪ್ರಶ್ನಿಸಿತು. ‘ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರಲ್ಲಿ ಈ ನ್ಯಾಯಾಲಯವು ಅಗ್ನಿ ಸುರಕ್ಷತೆ ಕುರಿತು ನೀಡಿದ್ದ ಆದೇಶದ ಬಗ್ಗೆ ನಿಮಗೆ ಗೊತ್ತಿರಲಿಲ್ಲವೇ? ಆ ಮನರಂಜನಾ ಕೇಂದ್ರದ ಉದ್ಘಾಟನೆ ಸಂದರ್ಭದಲ್ಲಿ ನಿಮ್ಮ ಆಯುಕ್ತರು ಅಲ್ಲಿಗೆ ಹೋಗಿದ್ದರು ಎಂದು ಮಾಧ್ಯಮ ವರದಿಗಳು ಹೇಳುತ್ತವೆ. 18 ತಿಂಗಳು ಪಾಲಿಕೆ ಏನು ಮಾಡುತ್ತಿತ್ತು?’ ಎಂದು ಕೂಡ ಪೀಠವು ಕೇಳಿತು.

ಟಿಆರ್‌ಪಿ ಗೇಮ್ ಜೋನ್ ಸ್ಥಾಪನೆಯಾದ 2021ರಿಂದ ಅಗ್ನಿ ಅನಾಹುತ ಸಂಭವಿಸಿದ 2024ರ ಮೇ 25ರವರೆಗೆ ಪಾಲಿಕೆಗೆ ಆಯುಕ್ತರಾಗಿದ್ದ ಎಲ್ಲರೂ ‘ಈ ದುರಂತಕ್ಕೆ ಹೊಣೆಗಾರರಾಗಬೇಕು’ ಎಂದು ಪೀಠವು ಕೆಂಡಾಮಂಡಲವಾಗಿ ಹೇಳಿತು. ಅವರೆಲ್ಲ ಪ್ರತ್ಯೇಕವಾಗಿ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಸೂಚಿಸಿತು.

‘ಈ ನ್ಯಾಯಾಲಯದ ಸೂಚನೆಗಳನ್ನು ಪಾಲಿಸದೆ ಇದ್ದುದಕ್ಕೆ ಹಾಗೂ ಕರ್ತವ್ಯಲೋಪ ಎಸಗಿದ್ದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತು ಮಾಡಬೇಕು ಎಂದು ಸೂಚಿಸುವ ಯಾವುದೇ ಆದೇಶವನ್ನು ನಾವು ಈ ಹಂತದಲ್ಲಿ ಹೊರಡಿಸುತ್ತಿಲ್ಲ. ಅಧಿಕಾರಿ ಗಳಿಗೆ ಒಂದು ಅವಕಾಶ ನೀಡುವ ಬಯಕೆಯೊಂದಿಗೆ ಅಂತಹ ಆದೇಶ ನೀಡುತ್ತಿಲ್ಲ’ ಎಂದು ಪೀಠ ಹೇಳಿತು. ಅಹಮದಾಬಾದ್, ವಡೋದರಾ, ಸೂರತ್ ಮತ್ತು ರಾಜ್‌ಕೋಟ್‌ನ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯ ಅಗ್ನಿಶಾಮಕ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಅಗ್ನಿ ಸುರಕ್ಷತೆಯ ದೃಷ್ಟಿಯಿಂದ ಕೈಗೊಂಡ ಕ್ರಮಗಳ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ಪೀಠವು ಸೂಚಿಸಿದೆ.

ಅಗ್ನಿ ದುರಂತ ಪ್ರಕರಣದಲ್ಲಿ ಬಂಧಿಸಲಾದ ಯುವರಾಜಸಿಂಹ ಸೋಲಂಕಿ, ನಿತಿನ್ ಜೈನ್ ಮತ್ತು ರಾಹುಲ್ ರಾಥೋಡ್ ಅವರನ್ನು ರಾಜ್‌ಕೋಟ್‌ನ ನ್ಯಾಯಾಲಯವೊಂದು 14 ದಿನಗಳವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿದೆ. ಘಟನೆ ನಡೆದ ಎರಡು ದಿನಗಳ ನಂತರ ಗುಜರಾತ್ ಸರ್ಕಾರವು, ರಾಜ್‌ಕೋಟ್ ನಗರ ಪೊಲೀಸ್ ಆಯುಕ್ತ ರಾಜು ಭಾರ್ಗವ, ಹೆಚ್ಚುವರಿ ಪೊಲೀಸ್ ಆಯುಕ್ತ ವಿಧಿ ಚೌಧರಿ ಮತ್ತು ಡಿಸಿಪಿ (ವಲಯ–2) ಸುಧೀರ್‌ಕುಮಾರ್ ದೇಸಾಯಿ ಅವರನ್ನು ಯಾವುದೇ ಹುದ್ದೆ ತೋರಿಸದೆ ವರ್ಗಾಯಿಸಿದೆ. ರಾಜ್‌ಕೋಟ್ ಪಾಲಿಕೆ ಆಯುಕ್ತ ಆನಂದ್ ಪಟೇಲ್ ಅವರನ್ನೂ ವರ್ಗಾವಣೆ ಮಾಡಲಾಗಿದೆ.



ಅಗ್ನಿ ಅನಾಹುತ ನಡೆದ ರಾಜ್‌ಕೋಟ್‌ನ ಟಿಆರ್‌ಪಿ ಗೇಮ್ ಜೋನ್‌ನ ಸ್ಥಳದಿಂದ ತ್ಯಾಜ್ಯವನ್ನು ಸೋಮವಾರ ಹೊರಸಾಗಿಸಲಾಯಿತು —ಪಿಟಿಐ ಚಿತ್ರ

‘ಜೀವ ಹೋಗುವುದು ಅವರಿಗೆ ಬೇಕಾಗಿದೆ...’

ವಿಚಾರಣೆಯ ಸಂದರ್ಭದಲ್ಲಿ ಹಾಜರಿದ್ದ ವಕೀಲರೊಬ್ಬರು, ಈಗ ನಡೆದಿರುವ ದುರದೃಷ್ಟಕರ ಘಟನೆಯ ಹಿನ್ನೆಲೆಯಲ್ಲಿ ತಕ್ಷಣಕ್ಕೆ ಒಂದಿಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯ ಇದೆ ಎಂದು ಪೀಠಕ್ಕೆ ತಿಳಿಸಿದರು. ಘಟನೆಗೆ ಯಾರು ಹೊಣೆ ಎಂಬುದನ್ನು ಗುರುತಿಸಲು ರಾಜ್ಯ ಸರ್ಕಾರ ಮುಂದೆ ಬರಬೇಕಾಗುತ್ತದೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯೆಯಾಗಿ ಪೀಠವು, ‘ಅಂತಹ ತೀವ್ರವಾದ ಕ್ರಮಗಳನ್ನು ಕೈಗೊಳ್ಳುವವರು ಯಾರು? ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಈಗ ನಮಗೆರಾಜ್ಯದ ಆಡಳಿತ ಯಂತ್ರದಲ್ಲಿ ನಂಬಿಕೆ ಇಲ್ಲ. ಈ ನ್ಯಾಯಾಲಯದ ಆದೇಶ ವೊಂದು ಬಂದು ನಾಲ್ಕು ವರ್ಷ ಆಗಿದ್ದರೂ, ಈಗ ನಡೆದಿರುವುದು ಆರನೆಯ ಘಟನೆ. ಜೀವ ಹೋಗುವುದು ಅವರಿಗೆ ಬೇಕಾಗಿದೆ, ನಂತರ ಅವರು ಆಡಳಿತ ಯಂತ್ರ ಸಕ್ರಿಯವಾಗುವಂತೆ ಮಾಡುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿತು.

ಅಗ್ನಿ ದುರಂತ: ಏಳು ಅಧಿಕಾರಿಗಳ ಅಮಾನತು

ರಾಜ್‌ಕೋಟ್ (ಪಿಟಿಐ): ರಾಜ್‌ಕೋಟ್ ಅಗ್ನಿ ದುರಂತಕ್ಕೆ ಸಂಬಂಧಿಸಿದಂತೆ ಏಳು ಮಂದಿ ಅಧಿಕಾರಿಗಳ ಅಮಾನತಿಗೆ ಗುಜರಾತ್ ಸರ್ಕಾರ ಸೋಮವಾರ ಆದೇಶಿಸಿದೆ. ‘ಅಗತ್ಯ ಅನುಮತಿಗಳನ್ನು ಪಡೆಯದಿದ್ದರೂ ಗೇಮ್ ಜೋನ್ ಕಾರ್ಯಾಚರಣೆಗೆ ಅನುವು ಮಾಡಿಕೊಟ್ಟು ನಿರ್ಲಕ್ಷ್ಯ ತೋರಿದ್ದಕ್ಕಾಗಿ’ ಅಧಿಕಾರಿಗಳನ್ನು ಹೊಣೆ ಮಾಡಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ರಾಜ್‌ಕೋಟ್ ಮಹಾನಗರ ಪಾಲಿಕೆಯ ನಗರ ಯೋಜನಾ ಇಲಾಖೆಯ ಸಹಾಯಕ ಎಂಜಿನಿಯರ್ ಜೈದೀಪ್ ಚೌಧರಿ, ಪಾಲಿಕೆಯ ಸಹಾಯಕ ನಗರ ಯೋಜಕ ಗೌತಮ್ ಜೋಷಿ, ರಾಜ್‌ಕೋಟ್ ರಸ್ತೆ ಮತ್ತು ಕಟ್ಟಡಗಳ ಇಲಾಖೆಯ ಉಪ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾದ ಎಂ.ಆರ್. ಸುಮಾ ಮತ್ತು ಪಾರಸ್ ಕೋಥಿಯಾ, ಪೊಲೀಸ್ ಇನ್‌ಸ್ಪೆಕ್ಟರ್‌ಗಳಾದ ವಿ.ಆರ್. ಪಟೇಲ್ ಮತ್ತು ಎನ್.ಐ. ರಾಥೋಡ್, ಪಾಲಿಕೆಯ ಕಲಾವಾದ್ ರಸ್ತೆ ಅಗ್ನಿಶಾಮಕ ಠಾಣೆಯ ಠಾಣಾಧಿಕಾರಿ ರೋಹಿತ್ ವಿಗೋರಾ ಅವರನ್ನು ಅಮಾನನತು ಮಾಡಲಾಗಿದೆ.

ಟಿಆರ್‌ಪಿ ಗೇಮ್ ಜೋನ್ ಅಗ್ನಿ ಸುರಕ್ಷತೆಗೆ ಸಂಬಂಧಿಸಿದಂತೆ ನಿರಾಕ್ಷೇಪಣಾ ಪತ್ರ ಪಡೆಯದೆ ಕಾರ್ಯ ನಿರ್ವಹಿಸು-ತ್ತಿದ್ದರೂ ವಿಗೋರಾ ಅವರು ಆ ಮನರಂಜನಾ ಕೇಂದ್ರದ ವಿರುದ್ಧ ಯಾವುದೇ ಕ್ರಮ ಜರುಗಿಸದೆ ಬೇಜವಾಬ್ದಾರಿಯಿಂದ ವರ್ತಿಸಿದರು ಎಂದು ಅಮಾನತು ಆದೇಶದಲ್ಲಿ ಹೇಳಲಾಗಿದೆ.

ಪ್ರಣಾಳಿಕೆಯಲ್ಲಿನ ಭರವಸೆಗಳು ಭ್ರಷ್ಟಾಚಾರ ಅಲ್ಲ: ‘ಸುಪ್ರೀಂ’

ನವದೆಹಲಿ (ಪಿಟಿಐ): ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ನೀಡುವ ಭರವಸೆಗಳನ್ನು ಚುನಾವಣಾ ಕಾನೂನುಗಳ ಅಡಿಯಲ್ಲಿ ‘ಭ್ರಷ್ಟಾಚಾರ’ ಎನ್ನಲು ಆಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಕೆ.ವಿ. ವಿಶ್ವನಾಥನ್ ಅವರು ಇದ್ದ ವಿಭಾಗೀಯ ಪೀಠವು ಬೆಂಗಳೂರಿನ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಮತದಾರ ಶಶಾಂಕ ಜೆ. ಶ್ರೀಧರ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸುವ ಸಂದರ್ಭದಲ್ಲಿ ಮೌಖಿಕವಾಗಿ ಈ ಮಾತು ಹೇಳಿದೆ. ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಿದ್ದನ್ನು ಈ ಅರ್ಜಿಯಲ್ಲಿ ಪ್ರಶ್ನಿಸಲಾಗಿತ್ತು.

2023ರ ಕರ್ನಾಟಕ ವಿಧಾನಸಭಾ ಚುನಾವಣೆಗೆ ಸಿದ್ಧಪಡಿಸಿದ್ದ ಪ್ರಣಾಳಿಕೆ-ಯಲ್ಲಿ ಕಾಂಗ್ರೆಸ್ ನೀಡಿದ್ದ ಭರವಸೆಗಳು ಸಾರ್ವಜನಿಕರಿಗೆ ನೇರವಾಗಿ ಹಾಗೂ ಪರೋಕ್ಷವಾಗಿ ಹಣಕಾಸಿನ ನೆರವು ಒದಗಿಸುವಂತಿದ್ದವು. ಈ ಭರವಸೆಗಳು ಚುನಾವಣಾ ಭ್ರಷ್ಟಾಚಾರಕ್ಕೆ ಸಮ ಎಂದು ಅರ್ಜಿಯಲ್ಲಿ ದೂರಲಾಗಿತ್ತು.

‘ರಾಜಕೀಯ ಪಕ್ಷವೊಂದು ತನ್ನ ಪ್ರಣಾಳಿಕೆಯಲ್ಲಿ ನೀಡುವ ಭರವಸೆಗಳು ಸಾರ್ವಜನಿಕರಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಹಣಕಾಸಿನ ನೆರವು ಒದಗಿಸುವಂತೆ ಇದ್ದರೆ, ಅದು ಆ ಪಕ್ಷದ ಅಭ್ಯರ್ಥಿಯ ಭ್ರಷ್ಟಾಚಾರವಾಗಿ ಪರಿ-ಗಣಿತವಾಗುತ್ತದೆ ಎಂದು ವಕೀಲರು ಮಂಡಿಸಿರುವ ವಾದವನ್ನು ಒಪ್ಪಲು ಆಗುವುದಿಲ್ಲ’ ಎಂದು ಪೀಠವು ಸ್ಪಷ್ಟಪ-ಡಿಸಿದೆ.

ಶಶಾಂಕ ಅವರು ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿ ಬಿ.ಝಡ್. ಜಮೀರ್ ಅಹಮದ್ ಖಾನ್ ವಿರುದ್ಧ ಅರ್ಜಿ ಸಲ್ಲಿಸಿದ್ದರು. ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಹೇಳಿದ್ದ ಐದು ಗ್ಯಾರಂಟಿಗಳು ಭ್ರಷ್ಟಾಚಾರಕ್ಕೆ ಸಮನಾಗುತ್ತವೆ ಎಂದು ಅರ್ಜಿದಾರರು ವಾದಿಸಿದ್ದರು.

ಪಕ್ಷವೊಂದು ತಾನು ಅನುಷ್ಠಾನಕ್ಕೆ ತರಲು ಬಯಸುವ ನೀತಿಗಳ ಬಗ್ಗೆ ಘೋಷಿಸುವುದನ್ನು ಪ್ರಜಾಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 123ರ ಅಡಿಯಲ್ಲಿ ಭ್ರಷ್ಟ ನಡೆ ಎಂದು ಪರಿಗಣಿಸಲು ಅವಕಾಶ ಇಲ್ಲ ಎಂದು ಕರ್ನಾಟಕ ಹೈಕೋರ್ಟ್ ಈ ಹಿಂದೆ ಹೇಳಿತ್ತು.

ಜಾಮೀನು ಅವಧಿ ವಿಸ್ತರಣೆ ಕೋರಿದ ಸಿ.ಎಂ ಕೇಜ್ರಿವಾಲ್

ನವದೆಹಲಿ (ಪಿಟಿಐ): ಮಧ್ಯಂತರ ಜಾಮೀನನ್ನು ಏಳು ದಿನಗಳವರೆಗೆ ವಿಸ್ತರಿಸಬೇಕು ಎಂದು ಕೋರಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಅವರು ಸುಪ್ರೀಂ ಕೋರ್ಟ್‌ನ ಸೂಚನೆಯ ಪ್ರಕಾರ ಜೂನ್ 2ರಂದು ಜೈಲಿಗೆ ವಾಪಸ್ ಆಗಬೇಕಿದೆ.

ಪಿಇಟಿ–ಸಿಟಿ ಪರೀಕ್ಷೆ ಸೇರಿದಂತೆ ಕೆಲ ವೈದ್ಯಕೀಯ ಪರೀಕ್ಷೆಗಳಿಗೆ ಒಳಗಾಗಬೇಕಿ-ರುವ ಕಾರಣಕ್ಕೆ ಮಧ್ಯಂತರ ಜಾಮೀನಿನ ಅವಧಿಯನ್ನು ವಿಸ್ತರಿಸಬೇಕು ಎಂದು ಅವರು ಕೋರಿದ್ದಾರೆ. ದೇಹದ ತೂಕವು ಇದ್ದಕ್ಕಿದ್ದಂತೆ ಕಡಿಮೆ ಆಗಿದೆ. ಕೀಟೋನ್ ಮಟ್ಟವು ಹೆಚ್ಚಾಗಿದೆ ಎಂದು ಅವರು ಅರ್ಜಿಯಲ್ಲಿ ಹೇಳಿದ್ದಾರೆ. ಇವು ಮೂತ್ರಕೋಶದ ಸಮಸ್ಯೆ, ಹೃದಯದ ಗಂಭೀರ ಸಮಸ್ಯೆ ಅಥವಾ ಕ್ಯಾನ್ಸರ್‌ನ ಸೂಚಕಗಳಿರಬಹುದು ಎಂದು ಅದರಲ್ಲಿ ಹೇಳಲಾಗಿದೆ.

ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿದ್ದ ಕೇಜ್ರಿವಾಲ್ ಅವರಿಗೆ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲು ಸುಪ್ರೀಂ ಕೋರ್ಟ್ 21 ದಿನಗಳ ಮಧ್ಯಂತರ ಜಾಮೀನನ್ನು ಮೇ 10ರಂದು ಮಂಜೂರು ಮಾಡಿತ್ತು.

ಕಾರು ಅಪಘಾತ: ಬಾಲಕನ ರಕ್ತದ ಮಾದರಿ ಬದಲು

ಪೋರ್ಶೆ ಪ್ರಕರಣ: ಇಬ್ಬರು ವೈದ್ಯರ ಸೆರೆ

ಪ್ರಜಾವಾಣಿ ವಾರ್ತೆ

ಮುಂಬೈ: ಬಹುಚರ್ಚಿತ ವಿಲಾಸಿ ಪೋರ್ಶೆ ಕಾರು ಅಪಘಾತ ಪ್ರಕರಣ-ದಲ್ಲಿ, ಪೊಲೀಸರು ಸಂಗ್ರಹಿಸಿದ್ದ, 17 ವರ್ಷ ವಯಸ್ಸಿನ ಬಾಲಕನ ರಕ್ತದ ಮಾದರಿಯನ್ನು ಕಸದಬುಟ್ಟಿಗೆ ಎಸೆದು ಬೇರೊಬ್ಬರ ರಕ್ತವನ್ನು ಇರಿಸಿದ್ದ ಬೆಳವಣಿಗೆ ಬಯಲಾಗಿದೆ.

ಬಾಲಕನ ತಂದೆಯ ಆಮಿಷಕ್ಕೆ ಒಳಗಾಗಿ ಈ ಕೃತ್ಯ ಎಸಗಿದ್ದ ಸಾಸೂನ್ ಸರ್ಕಾರಿ ಆಸ್ಪತ್ರೆಯ ಇಬ್ಬರು ವೈದ್ಯರು, ಒಬ್ಬ ಸಿಬ್ಬಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರನ್ನು ಕೋರ್ಟ್‌ಗೆ ಹಾಜ-ರುಪಡಿಸಿದ್ದು, ಸ್ಥಳೀಯ ಜೆಎಂಎಫ್‌ಸಿ ಕೋರ್ಟ್‌ನ ನ್ಯಾಯಾಧೀಶ ಎ.ಎ.ಪಾಂಡೆ ಅವರು ಮೇ 30ರ ವರೆಗೆ ಪೊಲೀಸರ ವಶಕ್ಕೆ ಒಪ್ಪಿಸಿದರು.

ಸಾಸೂನ್ ಸರ್ಕಾರಿ ಆಸ್ಪತ್ರೆಯ ಪ್ರಯೋಗಾಲಯ ವಿಭಾಗದ ಮುಖ್ಯಸ್ಥ ಡಾ.ಅಜಯ್ ತಾವರೆ, ಮುಖ್ಯ ವೈದ್ಯಾಧಿಕಾರಿ ಡಾ.ಶ್ರೀಹರಿ ಹಾಲನೂರ್ ಮತ್ತು ಗುಮಾಸ್ತ ಅತುಲ್ ಘಾಟ್‌ಕಾಂಬ್ಳೆ ಬಂಧಿತರು. ‘ಬಂಧಿತ ವೈದ್ಯರ ವಿರುದ್ಧ ಸಾಕ್ಷ್ಯಗಳ ನಾಶ ಕೃತ್ಯದಲ್ಲಿ ಭಾಗಿಯಾದ ಆರೋಪವಿದೆ’ ಪೊಲೀಸ್ ಕಮೀಷನರ್ ಅಮಿತೇಶ್ ಕುಮಾರ್ ತಿಳಿಸಿದರು.

‘ಬಾಲಕನ ತಂದೆ ವೈದ್ಯರಿಗೆ ಹಲವು ಬಾರಿ ಫೋನ್ ಕರೆ ಮಾಡಿದ್ದು, ಬಾಲಕನ ರಕ್ತದ ಮಾದರಿಯನ್ನು ಬದಲಿಸುವಂತೆ ಆಮಿಷವನ್ನು ಒಡ್ಡಿದ್ದರು. ವೈದ್ಯರ ಕೃತ್ಯದಿಂದಾಗಿ ಸಾಸೂನ್ ಆಸ್ಪತ್ರೆ ಪ್ರಯೋಗಾಲಯದ ವರದಿಯಲ್ಲಿ ‘ಬಾಲಕನ ರಕ್ತದಲ್ಲಿ ಮದ್ಯದ ಅಂಶವಿದ್ದ ಮಾಹಿತಿ ಉಲ್ಲೇಖವಾಗಿರಲಿಲ್ಲ’ ಎಂದು ಕಮೀಷನರ್ ತಿಳಿಸಿದರು.

ರಕ್ತದ ಮಾದರಿ ಬದಲಿಸಲು ಕೆಲ ಹಣಕಾಸು ವಹಿವಾಟು ನಡೆದಿದೆ. ಈ ಸಂಬಂಧ ತನಿಖೆಯ ಭಾಗವಾಗಿ ವೈದ್ಯರ ಮನೆಗಳಲ್ಲಿ ತಪಾಸಣೆ ನಡೆಸಬೇಕಾಗಿದೆ. 10 ದಿನ ನಮ್ಮ ವಶಕ್ಕೆ ನೀಡಬೇಕು ಎಂದು ಪೊಲೀಸರು ಕೋರ್ಟ್‌ಗೆ ಮನವಿ ಸಲ್ಲಿಸಿದ್ದರು.

‘ಬಾಲಕನ ರಕ್ತದ ಬದಲಿಗೆ ಇರಿಸಲು ಯಾರ ರಕ್ತ ಸಂಗ್ರಹಿಸಲಾಗಿತ್ತು ಎಂಬ ಬಗ್ಗೆ ತನಿಖೆ ನಡೆದಿದೆ. ಆಸ್ಪತ್ರೆಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಸಂಗ್ರಹಿಸಲಾಗಿದೆ. ಈ ಬೆಳವಣಿಗೆ ಬಳಿಕ ಬಾಲಕನ ವಿರುದ್ಧ ದಾಖಲಿಸಿದ್ದ ಪ್ರಕರಣದಲ್ಲಿ ಐಪಿಸಿ ಸೆಕ್ಷನ್ 201 (ಸಾಕ್ಷ್ಯ ನಾಶ) ಮತ್ತು 120 ಬಿ (ಕ್ರಿಮಿನಲ್ ಸಂಚು) ಅನ್ನೂ ಸೇರಿಸಲಾಗಿದೆ’ ಎಂದು ವಿವರಿಸಿದರು.

ಡಾ.ತಾವರೆ ನಿರ್ದೇಶನದಂತೆ ಬಾಲಕನ ರಕ್ತದ ಮಾದರಿ ಬದಲಿಸಿದ್ದು, ಪೊಲೀಸರು ಸಂಗ್ರಹಿಸಿದ್ದ ಮಾದರಿಯನ್ನು ಕಸದ ಬುಟ್ಟಿಗೆ ಎಸೆಯಲಾಗಿತ್ತು. ಮುಂಜಾಗ್ರತೆಯಾಗಿ ತನಿಖಾಧಿಕಾ-ರಿಗಳು ಡಿಎನ್‌ಎ ಮಾದರಿ ಪರೀಕ್ಷೆಗೆ ಹೆಚ್ಚುವರಿಯಾಗಿ ರಕ್ತದ ಮಾದರಿ ಸಂಗ್ರಹಿಸಿ, ಅದನ್ನು ಬೇರೊಂದು ಆಸ್ಪತ್ರೆಗೆ ಪರೀಕ್ಷೆಗೆ ಕಳುಹಿಸಲಾಗಿತ್ತು’ ಎಂದರು.

ಸಾಸೂನ್ ಆಸ್ಪತ್ರೆ ಮತ್ತು ಬೇರೊಂದು ಆಸ್ಪತ್ರೆಯ ವರದಿಯಲ್ಲಿ ಸಾಮ್ಯತೆ ಇರಲಿಲ್ಲ. ಬೇರೊಂದು ಆಸ್ಪತ್ರೆ ವರದಿಯಿಂದ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತದ ಮಾದರಿ ಬದಲಾಗಿದೆ ಎಂಬುದು ಗೊತ್ತಾಯಿತು. ಇಬ್ಬರು ವೈದ್ಯರಿಗೂ ಪೊಲೀಸರು ಹೆಚ್ಚುವರಿಯಾಗಿ ಮಾದರಿ ಸಂಗ್ರಹಿಸಿರುವ ಮಾಹಿತಿ ಇರಲಿಲ್ಲ ಎಂದರು.

ಪೋರ್ಶೆ ಕಾರು ಅಪಘಾತಕ್ಕೆ ಸಂಬಂಧಿಸಿದಂತೆ ಬಾಲಕನ ತಂದೆ, ರಿಯಲ್ ಎಸ್ಟೇಟ್ ಉದ್ಯಮಿ ವಿಶಾಲ್ ಅಗರವಾಲ್ ಹಾಗೂ ತಾತ ಸುರೇಂದ್ರ ಅಗರವಾಲ್ ಅವರನ್ನು ಈಗಾಗಲೇ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬಾಲಕನ ತಂದೆಯನ್ನು ಸಹ ಆರೋಪಿ ಎಂದು ಹೆಸರಿಸಲಾಗಿದೆ. ಬಾಲ ನ್ಯಾಯ ಮಂಡಳಿಯು ಬಾಲಕನಿಗೆ ಜಾಮೀನು ನೀಡಿದ್ದು, ರಸ್ತೆ ಸುರಕ್ಷತೆ ಕುರಿತು ಪ್ರಬಂಧ ಬರೆಯಲು ಆದೇಶಿಸಿತ್ತು. ಪ್ರಸ್ತುತ ಆತನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ. ಮೇ 19ರಂದು ಅಪಘಾತ ಸಂಭವಿಸಿದ್ದು, ಬಾಲಕ ಚಾಲನೆ ಮಾಡುತ್ತಿದ್ದ ಕಾರು ಡಿಕ್ಕಿಯಾಗಿ ಬೈಕ್‌ನಲ್ಲಿ ತೆರಳುತ್ತಿದ್ದ 24 ವರ್ಷದ ಇಬ್ಬರು ಐ.ಟಿ ವೃತ್ತಿಪರರು ಸತ್ತಿದ್ದರು. ಅಪಘಾತವಾದಾಗ ಬಾಲಕ ಮದ್ಯಪಾನ ಮಾಡಿದ್ದನೆಂದು ಪೊಲೀಸರು ತಿಳಿಸಿದ್ದರು.



ಸೋಮವಾರ ಆಸ್ಪತ್ರೆಯ ಇಬ್ಬರು ವೈದ್ಯರು ಹಾಗೂ ಒಬ್ಬ ಸಿಬ್ಬಂದಿಯನ್ನು ಪೊಲೀಸರು ಬಂಧಿಸಿದ್ದಾರೆ

ಮುಖ್ಯಾಂಶಗಳು

- ಮುಂಜಾಗ್ರತೆಯಾಗಿ ಹೆಚ್ಚುವರಿ ರಕ್ತದ ಮಾದರಿ ಸಂಗ್ರಹಿಸಿದ್ದ ಪೊಲೀಸರು
- ವೈದ್ಯರಿಗೆ ಹಲವು ಕರೆ ಮಾಡಿ ಆಮಿಷ ಒಡ್ಡಿದ್ದ ಬಾಲಕನ ತಂದೆ
- ಪೊಲೀಸರು ಸಂಗ್ರಹಿಸಿದ್ದ ರಕ್ತದ ಮಾದರಿಯನ್ನು ಕಸದಬುಟ್ಟಿಗೆ ಎಸೆದರು

ವಶಕ್ಕೆ ಪಡೆಯಲು ನ್ಯಾಯಾಲಯ ಒಪ್ಪಿಗೆ

ಪುಣೆ (ಪಿಟಿಐ): ಪೋರ್ಶೆ ಕಾರು ಅಪಘಾತ ಪ್ರಕರಣ ಸಂಬಂಧ ಯರವಾಡ ಕೇಂದ್ರ ಕಾರಾಗೃಹದಲ್ಲಿರುವ ಬಾಲಕನ ತಂದೆಯನ್ನು ಪೊಲೀಸ್ ವಶಕ್ಕೆ ಪಡೆಯಲು ಸ್ಥಳೀಯ ನ್ಯಾಯಾಲಯ ಅನುಮೋದನೆ ನೀಡಿದೆ.

ಅಪಹರಣ ಮತ್ತು ಬಾಲಕನ ತಂದೆ ವಿಶಾಲ್ ಅಗರವಾಲ್ ಅವರ ಕಾರು ಚಾಲಕನಿಂದ ದುರುದ್ದೇಶದಿಂದ ತಪ್ಪೊಪ್ಪಿಗೆ ಆರೋಪಗಳಿಗೆ ಸಂಬಂಧಿಸಿದ ಪ್ರಕರಣ ಸಂಬಂಧ ವಶಕ್ಕೆ ಪಡೆಯಲು ಕೋರ್ಟ್ ಸಮ್ಮತಿಸಿದೆ.

ಬಾಲಕನ ತಂದೆ, ಎರಡು ಪಬ್‌ಗಳ ವ್ಯವಸ್ಥಾಪಕರು, ಮಾಲೀಕರ ವಿರುದ್ಧ ದಾಖಲಿಸಿರುವ ಪ್ರಕರಣದ ಸಂಬಂಧ ವಿಶಾಲ್ ಅಗರವಾಲ್‌ರನ್ನು ಬಂಧಿಸಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ದುರು-ದ್ದೇಶಪೂರ್ವಕ ತಪ್ಪೊಪ್ಪಿಗೆ ಸಂಬಂಧಿಸಿ ತಮ್ಮ ವಶಕ್ಕೆ ಒಪ್ಪಿಸುವಂತೆ ಕೋರಿ ಪೊಲೀಸರು ಅರ್ಜಿ ಸಲ್ಲಿಸಿದ್ದರು.

ಮೂರು ಪ್ರತ್ಯೇಕ ಪ್ರಕರಣ

ಮುಂಬೈ: ಪುಣೆಯ ಪೋರ್ಶೆ ಕಾರು ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸರು ಇದುವರೆಗೂ ಮೂರು ಪ್ರತ್ಯೇಕ ಪ್ರಕರಣ ದಾಖಲಿಸಿದ್ದಾರೆ.

ಮೊದಲ ಪ್ರಕರಣದಲ್ಲಿ ಐಪಿಸಿ 304 ಎ (ವೇಗ, ನಿರ್ಲಕ್ಷ್ಯತನದ ವಾಹನ ಚಾಲನೆ), ಐಪಿಸಿ 304 (ಉದ್ದೇಶಪೂರ್ವಕವಲ್ಲದ ಕೃತ್ಯ), ಹಾಗೂ ಮೋಟಾರು ವಾಹನ ಕಾಯ್ದೆಯಡಿ ಬಾಲಕನು ಚಾಲನಾ ರಹದಾರಿ ಹೊಂದಿರಲಿಲ್ಲ, ವಾಹನಕ್ಕೆ ನೋಂದಣಿ ಸಂಖ್ಯೆ ಇರಲಿಲ್ಲ ಎಂಬ ಬಗ್ಗೆ ಪ್ರಕರಣ ದಾಖಲಿಸಲಾಗಿದೆ.

ಎರಡನೆಯದರಲ್ಲಿ ಬಾಲಕನ ತಂದೆ ವಿಶಾಲ್ ಅಗರವಾಲ್ ವಿರುದ್ಧ, ಮಗನಿಗೆ ಮದ್ಯ ಕುಡಿದು ವಾಹನ ಚಲಾಯಿಸಲು ಅವಕಾಶ ನೀಡಿದ್ದಕಾಗಿ ಬಾಲನ್ಯಾಯ ಕಾಯ್ದೆ ಸೆಕ್ಷನ್ 75, 77ರಡಿ ಪ್ರಕರಣ ದಾಖಲಾಗಿದೆ.

ಮೂರನೆಯದರಲ್ಲಿ ಬಾಲಕನ ತಾತ ಸುರೇಂದ್ರ ಕುಮಾರ್ ವಿರುದ್ಧ ದುರುದ್ದೇಶದಿಂದ ತಪ್ಪೊಪ್ಪಿಗೆ ನೀಡುವಂತೆ ಕುಟುಂಬದ ವಾಹನ ಚಾಲಕನಿಗೆ ಬೆದರಿಕೆ ಒಡ್ಡಿದ್ದ ಆರೋಪದಡಿ ಮೊಕದ್ದಮೆಯನ್ನು ದಾಖಲಿಸಲಾಗಿದೆ.

‘ಶಾಶ್ವತ ನೋಂದಣಿ ಸಂಖ್ಯೆಗೆ ₹1,758 ಪಾವತಿ ಆಗಿರಲಿಲ್ಲ’

ಪುಣೆ (ಪಿಟಿಐ): ಪೋರ್ಶೆ ಕಾರು ತಯಾರಕ ಸಂಸ್ಥೆಯ ಪ್ರತಿನಿಧಿಗಳು ಸೋಮವಾರ ಯರವಾಡ ಪೊಲೀಸ್ ಠಾಣೆಗೆ ತೆರಳಿದ್ದು, ಅಪಘಾತಕ್ಕೀಡಾಗಿದ್ದ ವಿಲಾಸಿ ಕಾರಿನ ತಾಂತ್ರಿಕ ಪರಿಶೀಲನೆ ನಡೆಸಿದರು.

ಪೋರ್ಶೆ ಕಾರು ತಯಾರಕ ಸಂಸ್ಥೆಯ ಪ್ರತಿನಿಧಿಗಳು, ಪ್ರಾದೇಶಿಕ ಸಾರಿಗೆ ಸಂಸ್ಥೆಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ತಾಂತ್ರಿಕ ಪರಿಶಿಲನೆ ನಡೆಸಿದರು ಎಂದು ಆರ್‌ಟಿಒ ಸಂಜೀವ್ ಭೋರ್ ತಿಳಿಸಿದರು.

ಶಾಶ್ವತ ನೋಂದಣಿ ಸಂಖ್ಯೆಗಾಗಿ ಮಾಲೀಕರು ₹1,758 ಪಾವತಿಸಿರಲಿಲ್ಲ. ಹೀಗಾಗಿ, ಈ ಪ್ರಕ್ರಿಯೆಯು ಬಾಕಿ ಉಳಿದಿತ್ತು ಎಂದು ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದರು. ಮಹಾರಾಷ್ಟ್ರ ಪ್ರಾದೇಶಿಕ ಸಾರಿಗೆ ಕಮೀಷನರ್ ವಿವೇಕ್ ಭೀಮಣ್ಣವರ್, ‘ಕಾರನ್ನು ಬೆಂಗಳೂರಿನ ಡೀಲರ್ ಮಾರ್ಚ್‌ನಲ್ಲಿ ತರಿಸಿದ್ದರು. ಅಲ್ಲಿಂದ ತಾತ್ಕಾಲಿಕ ನೋಂದಣಿ ಆಧರಿಸಿ ಮಹಾರಾಷ್ಟ್ರಕ್ಕೆ ಕಳುಹಿಸಲಾಗಿತ್ತು’ ಎಂದು ಈ ಹಿಂದೆ ಮಾಹಿತಿ ನೀಡಿದ್ದರು.

ಅಗ್ನಿ ಅವಘಡ: ಆಸ್ಪತ್ರೆ ಮಾಲೀಕ, ವೈದ್ಯ 3 ದಿನ ಪೊಲೀಸ್ ವಶಕ್ಕೆ

ನವದೆಹಲಿ (ಪಿಟಿಐ): ಇಲ್ಲಿನ ಬೇಬಿ ಕೇರ್ ನ್ಯೂಬಾರ್ನ್ ಆಸ್ಪತ್ರೆ-ಯಲ್ಲಿ ಸಂಭವಿಸಿದ ಅಗ್ನಿ ಅವಘಡ ಪ್ರಕರಣದ ವಿಚಾರಣೆಗಾಗಿ ಆಸ್ಪತ್ರೆಯ ಮಾಲೀಕ ಮತ್ತು ವೈದ್ಯರೊಬ್ಬರನ್ನು ನ್ಯಾಯಾಲಯವು ಸೋಮವಾರ ಮೂರು ದಿನಗಳ ಕಾಲ ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಈ ಪ್ರಕರಣದ ವಿಚಾರಣೆಗಾಗಿ ಆಸ್ಪತ್ರೆಯ ಮಾಲೀಕ ಡಾ. ನವೀನ್ ಕಿಚಿ ಮತ್ತು ಬೆಂಕಿ ಅವಘಡ ಸಂಭವಿಸಿದಾಗ ಕರ್ತವ್ಯದಲ್ಲಿದ್ದ ಡಾ. ಆಕಾಶ್ ಅವರನ್ನು ಮೂರು ದಿನ ವಶಕ್ಕೆ ನೀಡಬೇಕು ಎಂದು ಪೊಲೀಸರು ನ್ಯಾಯಾಲಯವನ್ನು ಕೋರಿದರು.

ಆಸ್ಪತ್ರೆಗಳಿಗೆ ಸೂಚನೆ: ಆಸ್ಪತ್ರೆಯಲ್ಲಿ ಅಗ್ನಿ ಅವಘಡ ಸಂಭವಿಸಿ ಏಳು ಶಿಶುಗಳು ಮೃತಪಟ್ಟ ಬೆನ್ನಲ್ಲೇ ಎಚ್ಚೆತ್ತು-ಕೊಂಡಿರುವ ದೆಹಲಿ ಸರ್ಕಾರ, ಜೂನ್ 8ರ ಒಳಗೆ ಅಗ್ನಿ ಸುರಕ್ಷತಾ ಪರಿಶೀಲನೆ ನಡೆಸಿ ವರದಿ ನೀಡುವಂತೆ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ನಿರ್ದೇಶನ ನೀಡಿದೆ.

ದುರಂತಕ್ಕೆ ಸಂಬಂಧಿಸಿ ಚರ್ಚೆ ನಡೆಸುವ ಸಲುವಾಗಿ ರಾಜ್ಯದ ಆರೋಗ್ಯ ಸಚಿವ ಸೌರಭ್ ಭಾರದ್ವಾಜ್ ಸೋಮವಾರ ಸಭೆ ನಡೆಸಿದ ಬಳಿಕ ಈ ವಿಷಯ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಡಿಆರ್‌ಡಿಒ ಮುಖ್ಯಸ್ಥ ಸಮೀರ್ ಸೇವಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಮುಖ್ಯಸ್ಥ ಸಮೀರ್ ವಿ.ಕಾಮತ್ ಅವರ ಸೇವಾವಧಿಯನ್ನು ಕೇಂದ್ರ ಸರ್ಕಾರವು ಒಂದು ವರ್ಷ ವಿಸ್ತರಿಸಿದೆ.

‘ಸಚಿವ ಸಂಪುಟದ ನೇಮಕಾತಿ ಸಮಿತಿಯ ಅನುಮತಿ ಮೇರೆಗೆ ಕಾಮತ್ ಅವರ ಸೇವಾವಧಿಯನ್ನು ಜೂನ್ 1ರಿಂದ 2025 ಮೇ 31ರವರೆಗೆ ವಿಸ್ತರಿಸಲಾಗಿದೆ’ ಎಂದು ಕೇಂದ್ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಪ್ರಸಿದ್ಧ ವಿಜ್ಞಾನಿಯಾಗಿರುವ ಕಾಮತ್ ಅವರು 2022ರ ಆಗಸ್ಟ್ 25ರಿಂದ ಡಿಆರ್‌ಡಿಒ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೇರಳ ಪೊಲೀಸ್ ಅಕಾಡೆಮಿ: ಲೈಂಗಿಕ ದೌರ್ಜನ್ಯದ ಆರೋಪ

ತಿರುವನಂತಪುರ: ಕೇರಳ ಪೊಲೀಸ್ ಅಕಾಡೆಮಿಯಲ್ಲಿ ಲೈಂಗಿಕ ದೌರ್ಜನ್ಯದ ಆರೋಪ ಕೇಳಿಬಂದಿದ್ದು, ಅಕಾಡೆಮಿಯ ಮಹಿಳಾ ಅಧಿಕಾರಿ-ಯೊಬ್ಬರು ಕಮಾಂಡೆಂಟ್ ರ‍್ಯಾಂಕ್‌ನ ಅಧಿಕಾರಿಯ ವಿರುದ್ಧ ದೂರು ನೀಡಿದ್ದಾರೆ.

‘ಮೇಲಾಧಿಕಾರಿಯೊಬ್ಬರು ಅಕಾಡೆಮಿಯಲ್ಲಿ ಹಲವು ಬಾರಿ ನನಗೆ ಲೈಂಗಿಕ ಕಿರುಕುಳ ನೀಡಿದ್ದಾರೆ’ ಎಂದು ಮಹಿಳಾ ಅಧಿಕಾರಿ ತಿಳಿಸಿದ್ದಾರೆ. ಆಂತರಿಕ ತನಿಖಾ ಸಮಿತಿಯು ಈ ಬಗ್ಗೆ ತನಿಖೆ ನಡೆಸುತ್ತಿದೆ.

ಆಲಂಗೀರ್ ಆಲಂ ಬಂಧನ ಅವಧಿ ವಿಸ್ತರಣೆ

ರಾಂಚಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲ-ಯದ (ಇ.ಡಿ) ವಶದಲ್ಲಿರುವ ಜಾರ್ಖಂಡ್‌ನ ಗ್ರಾಮೀಣಾ-ಭಿವೃದ್ಧಿ ಸಚಿವ ಆಲಂಗೀರ್ ಆಲಂ ಅವರ ಬಂಧನದ ಅವಧಿಯನ್ನು ಮೂರು ದಿನಗಳು ವಿಸ್ತರಿಸಿ ವಿಶೇಷ ನ್ಯಾಯಾಲಯ (ಪಿಎಂಎಲ್‌ಎ) ಸೋಮವಾರ ಆದೇಶಿಸಿದೆ.



ಆಲಂಗೀರ್ ಆಲಂ

ಆಲಂ ಅವರ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ಹೆಚ್ಚಿನ ವಿವರ ಹಾಗೂ ಹೆಚ್ಚಿನ ವಿಚಾರಣೆಗಾಗಿ ಇನ್ನೂ ಮೂರು ದಿನಗಳ ಅವಧಿ ಆಲಂ ಅವರ ಬಂಧನದ ಅವಧಿಯನ್ನು ವಿಸ್ತರಿಸುವಂತೆ ಇ.ಡಿ, ನ್ಯಾಯಾಲಯಕ್ಕೆ ಕೋರಿತ್ತು. ಅದರಂತೆ ಮೂರು ದಿನಗಳ ಕಾಲ ವಿಸ್ತರಿಸಲಾಗಿದೆ.

ಆಲಂ ಅವರ ಆಪ್ತ ಕಾರ್ಯದರ್ಶಿ ಸಂಜೀವ್ ಲಾಲ್ (52) ಮತ್ತು ಅವರ ಮನೆಗೆಲಸ ಮಾಡುತ್ತಿದ್ದ ಜಹಾಂಗೀರ್ ಆಲಂ (42) ಅವರಿಗೆ ಸಂಬಂಧಿಸಿದ ಪ್ರದೇಶದಲ್ಲಿ ಸುಮಾರು ₹32 ಕೋಟಿ ನಗದು ಪತ್ತೆಯಾಗಿತ್ತು. ನಂತರ ಇಬ್ಬರನ್ನೂ ಇ.ಡಿ ಬಂಧಿಸಿತ್ತು.

ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ, ಹಣ ಅಕ್ರಮ ವರ್ಗಾವಣೆ ಮತ್ತು ಲಂಚ ಪಡೆದಿರುವ ಆರೋಪದ ಕುರಿತು ಆಲಂ ಅವರ ವಿಚಾರಣೆ ನಡೆಸಲಾಗುತ್ತಿದೆ. ಮೇ 15ರಂದು ಆಲಂಗೀರ್ ಆಲಂ ಅವರನ್ನು ಬಂಧಿಸಲಾಗಿತ್ತು.

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಶ್ರೇಯಾಂಕಿತ ಆಟಗಾರರ ಮುನ್ನಡೆ

ರಫೆಲ್ ನಡಾಲ್ ನಿರ್ಗಮನ

ಪ್ಯಾರಿಸ್ (ಎಪಿ): ರೋಲಂಡ್ ಗ್ಯಾರೋಸ್‌ನಲ್ಲಿ ಗೆಲುವಿನ ಹಲವು ದಾಖಲೆಗಳನ್ನು ಸ್ಥಾಪಿಸಿದ್ದ ಸ್ಪೇನ್‌ನ ರಫೆಲ್ ನಡಾಲ್ ಅವರ ಬಹುತೇಕ ಕೊನೆಯ ಫ್ರೆಂಚ್ ಓಪನ್ ಟೂರ್ನಿ ಸೋಮವಾರ ಮೊದಲ ಸುತ್ತಿನ ಸೋಲಿನೊಂದಿಗೆ ಅಂತ್ಯಗೊಂಡಿತು. 14 ಬಾರಿ ಇಲ್ಲಿ ಟ್ರೋಫಿ ಎತ್ತಿರುವ ನಡಾಲ್, ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಅಲೆಕ್ಸಾಂಡರ್ ಜ್ವರೇವ್ ಅವರಿಗೆ ನೇರ ಸೆಟ್‌ಗಳಲ್ಲಿ ಮಣಿದರು.

ಜೂನ್ 3ರಂದು 38ನೇ ವರ್ಷಕ್ಕೆ ಕಾಲಿಡಲಿರುವ ನಡಾಲ್ 6–3, 7–6 (7–5), 6–3 ರಿಂದ ಜರ್ಮನಿಯ ಆಟಗಾರನಿಗೆ ಮಣಿದರು. 2005 ರಲ್ಲಿ ಆವೆಮಣ್ಣಿನ ಅಂಕಣದ ಈ ಟೂರ್ನಿಯಲ್ಲಿ ಪ್ರಶಸ್ತಿಯೊಡನೆ ಪದಾರ್ಪಣೆ ಮಾಡಿದ್ದ ನಡಾಲ್ ಅವರಿಗೆ ಇದು ಇಲ್ಲಿ 116 ಪಂದ್ಯಗಳಲ್ಲಿ ಕೇವಲ ನಾಲ್ಕನೇ ಸೋಲು ಎನಿಸಿತು. ಅವರು ಇಲ್ಲಿ ಎಂದೂ ಮೊದಲ ಸುತ್ತಿನಲ್ಲಿ ಸೋತಿರಲಿಲ್ಲ.

ಈಗ ಅವರ ವೃತ್ತಿಜೀವನದ ಮೇಲೆ ಮತ್ತೆ ಪ್ರಶ್ನಾರ್ಥಕ ಚಿಹ್ನೆ ಮೂಡಿದೆ. 'ಕೊನೆಯ ಬಾರಿ ನಾನು ಇಲ್ಲಿ ಆಡುತ್ತಿದ್ದೇನೆಯೇ ಎಂಬುದು ಗೊತ್ತಿಲ್ಲ. ಈ ವಿಷಯದಲ್ಲಿ ಶೇ 100ರಷ್ಟು ಖಚಿತವಿಲ್ಲ. ಆದರೆ ಕೊನೆಯದಾದರೆ ಖುಷಿಯಿಂದ ಆಡುವೆ' ಎಂದು ನಡಾಲ್ ಹೇಳಿದ್ದರು.

ಗಾಯದ ಸಮಸ್ಯೆಯಿದ ಅವರು ಜನವರಿಯಿಂದೀಚೆಗೆ ಕೇವಲ ನಾಲ್ಕು ಟೂರ್ನಿಗಳಲ್ಲಿ ಆಡಿದ್ದಾರೆ. ವಿಶ್ವದ ಅಗ್ರ ಕ್ರಮಾಂಕದ ಆಟಗಾರನಾಗಿದ್ದ ಅವರು ಈಗ 275ನೇ ಕ್ರಮಾಂಕಕ್ಕೆ ಕುಸಿದಿದ್ದಾರೆ. ಕಳೆದ ಬಾರಿ ಚಾಂಪಿಯನ್ ಆಗಿದ್ದ ಅವರು ಈ ಬಾರಿ ಶ್ರೇಯಾಂಕರಹಿತ ಆಟಗಾರನಾಗಿದ್ದರು.

2022ರಲ್ಲಿ ನಡಾಲ್ ಮತ್ತು ಜ್ವರೇವ್ ಇಲ್ಲಿ ಸೆಮಿಫೈನಲ್‌ನಲ್ಲಿ ಎದುರಾಳಿಗಳಾಗಿದ್ದರು. ಆಗ ಪಾದದ ನೋವಿನಿಂದ ಜ್ವರೇವ್ ಪಂದ್ಯದಿಂದ ಹೊರನಡೆದಿದ್ದರು. ಆದರೆ ಸಂಪೂರ್ಣ ಫಿಟ್ ಆಗಿದ್ದ 27 ವರ್ಷ ವಯಸ್ಸಿನ ಜ್ವರೇವ್ ಹಿಂದಿನ ಪಂದ್ಯದಲ್ಲಿ ಮೇಲುಗೈ ಸಾಧಿಸಿದರು. ಮೊದಲ ಸೆಟ್ 50 ನಿಮಿಷಗಳಲ್ಲಿ ಜಯಿಸಿದರು. ಎರಡನೇ ಸೆಟ್ ಟೈಬ್ರೇಕರ್‌ಗೆ ಬೆಳೆಯಿತು. ಮೂರನೇ ಸೆಟ್‌ನ ಆರಂಭದಲ್ಲಿ ನಡಾಲ್ 2–0 ಮುನ್ನಡೆ ಪಡೆದರೂ, ನಂತರ ಜ್ವರೇವ್ ಪ್ರಾಬಲ್ಯ ಹೆಚ್ಚಿತು.

ಫಿಲಿಪ್ ಶಾಟಿಯೆ ಕೋರ್ಟ್‌ನಲ್ಲಿ 'ರಫಾ, ರಫಾ' ಎಂಬ ಘೋಷಣೆಗಳು ಪ್ರತಿಧ್ವನಿಸಿದವು.

ಶ್ವಾಂಟೆಕ್ ಮುನ್ನಡೆ: ಸತತ ಮೂರನೇ ಸಲ ಪ್ರಶಸ್ತಿ ಗೆಲುವಿನ ಪ್ರಯತ್ನದಲ್ಲಿರುವ ಪೋಲೆಂಡ್‌ನ ಇಗಾ ಶ್ವಾಂಟೆಕ್ ಮೊದಲ ಸುತ್ತಿನ ಪಂದ್ಯದಲ್ಲಿ ಲಿಯೊಲಿಯಾ ಜೀನ್‌ಜೀನ್ ಅವರನ್ನು ಸೋಲಿಸಿದರು. ಇದು ಅವರಿಗೆ ಇಲ್ಲಿ ಸತತ 15ನೇ ಗೆಲುವು.

ಶ್ವಾಂಟೆಕ್ ಈ ಪಂದ್ಯವನ್ನು 6–1, 6–2 ರಿಂದ ಸುಲಭವಾಗಿ ಗೆದ್ದುಕೊಂಡರು.

ವಿಂಬಲ್ಡನ್ ಚಾಂಪಿಯನ್ ಮರ್ಕೆತಾ ವೊಂದ್ರುಸೋವಾ 6–1, 6–3 ರಿಂದ ರೆಬೆಕಾ ಮಸರೋವಾ ಅವರನ್ನು ಹಿಮ್ಮೆಟ್ಟಿಸಿದರೆ, ಎರಡು ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಫೈನಲ್ ತಲುಪಿರುವ ಆನ್ಸ್ ಜೇಬರ್ (ಟ್ಯುನೀಷಿಯಾ) 6–3, 6–2 ರಿಂದ ಅಮೆರಿಕದ ಸಚಿಯಾ ವಿಕೆರಿ ಅವರನ್ನು ಪರಾಭವಗೊಳಿಸಿದರು. ವಿಕೆರಿ ಈ ಟೂರ್ನಿಗೆ ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದರು.

ಗಾಫ್ ಮುನ್ನಡೆ: ಮೂರನೇ ಶ್ರೇಯಾಂಕದ ಕೊಕೊ ಗಾಫ್ ಮೊದಲ ಸುತ್ತಿನಲ್ಲಿ ರಷ್ಯಾದ ಕ್ವಾಲಿಫೈಯರ್ ಜೂಲಿಯಾ ಅವ್ದೀವಾ ಅವರನ್ನು 6–1, 6–1 ರಿಂದ ಸೋಲಿಸಲು ತೆಗೆದುಕೊಂಡಿದ್ದು 52 ನಿಮಿಷಗಳನ್ನಷ್ಟೇ. ಇದು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಅಮೆರಿಕದ ಆಟಗಾರ್ತಿಗೆ 50ನೇ ಜಯವಾಯಿತು. ಜೂಲಿಯಾ ವಿಶ್ವಕ್ರಮಾಂಕದಲ್ಲಿ 208ನೇ ಸ್ಥಾನದಲ್ಲಿದ್ದಾರೆ. ಅಮೆರಿಕ ಓಪನ್ ಚಾಂಪಿಯನ್ ಆಗಿರುವ ಗಾಫ್, 2022ರಲ್ಲಿ ಈ ಟೂರ್ನಿಯಲ್ಲಿ ಇಗಾ ಎದುರು ಫೈನಲ್‌ನಲ್ಲಿ ಸೋತಿದ್ದರು.

ಸಿನ್ನರ್‌ಗೆ ಸುಲಭ ಜಯ ಪುರುಷರ ಸಿಂಗಲ್ಸ್‌ನಲ್ಲಿ, ಆಸ್ಟ್ರೇಲಿಯನ್ ಓಪನ್ ಚಾಂಪಿಯನ್ ಯಾನಿಕ್ ಸಿನ್ನರ್ 6–3, 6–3, 6–4 ರಿಂದ ಕ್ರಿಸ್ ಯುಬ್ಯಾಂಕ್ಸ್ ಅವರನ್ನು ಮಣಿಸಿದರು. ಸಿನ್ನರ್ ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿದರು. 10 ಬ್ರೇಕ್‌ಪಾಯಿಂಟ್‌ಗಳಲ್ಲಿ 5 ಅನ್ನು ಪರಿವರ್ತಿಸಿದರು. ಒಂದು ಬಾರಿ ಮಾತ್ರ ಸರ್ವ್ ಕಳೆದುಕೊಂಡರು.

ಒಂಬತ್ತನೇ ಶ್ರೇಯಾಂಕದ ಆಟಗಾರ ಸ್ಟಿಫಾನೊಸ್ ಸಿಸಿಪಸ್ (ಗ್ರೀಸ್) ಅವರು 7–6 (9–7), 6–4, 6–1 ರಿಂದ ಹಂಗೆರಿಯ ಮಾರ್ಟನ್ ಫುಸ್ಕೊವಿಸ್ ಅವರನ್ನು ಸೋಲಿಸಿದರು.



ಮೊದಲ ಸುತ್ತಿನ ಸೋಲಿನ ನಂತರ ಪ್ರೇಕ್ಷಕರತ್ತ ಕೈಬೀಸಿದ ನಡಾಲ್ ಎಎಫ್‌ಪಿ ಚಿತ್ರ

ಸುಮಿತ್‌ಗೆ ಸೋಲು

ಪ್ಯಾರಿಸ್ (ಪಿಟಿಐ): ಕೊನೆಗಳಿಗೆಯ ಹೋರಾಟದ ಹೊರತಾಗಿಯೂ ಭಾರತದ ಸುಮಿತ್ ನಗಾಲ್, ಫ್ರೆಂಚ್ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಭರ್ಜರಿ ಹೊಡೆತಗಳನ್ನಟ್ಟುವ ರಷ್ಯದ ಆಟಗಾರ ಕರೆನ್ ಕಚನೋವ್ ಅವರಿಗೆ ಸೋಮವಾರ ನೇರ ಸೆಟ್‌ಗಳಲ್ಲಿ ಸೋತರು.

ವಿಶ್ವ ಕ್ರಮಾಂಕದಲ್ಲಿ 95ನೇ ಸ್ಥಾನದಲ್ಲಿರುವ ಭಾರತದ ಆಟಗಾರ 2–6, 0–6, 6–7 (5–7) ರಲ್ಲಿ ಸೋತರು. ಆಸ್ಟ್ರೇಲಿಯಾ ಓಪನ್‌ನ ಮೊದಲ ಸುತ್ತಿನಲ್ಲಿ 31ನೇ ರ್‍ಯಾಂಕಿನ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ಸೋಲಿಸಿ ಸುದ್ದಿಯಾಗಿದ್ದರು. ಆದರೆ ಇಲ್ಲಿ ಅಂಥ ಆಟ ಬರಲಿಲ್ಲ.

ಕೋಚ್ ಅರ್ಜಿಗೆ ಗಡುವು ಮುಕ್ತಾಯ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಗೊಳಿಸಿದ್ದ ಅಂತಿಮ ಗಡುವು ಸೋಮವಾರ ಮುಕ್ತಾಯವಾಯಿತು.

ಆದರೆ ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ಅವರು ತಾವು ಕೋಚ್ ಹುದ್ದೆಗೆ ಆಕಾಂಕ್ಷಿಯಾಗಿರುವರೇ ಎಂಬುದರ ಕುರಿತು ಮೌನ ಮುರಿದಿಲ್ಲ.

ಈ ಬಾರಿಯ ಐಪಿಎಲ್ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮೆಂಟರ್ ಆಗಿರುವ ಗೌತಮ್ ಅವರು ಭಾರತ ತಂಡದ ಕೋಚ್ ಹುದ್ದೆ ಆಕಾಂಕ್ಷಿಯಾಗಿದ್ದಾರೆಂಬ ಮಾತುಗಳೂ ಕೇಳಿಬಂದಿದ್ದವು.

ಭಾನುವಾರ ಚೆನ್ನೈನಲ್ಲಿ ಐಪಿಎಲ್ ಫೈನಲ್ ಮುಗಿದ ನಂತರ ಕೋಲ್ಕತ್ತ ತಂಡದ ಮಾಲೀಕ ಶಾರೂಕ್ ಖಾನ್ ಅವರು ಗಂಭೀರ್ ಅವರನ್ನು ತಮ್ಮ ಫ್ರ್ಯಾಂಚೈಸಿಯೊಂದಿಗೆ ಉಳಿಸಿಕೊಳ್ಳಲು ಪ್ರಯತ್ನಿಸಿರುವ ಕುರಿತು ಮಾತನಾಡಿದ್ದಾರೆಂದೂ ಹೇಳಲಾಗಿದೆ.

ಆದರೆ ಗೌತಮ್ ಆಗಲಿ ಅಥವಾ ಬೇರೆ ಮಾಜಿ ಆಟಗಾರರಾಗಲಿ ಅರ್ಜಿ ಸಲ್ಲಿಸಿದ ಕುರಿತು ಇದುವರೆಗೆ ಹೇಳಿಕೊಂಡಿಲ್ಲ. ಬಿಸಿಸಿಐನಿಂದ ಕೂಡ ಅಧಿಕೃತ ಹೇಳಿಕೆ ಬಂದಿಲ್ಲ.

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರ ಹೆಸರು ಕೂಡ ಕೋಚ್ ಹುದ್ದೆಗೆ ಕೇಳಿಬರುತ್ತಿದೆ. ಕೆಲವು ವಿದೇಶಿ ಕೋಚ್‌ಗಳೂ ಅರ್ಜಿ ಸಲ್ಲಿಸಿರುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ.

'ಟಿ20 ವಿಶ್ವಕಪ್ ಟೂರ್ನಿಯು ಇನ್ನೇನು ಆರಂಭವಾಗಲಿದೆ. ಆದ್ದರಿಂದ ಬಿಸಿಸಿಐ ಅರ್ಜಿಗಳ ಪರಿಶೀಲನೆ ಮತ್ತು ಪ್ರಕ್ರಿಯೆಗಳಿಗೆ ಇನ್ನಷ್ಟು ಸಮಯ ತೆಗೆದುಕೊಳ್ಳಬಹುದು' ಎಂದು ಮೂಲಗಳು ತಿಳಿಸಿವೆ.

ಶ್ರೀಲಂಕಾದ ಮುಡಿಗೆ ಕಿರೀಟ

ಟಿ20 ವಿಶ್ವಕಪ್ ಮೆಲುಕು

- 1996ರಲ್ಲಿ ಏಕದಿನ ವಿಶ್ವಕಪ್ ಗೆದ್ದಿದ್ದ ಶ್ರೀಲಂಕಾ ತಂಡವು ಸ್ಟಾರ್ ಆಟಗಾರರನ್ನು ಹೊಂದಿದ್ದರೂ ನಂತರದ ಟೂರ್ನಿಗಳಲ್ಲಿ ತೀವ್ರ ನಿರಾಸೆ ಅನುಭವಿಸಿತ್ತು. ನಾಲ್ಕು ಐಸಿಸಿ ವಿಶ್ವಕಪ್ ಟೂರ್ನಿಗಳಲ್ಲಿ (2007, 2011ರ ಏಕದಿನ ವಿಶ್ವಕಪ್ ಮತ್ತು 2009, 2012ರ ಟಿ20 ವಿಶ್ವಕಪ್) ಫೈನಲ್ ಪ್ರವೇಶಿಸಿದ್ದರೂ ಟ್ರೋಫಿ ಒಲಿದಿರಲಿಲ್ಲ. ಈ ಟೂರ್ನಿಯ ಮೂಲಕ 18 ವರ್ಷಗಳ ಪ್ರಶಸ್ತಿ ಬರವನ್ನು ಕೊನೆಗೂ ನೀಗಿಸಿಕೊಂಡಿತು.
- ಲಂಕಾದ ಅನುಭವಿ ಬ್ಯಾಟರ್‌ಗಳಾದ ಮಹೇಲ ಜಯವರ್ಧನೆ ಮತ್ತು ಕುಮಾರ ಸಂಗಕ್ಕಾರ ಅವರಿಗೆ ಚುಟುಕು ಕ್ರಿಕೆಟ್‌ನಲ್ಲಿ ಇದು ವಿದಾಯದ ಟೂರ್ನಿಯಾಗಿತ್ತು. ಢಾಕಾದಲ್ಲಿ ನಡೆದ ಫೈನಲ್ ಹಣಾಹಣಿಯಲ್ಲಿ ಭಾರತ ತಂಡವನ್ನು ಮಣಿಸಿ, ಅವರು ನಿವೃತ್ತಿ ಘೋಷಿಸಿದ್ದರು.
- ಬಾಂಗ್ಲಾದೇಶದ ಆತಿಥ್ಯದಲ್ಲಿ 2014 ಮಾರ್ಚ್ 16ರಿಂದ ಏಪ್ರಿಲ್ 6ರವರೆಗೆ ಟೂರ್ನಿ ನಡೆಯಿತು. ಟಿ20 ಕ್ರಿಕೆಟ್‌ನಲ್ಲಿ ಇಲ್ಲಿ ಮೊದಲ ಬಾರಿ ಯುಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ) ಜಾರಿಗೊಳಿಸಲಾಯಿತು.
- ಈ ಹಿಂದಿನ ನಾಲ್ಕು ವಿಶ್ವಕಪ್ ಟೂರ್ನಿಗಳಲ್ಲಿ 12 ತಂಡಗಳು ಮಾತ್ರ ಸ್ಪರ್ಧೆ ಮಾಡಿದ್ದವು. ಆದರೆ, ಈ ಟೂರ್ನಿಯಲ್ಲಿ 16 ತಂಡಗಳು ಟ್ರೋಫಿಗಾಗಿ ಸೆಣಸಾಟ ನಡೆಸಿದವು. ಯುಎಇ, ನೇಪಾಳ ಮತ್ತು ಹಾಂಗ್‌ಕಾಂಗ್ ತಂಡಗಳು ಚೊಚ್ಚಲ ಪ್ರವೇಶ ಪಡೆದಿದ್ದವು.



ಕುಮಾರ ಸಂಗಕ್ಕಾರ ಮತ್ತು ಮಹೇಲ ಜಯವರ್ಧನೆ

- ಕ್ರಿಕೆಟ್ ಶಿಶು ನೆದರ್ಲೆಂಡ್ಸ್ ತಂಡವು ಸೂಪರ್ 10 ಹಂತದ ಪಂದ್ಯದಲ್ಲಿ ಬಲಿಷ್ಠ ಇಂಗ್ಲೆಂಡ್ ತಂಡವನ್ನು 45 ರನ್‌ಗಳಿಂದ ಮಣಿಸಿ ಅಚ್ಚರಿ ಮೂಡಿಸಿತ್ತು.
- ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡವನ್ನು ಮಹೇಂದ್ರ ಸಿಂಗ್ ಧೋನಿ ಐದನೇ ಬಾರಿ ಮುನ್ನಡೆಸಿದ್ದರು. ಪಾಕಿಸ್ತಾನದ ವಿರುದ್ಧ 7 ವಿಕೆಟ್‌ಗಳ ಸುಲಭ ಜಯ ಸಾಧಿಸಿದ್ದ ಭಾರತ, ಸೂಪರ್ ಟೆನ್ ಹಂತದಲ್ಲಿ ಎಲ್ಲ ನಾಲ್ಕು ಪಂದ್ಯಗಳನ್ನು ಗೆದ್ದು ಅಗ್ರಸ್ಥಾನದೊಂದಿಗೆ ಸೆಮಿಫೈನಲ್‌ಗೆ ಭಾರತ ಲಗ್ಗೆ ಹಾಕಿತ್ತು. ಅಲ್ಲಿ ದಕ್ಷಿಣ ಆಫ್ರಿಕಾವನ್ನು ಮಣಿಸಿ ಫೈನಲ್ ಪ್ರವೇಶಿಸಿತ್ತು.
- ಶ್ರೀಲಂಕಾ ತಂಡವು ಸೂಪರ್ 10 ಹಂತದಲ್ಲಿ ಇಂಗ್ಲೆಂಡ್ ವಿರುದ್ಧ 6 ವಿಕೆಟ್‌ಗಳ ಸೋಲು ಅನುಭವಿಸಿದರೂ ಅಗ್ರಸ್ಥಾನದೊಂದಿಗೆ ಸೆಮಿಫೈನಲ್ ಪ್ರವೇಶಿಸಿತ್ತು. ಅಲ್ಲಿ 2012ರ ಆವೃತ್ತಿಯ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿ ಫೈನಲ್‌ಗೇರಿತ್ತು.
- ಫೈನಲ್‌ನಲ್ಲಿ ಟಾಸ್ ಸೋತ ಭಾರತ ಮೊದಲು ಬ್ಯಾಟಿಂಗ್ ಮಾಡಿತು. ವಿರಾಟ್ ಕೊಹ್ಲಿ (77 ರನ್; 58ಎಸೆತ) ಅವರ ಅರ್ಧಶತಕದ ನೆರವಿನಿಂದ ನಾಲ್ಕು ವಿಕೆಟ್‌ಗೆ 130 ರನ್ ಗಳಿಸಿತು. ಶ್ರೀಲಂಕಾ ತಂಡವು 13 ಎಸೆತ ಬಾಕಿ ಇರುವಂತೆ ನಾಲ್ಕು ವಿಕೆಟ್‌ಗೆ 134 ರನ್ ಸೇರಿಸಿ, ಪ್ರಶಸ್ತಿಯನ್ನು ಗೆದ್ದುಕೊಂಡಿತು. ವೃತ್ತಿ ಜೀವನದ ಕೊನೆಯ ಟಿ20 ಪಂದ್ಯದಲ್ಲಿ ಕುಮಾರ ಸಂಗಕ್ಕಾರ ಅವರು ಅಜೇಯ 52 ರನ್ (35ಎ) ಗಳಿಸಿ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರವಾದರು.

ಪ್ರಮುಖ ಅಂಶಗಳು

- ಐದನೇ ವಿಶ್ವಕಪ್: 2014
- ಆತಿಥ್ಯ: ಬಾಂಗ್ಲಾದೇಶ
- ವಿಜೇತ ತಂಡ: ಶ್ರೀಲಂಕಾ
- ರನ್ನರ್ಸ್ ಅಪ್: ಭಾರತ
- ತಂಡಗಳು: 16
- ಪಂದ್ಯಗಳು: 35
- ಸರಣಿ ಶ್ರೇಷ್ಠ, ಬ್ಯಾಟರ್: ವಿರಾಟ್ ಕೊಹ್ಲಿ (ಭಾರತ, 319 ರನ್)
- ಶ್ರೇಷ್ಠ ಬೌಲರ್: ಇಮ್ರಾನ್ ತಾಹೀರ್ (ದಕ್ಷಿಣ ಆಫ್ರಿಕಾ), ಎಹಸಾನ್ ಮಲಿಕ್ (ನೆದರ್ಲೆಂಡ್ಸ್) ತಲಾ 12 ವಿಕೆಟ್.

ಆಧಾರ: ಕ್ರೀಡಾ ವೆಬ್‌ಸೈಟ್‌ಗಳು

ವೈಫಲ್ಯಗಳ ದಾಟಿದ ಅಯ್ಯರ್‌ಗೆ ಪ್ರಶಸ್ತಿಯ ಶ್ರೇಯ

ಕೋಲ್ಕತ್ತ (ಪಿಟಿಐ): ಕಳೆದ ಸಲ ಫಿಫಾ ವಿಶ್ವಕಪ್ ಜಯಿಸಿದ್ದ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಅವರು ಕಪ್ ಸ್ವೀಕರಿಸಿದ ನಂತರ ಮಾಡಿದ್ದ ಸಂಭ್ರಮಾಚರಣೆಯು ಗಮನ ಸೆಳೆದಿತ್ತು. ಅದೇ ಶೈಲಿಯ 'ವಿಜಯೋತ್ಸವದ ಹೆಜ್ಜೆ'ಗಳನ್ನು ಭಾನುವಾರ ರಾತ್ರಿ ಚೆನ್ನೈನಲ್ಲಿ ಐಪಿಎಲ್ ಟ್ರೋಫಿ ಗೆದ್ದ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಅವರು ಪ್ರದರ್ಶಿಸಿದರು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಅಯ್ಯರ್ ಬಳಗವು 8 ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡದ ಎದುರು ಸುಲಭ ಜಯ ಸಾಧಿಸಿತು. ಈ ಜಯವು ಶ್ರೇಯಸ್ ಪಾಲಿಗೆ ದೊಡ್ಡ ಸಾಧನೆಯೇ ಸರಿ.

ಏಕೆಂದರೆ; ಐಪಿಎಲ್ ಟೂರ್ನಿ ಆರಂಭಕ್ಕೆ ಕೆಲವೇ ದಿನಗಳು ಬಾಕಿಯಿದ್ದ ಸಂದರ್ಭದಲ್ಲಿ ಅಯ್ಯರ್ ಅವರನ್ನು ಬಿಸಿಸಿಐ ಕೇಂದ್ರ ಗುತ್ತಿಗೆಯಿಂದ ಕೈಬಿಡಲಾಗಿತ್ತು. ಅಲ್ಲದೇ ಬೆನ್ನುಹುರಿಯ ಗಾಯದಿಂದಲೂ ಅವರು ಬಹಳಷ್ಟು ಬಳ ಲಿದ್ದರು. ಅವರ ವೃತ್ತಿಜೀವನವು ಡೋಲಾಯಮಾನವಾದ ಸ್ಥಿತಿ ಅದಾಗಿತ್ತು. ಶ್ರೇಯಸ್ ವೈಫಲ್ಯ ಮತ್ತು ನಿರಾಶೆಗಳಿಂದ ಎದ್ದುಬಂದು ಕೆಕೆಆರ್ ತಂಡವನ್ನು ಪ್ರಶಸ್ತಿಯತ್ತ ಮುನ್ನಡೆಸಿದರು.

ಈ ಹಿಂದೆ ಎರಡು ಬಾರಿ ಚಾಂಪಿಯನ್ ಆಗಿದ್ದ ತಂಡವು ಹತ್ತು ವರ್ಷದ ನಂತರ ಮತ್ತೆ ಪ್ರಶಸ್ತಿ ಗೆದ್ದಿತು. 'ತಂಡದ ಮೆಂಟರ್ ಗೌತಮ್ ಗಂಭೀರ್ ಅವರ ಬಗ್ಗೆ ಬಹಳಷ್ಟು ಮೆಚ್ಚುಗೆಯ ಮಾತುಗಳನ್ನು ಕೇಳುತ್ತಿದ್ದೇನೆ. ಆದರೆ ಆ ವ್ಯಕ್ತಿಗೆ (ಶ್ರೇಯಸ್)ಗೆ ಸಿಗಬೇಕಾದಷ್ಟು ಶ್ರೇಯ ಸಿಗುತ್ತಿಲ್ಲ. ಅವರಿಗೂ ಈ ಜಯದ ಹೆಗ್ಗಳಿಕೆ ಸಿಗಲೇಬೇಕು' ಎಂದು ವೀಕ್ಷಕ ವಿವರಣೆಗಾರ ಇಯಾನ್ ಬಿಷಪ್ ಪಂದ್ಯದ ನಂತರ ಹೇಳಿದ್ದರು.

ಪಂದ್ಯಗಳಲ್ಲಿ ಕೆಕೆಆರ್ ತಂಡಕ್ಕೆ ಸುನಿಲ್ ನಾರಾಯಣ್ ಮತ್ತು ಫಿಲ್ ಸಾಲ್ಟ್ ಅವರು ಉತ್ತಮ ಆರಂಭ ನೀಡಿದ್ದರು. ಆದರೆ ತಂಡದ ಸಾಂಘಿಕ ಪ್ರಯತ್ನ ದೊಡ್ಡದು. ಅದರಿಂದಲೇ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

'ಈ ಪ್ರಶಸ್ತಿಗಾಗಿ ದೀರ್ಘ ಸಮಯದಿಂದ ಕಾದಿದ್ದೆವು. ಇಡೀ ಟೂರ್ನಿಯಲ್ಲಿ ಸೋಲರಿಯದಂತೆ ಆಡಿದೆವು. ಅದರ ಫಲವಾಗಿ ಈಗ ಸಂಭ್ರಮಿಸುತ್ತಿದ್ದೇವೆ' ಎಂದು ಪಂದ್ಯದ ನಂತರ ಶ್ರೇಯಸ್ ಅಯ್ಯರ್ ಹೇಳಿದರು.

ಹೋದ ವರ್ಷದ ಐಪಿಎಲ್‌ನಲ್ಲಿ ಶ್ರೇಯಸ್ ಆಡಿರಲಿಲ್ಲ. ಆ ಸಂದರ್ಭದಲ್ಲಿ ಅವರು ಶಸ್ತ್ರಚಿಕಿತ್ಸೆಗಾಗಿ ಲಂಡನ್‌ನಲ್ಲಿದ್ದರು. ಮುಂಬೈನ ಶ್ರೇಯಸ್ ಏಷ್ಯಾ ಕಪ್ ಟೂರ್ನಿಯಲ್ಲಿ ಮತ್ತೆ ಕಣಕ್ಕಿಳಿದಿದ್ದರು. ವಿಶ್ವಕಪ್ ಫೈನಲ್‌ನಲ್ಲಿ ಶ್ರೇಯಸ್ ಇದ್ದ ಭಾರತ ತಂಡ ಸೋಲಿಸಿದ್ದ ಆಸ್ಟ್ರೇಲಿಯಾ ತಂಡಕ್ಕೆ ಪ್ಯಾಟ್ ಕಮಿನ್ಸ್ ನಾಯಕರಾಗಿದ್ದರು. ಇದೀಗ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ಬಳಗವನ್ನು ಶ್ರೇಯಸ್ ಪಡೆ ಮಣಿಸಿತು.



ಮಿಚೆಲ್ ಸ್ಟಾರ್ಕ್ ಮತ್ತು ಶ್ರೇಯಸ್ ಅಯ್ಯರ್– ಎಎಫ್‌ಪಿ ಚಿತ್ರ

ಕ್ರೀಡಾಂಗಣ ಸಿಬ್ಬಂದಿ, ಕ್ಯುರೇಟರ್‌ಗೆ ನಗದು ಪುರಸ್ಕಾರ

ನವದೆಹಲಿ(ಪಿಟಿಐ): ಐಪಿಎಲ್ ಪಂದ್ಯಗಳು ನಡೆದ ಎಲ್ಲ ಕ್ರೀಡಾಂಗಣಗಳ ಕ್ಯುರೇಟರ್ ಹಾಗೂ ಮೈದಾನ ಸಿಬ್ಬಂದಿಗೆ ನಗದು ಬಹುಮಾನ ವನ್ನು ಬಿಸಿಸಿಐ ಘೋಷಿಸಿದೆ.

ಪ್ರತಿವರ್ಷ ಐಪಿಎಲ್ ನಡೆಯುವ ಹತ್ತು ಕ್ರೀಡಾಂಗಣಗಳ ಕ್ಯುರೇಟರ್ ಹಾಗೂ ಮೈದಾನ ಸಿಬ್ಬಂದಿಗೆ ತಲಾ ₹ 25 ಲಕ್ಷ ಹಾಗೂ ಹೆಚ್ಚುವರಿ ತಾಣಗಳ ಸಿಬ್ಬಂದಿಗೆ ತಲಾ ₹ 10 ಲಕ್ಷ ನೀಡಲಾಗುವುದು ಎಂದು ಬಿಸಿಸಿಐ ಪ್ರಧಾನ ಕಾರ್ಯದರ್ಶಿ ಜಯ್ ಶಾ 'ಎಕ್ಸ್' ಸಂದೇಶ ಹಾಕಿದ್ದಾರೆ.

'ಎರಡು ತಿಂಗಳುಗಳ ಕಾಲ ಐಪಿಎಲ್ ಟೂರ್ನಿಯ ಪಂದ್ಯಗಳು ಅದ್ದೂರಿಯಾಗಿ ನಡೆಯಲು ಕಾರಣವಾದ ತೆರೆಮರೆಯ ರೂವಾರಿಗಳು ಇವರು. ಮೈದಾನ ಸಿಬ್ಬಂದಿ ಸೇವೆಯನ್ನು ಗುರುತಿಸುವುದು ನಮ್ಮ ಕರ್ತವ್ಯ' ಎಂದಿದ್ದಾರೆ. ಮುಂಬೈ, ಡೆಲ್ಲಿ, ಚೆನ್ನೈ, ಕೋಲ್ಕತ್ತ, ಚಂಡೀಗಡ, ಹೈದರಾಬಾದ್, ಬೆಂಗಳೂರು, ಲಖನೌ, ಅಹಮದಾಬಾದ್ ಹಾಗೂ ಜೈಪುರ ಕ್ರೀಡಾಂಗಣಗಳಿಗೆ ₹ 25 ಲಕ್ಷ ಘೋಷಿಸಲಾಗಿದೆ. ಗುವಾಹಟಿ, ವಿಶಾಖಪಟ್ಟಣ ಹಾಗೂ ಧರ್ಮಶಾಲಾ ಮೈದಾನಗಳಿಗೆ ತಲಾ ₹ 10 ಲಕ್ಷ ನೀಡಲಾಗುವುದು. 'ಈ ಬಾರಿಯ ಟೂರ್ನಿಯನ್ನು ಯಶಸ್ವಿಗೊಳಿಸಿದ ಎಲ್ಲರಿಗೂ ಹಾಗೂ ಪ್ರತಿ ಪಂದ್ಯಕ್ಕೂ ಕಿಕ್ಕಿರಿದು ಸೇರಿ ಪ್ರೋತ್ಸಾಹಿಸಿದ ಲಕ್ಷಾಂತರ ಪ್ರೇಕ್ಷಕರಿಗೆ ಆಭಾರಿಯಾಗಿದ್ದೇವೆ' ಎಂದೂ ಶಾ ಕೃತಜ್ಞತೆ ಸಲ್ಲಿಸಿದ್ದಾರೆ.

ಐಪಿಎಲ್‌ನ ಶ್ರೇಷ್ಠ ಎಸೆತ: ಮ್ಯಾಥ್ಯೂ ಹೇಡನ್


ಚೆನ್ನೈ (ಪಿಟಿಐ): ಐಪಿಎಲ್ ಫೈನಲ್ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ ಮಿಚೆಲ್ ಸ್ಟಾರ್ಕ್ ಅವರ ಎಸೆತವನ್ನು ಆಸ್ಟ್ರೇಲಿಯಾ ಕ್ರಿಕೆಟ್ ದಂತಕಥೆ ಮ್ಯಾಥ್ಯೂ ಹೇಡನ್ ಅವರು 'ಐಪಿಎಲ್ ಟೂರ್ನಿಯ ಎಸೆತ'ವೆಂದು ಶ್ಲಾಘಿಸಿದ್ದಾರೆ.

'ಸ್ಟಾರ್ಕ್ ಹಾಕಿದ ಆ ಎಸೆತದಲ್ಲಿ ಅಭಿಷೇಕ್ ಶರ್ಮಾ ಔಟಾಗುವುದರೊಂದಿಗೆ ಸನ್‌ರೈಸರ್ಸ್‌ಗೆ ಪಂದ್ಯ ಮುಗಿದಂತಾಗಿತ್ತು. ಅದು ಐಪಿಎಲ್‌ನಲ್ಲಿಯೇ ಅತ್ಯಂತ ಶ್ರೇಷ್ಠ ಎಸೆತ' ಎಂದುಹೇಡನ್ ಬಣ್ಣಿಸಿದರು.

'ಸ್ಟಾರ್ಕ್ 136 –137 ಕಿ.ಮೀ ವೇಗದಲ್ಲಿ ಎಸೆತ ಹಾಕುತ್ತಾರೆ. ಆದರೆ ಕಳೆದ ಎರಡು ವಾರಗಳಲ್ಲಿ ಅವರ ಎಸೆತಗಳ ವೇಗವು 140 ಕಿ.ಮೀ ದಾಟಿದೆ. ಅವರ ಮಣಿಕಟ್ಟಿನ ಚಲನೆ ವಿಶೇಷವಾಗಿತ್ತು. ಈ ಟೂರ್ನಿಯಲ್ಲಿ ಅವರು ಹೆಚ್ಚು ಸ್ವಿಂಗ್ ಮಾಡುವುದನ್ನು ನೋಡಿಲ್ಲ. ಆದರೆ ಕಳೆದ ಕೆಲವು ದಿನಗಳಲ್ಲಿ ಅವರ ಎಸೆತಗಳು ಪರಿಣಾಮಕಾರಿಯಾಗಿವೆ' ಎಂದು ಇಂಗ್ಲೆಂಡ್ ಕ್ರಿಕೆಟಿಗ ಕೆವಿನ್ ಪೀಟರ್ಸನ್ ಹೇಳಿದ್ದಾರೆ.

ಬಾಕ್ಸಿಂಗ್: ಬೊರೊಗೆ ಜಯ, ಲೂರಾಗೆ ಸೋಲು

ಬ್ಯಾಂಕಾಕ್ (ಪಿಟಿಐ): ಮಾಜಿ ವಿಶ್ವ ಯುವ ಚಾಂಪಿಯನ್ ಅಂಕುಶಿತಾ ಬೊರೊ 60 ಕೆ.ಜಿ ವಿಭಾಗದಲ್ಲಿ ಮಂಗೋಲಿಯಾದ ನಮುನ್ ಮೊಂಖೋರ್ ಅವರನ್ನು ಸೋಲಿಸಿದರೆ, ರಾಷ್ಟ್ರೀಯ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಅಭಿಮನ್ಯು ಲೂರಾ ಸೋಮವಾರ ನಡೆದ ಒಲಿಂಪಿಕ್ಸ್ ಬಾಕ್ಸಿಂಗ್ ವಿಶ್ವ ಕ್ವಾಲಿಫೈಯರ್ ಟೂರ್ನಿಯ 80 ಕೆ.ಜಿ ವಿಭಾಗದಲ್ಲಿ ಐರ್ಲೆಂಡ್‌ನ ಕೆಲಿನ್ ಕ್ಯಾಸಿಡಿ ವಿರುದ್ಧ ಸೋತರು.



ಅಭಿಮನ್ಯು ಲೂರಾ

ನಮುನ್ ವಿರುದ್ಧ ಉತ್ತಮವಾಗಿ ಆಡಿದ ಬೊರೊ, ಮೂರು ತೀವ್ರ ಪೈಪೋಟಿಯ ಸುತ್ತುಗಳ ನಂತರ 4-1 ಅಂತರದಲ್ಲಿ ಗೆಲುವು ಸಾಧಿಸಿದರು. ಬೊರೊ ತನ್ನ ತಂತ್ರಗಾರಿಕೆ ಮೂಲಕ ಎದುರಾಳಿಯ ವೇಗದ ಚಲನೆಗಳನ್ನು ಪರಿಣಾಮಕಾರಿಯಾಗಿ ಮೊಟಕುಗೊಳಿಸಿದರು.

ಬಲ್ಗೇರಿಯಾದ ಕ್ರಿಸ್ಟಿಯಾನ್ ನಿಕೊಲವ್ ಅವರನ್ನು ಮಣಿಸಿದ ಲೂರಾ, ಆತ್ಮವಿಶ್ವಾಸದಿಂದಲೇ ಕಣಕ್ಕಿಳಿದರು. ಲೂರಾ 0–5 ಅಂತರದಲ್ಲಿ ಕ್ಯಾಸಿಡಿ ಎದುರು ಸೋಲನುಭವಿಸಿದರು.

ಆಸ್ಟ್ರಿಯಾ ಓಪನ್: ಶುಭಂಕರ್‌ಗೆ ಸೋಲು

ಗ್ರಾಝ್ (ಆಸ್ಟ್ರಿಯಾ), (ಪಿಟಿಐ): ಭಾರತದ ಆಟಗಾರ ಶುಭಂಕರ್ ಡೇ ಅವರು ಆಸ್ಟ್ರಿಯನ್ ಓಪನ್ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಚಾಲೆಂಜ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಇಂಡೊನೇಷ್ಯಾದ ಪ್ರದಿಸ್ಕಾ ಬಗಾಸ್ ಶುಜಿವೊ ಅವರೆದುರು ಭಾನುವಾರ ಸೋಲನುಭವಿಸಿದರು. 30 ವರ್ಷ ವಯಸ್ಸಿನ ಶುಭಂಕರ್ 42 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ 17–21, 15–21ರಲ್ಲಿ ಪ್ರದಿಸ್ಕಾ ಅವರಿಗೆ ಮಣಿದರು. ಮೊದಲ ಸುತ್ತಿನಲ್ಲಿ ಜರ್ಮನಿಯ ಮಥಾಯಸ್ ಕಿಕ್‌ಲಿಟ್ಜ್ ಅವರನ್ನು, ಎರಡನೇ ಸುತ್ತಿನಲ್ಲಿ ಪೋಲೆಂಡ್‌ನ ಮಿಕೊಲಜ್ ಸಿಮಾನೋವಸ್ಕೆ ಅವರನ್ನು, ಕ್ವಾರ್ಟರ್‌ಫೈನಲ್‌ನಲ್ಲಿ ಆತಿಥೇಯ ಆಸ್ಟ್ರೇಲಿಯಾದ ಲುಕಾ ರೇಬರ್ ಅವರನ್ನು ಶುಭಂಕರ್ ಸೋಲಿಸಿದ್ದರು.

ಫುಟ್‌ಬಾಲ್:ಉಜ್ಬೇಕಿಸ್ತಾನ ವಿರುದ್ಧ 2 ಸೌಹಾರ್ದ ಪಂದ್ಯ

23 ಮಂದಿಯ ಮಹಿಳಾ ತಂಡ ಪ್ರಕಟ

ನವದೆಹಲಿ (ಪಿಟಿಐ): ಮೇ 31 ಮತ್ತು ಜೂನ್ 4 ರಂದು ತಾಷ್ಕೆಂಟ್‌ನಲ್ಲಿ ನಡೆಯಲಿರುವ ಉಜ್ಬೇಕಿಸ್ತಾನ ವಿರುದ್ಧದ ಎರಡು ಅಂತರರಾಷ್ಟ್ರೀಯ ಸೌಹಾರ್ದ ಪಂದ್ಯಗಳಿಗೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ (ಎಐಎಫ್‌ಎಫ್) ಸೋಮವಾರ 23 ಆಟಗಾರ್ತಿಯರ ಮಹಿಳಾ ತಂಡವನ್ನು ಪ್ರಕಟಿಸಿದೆ.

30 ಸಂಭಾವ್ಯ ಆಟಗಾರರೊಂದಿಗೆ ತಂಡವು ಹೈದರಾಬಾದ್‌ನ ಶ್ರೀನಿಧಿ ಡೆಕ್ಕನ್ ಎಫ್‌ಸಿಯ ತವರು ಮೈದಾನದಲ್ಲಿ ಎರಡು ವಾರಗಳ ಕಾಲ ತರಬೇತಿ ಪಡೆಯಿತು. ನಂತರ ಮುಖ್ಯ ಕೋಚ್ ಲಂಗಮ್ ಚಾವೊಬಾ ದೇವಿ ತಂಡದ ಆಟಗಾರರ ಸಂಖ್ಯೆಯನ್ನು 23ಕ್ಕೆ ಇಳಿಸಿದರು. ಭಾರತ ತಂಡ ಬುಧವಾರ ತಾಷ್ಕೆಂಟ್‌ಗೆ ಪ್ರಯಾಣ ಬೆಳೆಸಲಿದೆ.

ವರ್ಷದ ಆರಂಭದಲ್ಲಿ, ಎಸ್ಟೋನಿಯಾ ಮತ್ತು ಹಾಂಗ್‌ಕಾಂಗ್ ಒಳಗೊಂಡ ಚತುಷ್ಕೋನ ಟೂರ್ನಿಯಲ್ಲಿ ಭಾರತವು ಕೊಸೊವೊ ನಂತರ ಟರ್ಕಿಷ್ ಮಹಿಳಾ ಕಪ್‌ನಲ್ಲಿ ರನ್ನರ್ ಅಪ್ ಸ್ಥಾನ ಪಡೆದಿತ್ತು.

ಭಾರತ ಮಹಿಳಾ ತಂಡ: ಗೋಲ್ ಕೀಪರ್ಸ್: ಶ್ರೇಯಾ ಹೂಡಾ, ಮೈಬಾಮ್ ಲಿಂಟೊಯಿಂಗಂಬಿ ದೇವಿ, ಮೊಯಿರಾಂಗ್ಥೆಮ್ ಮೊನಾಲಿಶಾ ದೇವಿ. ಡಿಫೆಂಡರ್ಸ್: ಲೈಟಾಂಗ್ಬಾಮ್ ಆಶಾಲತಾ ದೇವಿ, ಸಂಜು, ಹೇಮನ್ ಶಿಲ್ಕಿ ದೇವಿ, ಜೂಲಿ ಕಿಶನ್, ಅಷ್ಟಮ್ ಒರಾನ್, ಅರುಣಾ ಬಾಗ್, ಸೊರೊಖೈಬಾಮ್ ರಂಜನಾ ಚಾನು, ವಾಂಗ್ಖೆಮ್ ಲಿಂಟೊಯಿಂಗಾಂಬಿ ದೇವಿ. ಮಿಡ್ ಫೀಲ್ಡರ್ಸ್: ಕಾರ್ತಿಕಾ ಅಂಗಮುತ್, ಕಾವಿಯಾ, ನರೇಮ್ ಪ್ರಿಯಾಂಕಾ ದೇವಿ, ನೇಹಾ, ಸಂಧ್ಯಾ ರಂಗನಾಥನ್, ಸಂಗೀತಾ ಬಾಸ್ಫೋರ್, ಸೌಮ್ಯ ಗುಗುಲೋತ್, ಅಂಜು ತಮಾಂಗ್. ಫಾರ್ವರ್ಡ್ಸ್: ಕಾಜೋಲ್ ಡಿಸೋಜಾ, ಕರಿಷ್ಮಾ ಶಿರ್ವೋಯ್ಕರ್, ಪ್ಯಾರಿ ಕ್ಸಾಕ್ಸಾ, ಸೆರ್ಟೊ ಲಿಂಡಾ ಕೋಮ್.

ರ‍್ಯಾಪಿಡ್ ಚೆಸ್: ಶರಣ್ ರಾವ್‌ಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಟರ್‌ನ್ಯಾಷನಲ್ ಮಾಸ್ಟರ್ ಶರಣ್ ರಾವ್, ಭಾನುವಾರ ಹೊಸಕೋಟೆ ತಾಲ್ಲೂಕಿನ ದೊಡ್ಡ ದುನ್ನಸಂದ್ರದಲ್ಲಿ ಮುಕ್ತಾಯಗೊಂಡ ಕರ್ನಾಟಕ ರಾಜ್ಯ ರ‍್ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ರಾಜ್ಯ ಬ್ಲಿಟ್ಝ್ ಚಾಂಪಿಯನ್‌ಷಿಪ್ ಪ್ರಶಸ್ತಿ ಮಂಗಳೂರಿನ ಸಿದ್ಧಾಂತ್ ಪೂಂಜಾ ಅವರ ಪಾಲಾಯಿತು.

ಶೃಂಗ ಇಂಟರ್‌ನ್ಯಾಷನಲ್ ಶಾಲೆಯಲ್ಲಿ, ಬೆಂಗಳೂರು ಗ್ರಾಮೀಣ ಜಿಲ್ಲಾ ಚೆಸ್ ಸಂಸ್ಥೆ ಆಶ್ರಯದಲ್ಲಿ ನಡೆದ ಎರಡು ದಿನಗಳ ರ‍್ಯಾಪಿಡ್ ಟೂರ್ನಿಯಲ್ಲಿ ಮಂಗಳೂರಿನ ಶರಣ್ 9 ಸುತ್ತುಗಳಿಂದ ಎಂಟು ಪಾಯಿಂಟ್ಸ್ (7 ಗೆಲುವು, 2 ಡ್ರಾ) ಗಳಿಸಿ ಅಜೇಯರಾಗುಳಿದರು. ಮೈಸೂರಿನ ಬಾಲಕಿಶನ್ ಎ ಮತ್ತು ಅಮನ್ ಖನ್ನಾ ಅವರೂ ತಲಾ ಎಂಟು ಪಾಯಿಂಟ್ಸ್ ಸಂಗ್ರಹಿಸಿದರೂ ಟೈಬ್ರೇಕ್ ಆಧಾರದ ಮೇಲೆ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಶರಣ್ ಮತ್ತು ಬಾಲಕಿಶನ್ ಅವರು ಜಾರ್ಖಂಡ್‌ನಲ್ಲಿ ಮುಂದಿನ ಫೆಬ್ರುವರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ರ‍್ಯಾಪಿಡ್ ಟೂರ್ನಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ.

'ಟೂರ್ನಿ ತೀವ್ರ ಪೈಪೋಟಿಯಿಂದ ಕೂಡಿತ್ತು. ರ‍್ಯಾಪಿಡ್ ವಿಭಾಗದಲ್ಲಿ ಭಾಗವಹಿಸಿದ್ದ 336 ಆಟಗಾರರಲ್ಲಿ 190 ಮಂದಿ ರೇಟೆಡ್ ಆಟಗಾರರಿದ್ದರು' ಎಂದು ಚೀಫ್ ಆರ್ಬಿಟರ್, ಹುಬ್ಬಳ್ಳಿಯ ಕೆ.ವಿ.ಶ್ರೀಪಾದ್ ತಿಳಿಸಿದರು.

ಬ್ಲಿಟ್ಸ್ ಚಾಂಪಿಯನ್‌ಷಿಪ್‌ನಲ್ಲಿ ಸಿದ್ಧಾಂತ್ ಮತ್ತು ಪ್ರಣವ್ ಎ.ಜೆ. ತಲಾ 8 ಅಂಕ ಪಡೆದರೂ, ಟೈಬ್ರೇಕ್ ಆಧಾರದಲ್ಲಿ ಪ್ರಣವ್ ಮೊದಲಿಗರಾದರು. ಪಾರ್ಥಸಾರಥಿ ಆರ್., ಅರ್ಕಸೇನ ಗುಪ್ತಾ ಮತ್ತು ಪ್ರೀತಮ್ ಶರ್ಮಾ (ತಲಾ 7.5) ಕ್ರಮವಾಗಿ ಮೂರರಿಂದ ಐದರವರೆಗಿನ ಸ್ಥಾನಗಳನ್ನು ಪಡೆದರು.



ಶರಣ್ ರಾವ್ ಮತ್ತುಬಾಲಕಿಶನ್

ಜರ್ಮನಿಗೆ ಮಣಿದ ಮಹಿಳಾ ಜೂನಿಯರ್ ತಂಡ

ಡೂಸೆಲ್‌ಡಾರ್ಫ್ (ಜರ್ಮನಿ), (ಪಿಟಿಐ): ಭಾರತ ಜೂನಿಯರ್ ಮಹಿಳಾ ತಂಡ, ಯುರೋಪ್ ಪ್ರವಾಸದ ತನ್ನ ಐದನೇ ಪಂದ್ಯದಲ್ಲಿ ಜರ್ಮನಿ ಎದುರು ಸೋಮವಾರ 4–6 ಗೋಲುಗಳಿಂದ ಸೋಲನುಭವಿಸಿತು.

ಆದರೆ, ಆರು ಗೋಲು ಬಿಟ್ಟುಕೊಟ್ಟರೂ, ಭಾರತ ಈ ಪಂದ್ಯದಲ್ಲಿ ನಾಲ್ಕು ಗೋಲುಗಳನ್ನು ಗಳಿಸುವಲ್ಲಿ ಯಶಸ್ವಿಯಾಯಿತು. ವಿಶೇಷವಾಗಿ ವಿರಾಮದ ನಂತರ ಭಾರತ ಪ್ರತಿಹೋರಾಟ ಪ್ರದರ್ಶಿಸಿತು. ಭಾರತದ ಪರ ಸಂಜನಾ ಹೊರೊ (2 ಗೋಲು), ಭಿನಿಮಾ ದಾನ್ ಮತ್ತು ಕನಿಕಾ ಸಿವಾಚ್ ಗೋಲುಗಳನ್ನು ಗಳಿಸಿದರು.

ಭಾರತ ಆಟಗಾರ್ತಿಯರು ಮೇ 29ರಂದು ನೆದರ್ಲೆಂಡ್ಸ್‌ನ ಬ್ರೆಡಾದಲ್ಲಿ ನಡೆಯಲಿರುವ ಪಂದ್ಯದಲ್ಲಿ ಡಚ್ ಕ್ಲಬ್ ತಂಡ ಆರೆಂಜ್ ರೂಡ್ ವಿರುದ್ಧ ಆಡಲಿದ್ದಾರೆ.

ಸೋಲು: ಇದೇ ತಂಡ ಯುರೋಪ್ ಪ್ರವಾಸದ ನಾಲ್ಕನೇ ಪಂದ್ಯದಲ್ಲೂ ಜರ್ಮನಿ ತಂಡಕ್ಕೆ 0–1 ಗೋಲಿನಿಂದ ಮಣಿದಿತ್ತು. ಭಾನುವಾರ ನಡೆದ ಪಂದ್ಯದಲ್ಲಿ ಭಾರತ ಕೊನೆಯ 15 ನಿಮಿಷ ಉತ್ತಮ ಹೋರಾಟ ತೋರಿದರೂ ಯಶಸ್ಸು ಸಿಗಲಿಲ್ಲ.

ಎಫ್‌ಐಎಚ್ ಪ್ರೊ ಲೀಗ್: ಆರ್ಜೆಂಟೀನಾಕ್ಕೆ ಸೋಲು

ಹರ್ಮನ್‌ಪ್ರೀತ್ ಹ್ಯಾಟ್ರಿಕ್, ಭಾರತಕ್ಕೆ ಜಯ

ಆ್ಯಂಟ್‌ವರ್ಪ್ (ಬೆಲ್ಜಿಯಂ), (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರ ಅಮೋಘ ಹ್ಯಾಟ್ರಿಕ್ ನೆರವಿನಿಂದ ಭಾರತ ತಂಡ ರೋಚಕವಾಗಿದ್ದ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಆರ್ಜೆಂಟೀನಾ ತಂಡವನ್ನು 5–4 ಗೋಲುಗಳಿಂದ ಸೋಲಿಸಿತು.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಪಂದ್ಯದ 29, 50 ಮತ್ತು 52ನೇ ನಿಮಿಷ ಗೋಲುಗಳನ್ನು ಗಳಿಸಿದರು.

ಜೊತೆಗೆ ಅರಿಜಿತ್ ಸಿಂಗ್ ಹುಂಡಲ್ (7ನೇ) ಮತ್ತು ಗುರುಪ್ರೀತ್ ಸಿಂಗ್ (18ನೇ ನಿಮಿಷ) ಅವರೂ ಒಂದೊಂದು ಗೋಲು ಗಳಿಸಿದರು. ಆರ್ಜೆಂಟೀನಾ ಪರ ಫೆಡೆರಿಕೊ ಮೊಂಜಾ (3ನೇ), ನಿಕೋಲಸ್ ಕೀನಾನ್ (24ನೇ ನಿಮಿಷ) ಮತ್ತು ತಾಡಿಯೊ ಮರುಸ್ಸಿ (54) ಮತ್ತು ಲುಕಾಸ್ ಮಾರ್ಟಿನೆಝ್ (57ನೇ) ಚೆಂಡನ್ನು ಗುರಿಮುಟ್ಟಿಸಿದರು.

ಭಾರತ ಉತ್ತಮ ಆರಂಭ ಮಾಡಿತು. ಮೊದಲ ಕ್ವಾರ್ಟರ್‌ನ ಬಹುತೇಕ ಅವಧಿಯಲ್ಲಿ ಕರಾರುವಾಕ್ ಪಾಸ್‌ಗಳೊಡನೆ ಆರ್ಜೆಂಟೀನಾ ಗೋಲು ಭಾಗದಲ್ಲಿ ದಾಳಿ ನಡೆಸಿತು. ಆದರೆ ಮೊದಲು ಗೋಲು ಗಳಿಸಿದ್ದು ಆರ್ಜೆಂಟೀನಾ ತಂಡವೇ. ಮೂರು ನಿಮಿಷಗಳ ನಂತರ ಅರಿಜಿತ್ ಹುಂಡಲ್ ಫೀಲ್ಡ್ ಗೋಲಿನ ಮೂಲಕ ಸ್ಕೋರ್ ಸಮ ಮಾಡಿದರು. ಮೊದಲ ಕ್ವಾರ್ಟರ್‌ಕೊನೆಗೆ 1–1 ಆಗಿತ್ತು.

ಎರಡನೇ ಕ್ವಾರ್ಟರ್‌ನಲ್ಲಿ ಗುರ್ಜಂತ್ ಅವರು ಫೀಲ್ಡ್ ಗೋಲಿನ ಮೂಲಕ ಭಾರತಕ್ಕೆ ಮುನ್ನಡೆ ಒದಗಿಸಿದರು. ಆದರೆ ಈ ಹಂತದಲ್ಲಿ ಸ್ವಲ್ಪ ಸಡಿಲಬಿಟ್ಟ ಕಾರಣ ಆರ್ಜೆಂಟೀನಾ ತಂಡ ಪ್ರತಿದಾಳಿ ನಡೆಸಿತು. ಚೆಂಡಿನೊಡನೆ ಮುನುಗ್ಗಿದ ಕೀನಾನ್, ಭಾರತದ ರಕ್ಷಣೆ ಆಟಗಾರರನ್ನು ವಂಚಿಸಿ ಗೋಲು ಹೊಡೆದಾಗ ಸ್ಕೋರ್ ಮತ್ತೆ 2–2 ರಲ್ಲಿ ಸಮನಾಯಿತು. ಎರಡನೇ ಕ್ವಾರ್ಟರ್ ಮುಗಿಯಲು ಕೆಲವೇ ನಿಮಿಷಗಳಿದ್ದಾಗ ಹರ್ಮನ್ ಪ್ರೀತ್ ಭಾರತಕ್ಕೆ ಮತ್ತೆ ಮುನ್ನಡೆ (3–2) ಒದಗಿಸಿದರು.

ವಿರಾಮದ ನಂತರದ (ಮೂರನೇ ಕ್ವಾರ್ಟರ್) ಆಟ ಜಿದ್ದಾಜಿದ್ದಿಯಿಂದ ಕೂಡಿತ್ತು. ಪೆನಾಲ್ಟಿ ಕಾರ್ನರ್‌ನಲ್ಲಿ ಹರ್ಮನ್‌ಪ್ರೀತ್ ಅವರ ಉತ್ತಮ ಯತ್ನಕ್ಕೆ ಎದುರಾಳಿ ಗೋಲ್‌ಕೀಪರ್ ಗೋಡೆಯಾದರು. ಇಬ್ಬರೂ ರಕ್ಷಣೆಗೆ ಒತ್ತುಕೊಟ್ಟ ಕಾರಣ ಈ ಕ್ವಾರ್ಟರ್‌ನಲ್ಲಿ ಗೋಲು ಬರಲಿಲ್ಲ.

ಅಂತಿಮ ಕ್ವಾರ್ಟರ್‌ನಲ್ಲಿ ಭಾರತ ಒತ್ತಡ ಹೇರಿ ಆರ್ಜೆಂಟೀನಾ ತಂಡ ತಪ್ಪುಗಳನ್ನು ಎಸಗುವಂತೆ ಮಾಡಿತು. ಮುಕ್ತಾಯಕ್ಕೆ 10 ನಿಮಿಷ ಇರುವಾಗ ಹರ್ಮನ್‌ಪ್ರೀತ್ ಎರಡನೇ ಗೋಲು (ಪೆನಾಲ್ಟಿ ಸ್ಟ್ರೋಕ್ ಮೂಲಕ) ಗಳಿಸಿದರು. ಎರಡು ನಿಮಿಷ ನಂತರ ತಂಡಕ್ಕೆ ಮತ್ತೊಮ್ಮೆ ಪೆನಾಲ್ಟಿ ಸ್ಟ್ರೋಕ್ ದೊರೆಯಿತು. ಇದರಲ್ಲಿ ಹರ್ಮನ್‌ಪ್ರೀತ್ ಮತ್ತೊಮ್ಮೆ ಯಶಸ್ವಿ ಆದರು.

ಆರ್ಜೆಂಟೀನಾ ಆಟದ ಅವಧಿ ಮುಕ್ತಾಯದತ್ತ ಸಾಗುತ್ತಿದ್ದಂತೆ ಅಲ್ಪಾವಧಿಯಲ್ಲಿ ತಾಡಿಯೊ ಮತ್ತು ಲುಕಾಸ್ ಗೋಲುಗಳ ಮೂಲಕ ಸೋಲಿನ ಅಂತರವನ್ನು 4–5ಕ್ಕೆ ಇಳಿಸಿತು.

ಭಾರತ ತನ್ನ ಮುಂದಿನ ಪಂದ್ಯವನ್ನು ಲಂಡನ್‌ನಲ್ಲಿ ಜೂನ್ 1ರಂದು ಜರ್ಮನಿ ವಿರುದ್ಧ ಆಡಲಿದೆ.



ಭಾರತ ಹಾಕಿ ತಂಡದ ಆಟಗಾರರ ಸಂಭ್ರಮ... ಹಾಕಿ ಇಂಡಿಯಾ ಎಕ್ಸ್ ಚಿತ್ರ